ಕರ್ನಾಟಕ ಸರ್ಕಾರ

ಕನ್ನಡ ಕಟ್ಟಿದವರು ಮಾಲೆ



# ಮ. ರಾಮಮೂರ್ತಿ

ಡಾ.ಸಿ.ಆರ್. ಗೋವಿಂದರಾಜು

ಕನ್ನಡ ಪುಸ್ತಕ ಪ್ರಾಧಿಕಾರ

ಮ. ರಾಮಮೂರ್ತಿ

ಕನ್ನಡ ಕಟ್ಟಿದವರು ಮಾಲೆ

ಪ್ರಧಾನ ಸಂಪಾದಕರು
ಡಾ. ಸಿದ್ಧಲಿಂಗಯ್ಯ

ಸಂಪಾದಕರು
ಡಾ. ಕರೀಗೌಡ ಬೀಚನಹಳ್ಳಿ

# ಮ. ರಾಮಮೂರ್ತಿ

ಡಾ. ಸಿ.ಆರ್. ಗೋವಿಂದರಾಜು

ಕರ್ನಾಟಕ ಸರ್ಕಾರ

ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು–೫೬೦ ೦೦೨

**KANNADA SEANAANI MA. RAMAMURTHI** A Monograph on Ma. Ramamurthy in Kannada Written by Dr. C.R. Govindaraju Published By ***B.H Mallikarjun,*** Administrative Officer, Kannada Pustaka Pradhikara, Kannada Bhavana, J.C.Road, Bengaluru - 560 002.

© ಈ ಆವೃತ್ತಿಯ ಗ್ರಂಥಸ್ವಾಮ್ಯ - ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

First Print : 2012
Pages : xvi + 68
Copies : 1000
Price : ₹ 50.00

ಮೊದಲ ಮುದ್ರಣ : ೨೦೧೨
ಪುಟಗಳು : xvi + ೬೮
ಪ್ರತಿಗಳು : ೧೦೦೦
ಬೆಲೆ : ₹ ೫೦.೦೦

ಕರಡು ತಿದ್ದಿದವರು : ಲೇಖಕರು

ಪ್ರಕಾಶಕರು:
**ಬಿ.ಎಚ್.ಮಲ್ಲಿಕಾರ್ಜುನ ಕೆ.ಸಿ.ಎ.ಎಸ್.**
ಆಡಳಿತಾಧಿಕಾರಿಗಳು
**ಕನ್ನಡ ಪುಸ್ತಕ ಪ್ರಾಧಿಕಾರ**
ಕನ್ನಡ ಭವನ, ಜೆ.ಸಿ.ರಸ್ತೆ
ಬೆಂಗಳೂರು-೫೬೦ ೦೦೨

ಮುದ್ರಕರು:
**ಮೆ॥ ಪ್ರಿಂಟ್ ಪಾರ್ಕ್**
೧೪೯೬/೪, ೩ನೇ ಅಡ್ಡರಸ್ತೆ, ಮರಿಯಪ್ಪನಪಾಳ್ಯ,
ಶ್ರೀರಾಂಪುರಂ ಅಂಚೆ, ಬೆಂಗಳೂರು-೫೬೦ ೦೨೧
ದೂ : ೦೮೦-೨೩೪೨೨೮೩೮

# ಕನ್ನಡ ಕಟ್ಟಿದವರು ಮಾಲೆ


ಪ್ರಧಾನ ಸಂಪಾದಕರು

**ಡಾ. ಸಿದ್ಧಲಿಂಗಯ್ಯ**

ಸಂಪಾದಕರು

ಡಾ. ಕರೀಗೌಡ ಬೀಚನಹಳ್ಳಿ

ಸಂಪಾದಕ ಮಂಡಳಿ

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ

ಶ್ರೀ ಹೊರೆಯಾಲ ದೊರೆಸ್ವಾಮಿ

ಪ್ರೊ. ಸುಕನ್ಯಾ ಮಾರುತಿ

ಡಾ. ಎಚ್. ಟಿ. ಪೋತೆ

ಶ್ರೀ ಪ್ರಕಾಶ್ ಕಂಬತ್ತಳ್ಳಿ

ಶ್ರೀ ಬಿ.ಹೆಚ್. ಮಲ್ಲಿಕಾರ್ಜುನ

ಆಡಳಿತಾಧಿಕಾರಿಗಳು

# ಪ್ರಧಾನ ಸಂಪಾದಕರ ಮಾತು

ಕನ್ನಡ ಪುಸ್ತಕ ಪ್ರಾಧಿಕಾರವು ವಿವಿಧ ಸಾಹಿತ್ಯ ಮಾಲೆಗಳಡಿಯಲ್ಲಿ ಮಹತ್ವದ ಪುಸ್ತಕಗಳನ್ನು ಪ್ರಕಟಿಸುತ್ತಾ ಬರುತ್ತಿದೆ. ಪುಸ್ತಕೋದ್ಯಮವನ್ನು ಜನಪರವಾಗಿಸುವುದರ ಜೊತೆಗೆ ಜನಸಾಮಾನ್ಯರಿಗೆ ಸುಲಭ ಬೆಲೆಯಲ್ಲಿ ಪುಸ್ತಕಗಳು ಲಭ್ಯವಾಗಬೇಕೆಂಬ ದೃಷ್ಟಿಯಿಂದ ಈ ಮಾಲೆಗಳನ್ನು ಪ್ರಾಧಿಕಾರವು ಪ್ರಾರಂಭಿಸಿರುತ್ತದೆ.

ಈ ದೃಷ್ಟಿಯಿಂದ ಪ್ರಾಧಿಕಾರವು ಕೈಗೊಂಡಿರುವ ಮಹತ್ವದ ಯೋಜನೆಗಳಲ್ಲಿ 'ಕನ್ನಡ ಕಟ್ಟಿದವರು ಮಾಲೆ' ಯೂ ಒಂದು. ಕನ್ನಡನಾಡು, ನುಡಿ, ಕಲೆ, ಸಂಸ್ಕೃತಿಯೇ ಮೊದಲಾದ ವಿವಿಧ ಕ್ಷೇತ್ರಗಳಲ್ಲಿ ಅಪಾರವಾದ ಸೇವೆಯನ್ನು ಸಲ್ಲಿಸಿಯೂ ಅಜ್ಞಾತರಾಗಿ ಉಳಿದ ವ್ಯಕ್ತಿಗಳನ್ನು ಒಳಗೊಂಡಂತೆ ಕನ್ನಡನಾಡು, ನುಡಿಯನ್ನು ಕಟ್ಟುವಲ್ಲಿ ನೆರವಾದ ಮಹನೀಯರನ್ನು ಕುರಿತು ಕಿರುಹೊತ್ತಿಗೆಗಳನ್ನು ಈ ಮಾಲೆಯಡಿ ಪ್ರಕಟಿಸಲಾಗುತ್ತಿದೆ. ಈ ಮಾಲೆಯನ್ನು ಅತ್ಯಂತ ರಚನಾತ್ಮಕವಾಗಿ ರೂಪಿಸಬೇಕೆಂಬ ದೃಷ್ಟಿಯಿಂದ ಒಂದು ಸಂಪಾದಕ ಮಂಡಳಿಯನ್ನು ಪ್ರಾಧಿಕಾರವು ರಚಿಸಿತು. ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ಶ್ರೀ ಹೊರೆಯಾಲ ದೊರೆಸ್ವಾಮಿ, ಪ್ರೊ. ಸುಕನ್ಯಾ ಮಾರುತಿ, ಡಾ. ಎಚ್. ಟಿ. ಪೋತೆ, ಶ್ರೀ ಪ್ರಕಾಶ್ ಕಂಬತ್ತಳ್ಳಿ ಇವರನ್ನು ಸದಸ್ಯರನ್ನಾಗಿಯೂ ಪ್ರಾಧಿಕಾರವು ನೇಮಿಸಿತು. ಕನ್ನಡ ನಾಡು ನುಡಿ ಕ್ಷೇತ್ರದಲ್ಲಿ ಅಪಾರ ಪರಿಶ್ರಮವನ್ನು ಹೊಂದಿರುವ ಈ ಮಹನೀಯರು ಈ ಮಾಲಿಕೆಯಡಿ ಬರೆಸಬೇಕಾದ ನೂರಾರು ವ್ಯಕ್ತಿಗಳ ಹಾಗೂ ಅವರನ್ನು ಕುರಿತು ಬರೆಯಬಹುದಾದ ಲೇಖಕರ ಪಟ್ಟಿಯನ್ನು ಪರಿಶ್ರಮವಹಿಸಿ ಸಿದ್ಧಪಡಿಸಿಕೊಟ್ಟು ಉಪಕರಿಸಿರುತ್ತಾರೆ. ಸಂಪಾದಕ ಮಂಡಳಿಯು ಸಮರ್ಥವಾಗಿ ಈ ಮಾಲಿಕೆಯ ಹಸ್ತಪ್ರತಿಗಳನ್ನು ಪರಿಶೀಲಿಸಿಕೊಟ್ಟಿರುತ್ತದೆ. ಸಂಪಾದಕರಾದ ಡಾ. ಕರೀಗೌಡ ಬೀಚನಹಳ್ಳಿ ಅವರಿಗೆ, ಸಂಪಾದಕ ಸಮಿತಿಯ ಸದಸ್ಯರಿಗೆ ಹಾಗೂ ಎಲ್ಲ ಲೇಖಕರಿಗೆ ನನ್ನ ಕೃತಜ್ಞತೆಗಳು.

ಈ ಮಾಲೆಯ ಪುಸ್ತಕಗಳನ್ನು ಹೊರತರುವಲ್ಲಿ ಪ್ರಾರಂಭದಿಂದ ವಿಶೇಷ ಆಸಕ್ತಿ ವಹಿಸಿದ ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ಬಿ.ಹೆಚ್. ಮಲ್ಲಿಕಾರ್ಜುನ ಅವರಿಗೆ, ಆಪ್ತಕಾರ್ಯದರ್ಶಿಗಳಾದ ಶ್ರೀ ಕೆ. ಮುಕುಂದನ್ ಅವರಿಗೆ,

ಶ್ರೀ ಜೆ. ಎನ್. ಶಾಮರಾವ್ ಅವರಿಗೆ ಹಾಗೂ ಪ್ರಾಧಿಕಾರದ ಎಲ್ಲಾ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರಿಗೆ ಆಭಾರಿಯಾಗಿದ್ದೇನೆ. ಈ ಮಾಲೆಯ ಎಲ್ಲಾ ಕೃತಿಗಳನ್ನು ಕನ್ನಡ ವಾಚಕರು ತುಂಬುಹೃದಯದಿಂದ ಸ್ವಾಗತಿಸುತ್ತಾರೆಂದು ಆಶಿಸುತ್ತೇನೆ.

(ಡಾ. ಸಿದ್ಧಲಿಂಗಯ್ಯ)
ಅಧ್ಯಕ್ಷರು

# ಸಂಪಾದಕರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಪುಸ್ತಕ ಪ್ರಾಧಿಕಾರವು 'ಕನ್ನಡ ಕಟ್ಟಿದವರು ಮಾಲೆ'ಯಡಿಯಲ್ಲಿ ಕನ್ನಡ ನಾಡು, ನುಡಿ, ಸಾಹಿತ್ಯ, ಶಿಕ್ಷಣ, ಕಲೆ ಸಂಸ್ಕೃತಿ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಅಪರೂಪದ ವ್ಯಕ್ತಿಗಳ ಜೀವನ, ಸಾಧನೆ, ವ್ಯಕ್ತಿತ್ವ ಮತ್ತು ಹೋರಾಟದ ಕಥನವನ್ನು ಕುರಿತು ನುರಿತ ಲೇಖಕರಿಂದ ಕಿರುಹೊತ್ತಿಗೆಗಳನ್ನು ಬರೆಸಿ ಪ್ರಕಟಿಸಬೇಕೆಂದು ತೀರ್ಮಾನಿಸಿತು. ಈ ನಿಟ್ಟಿನಲ್ಲಿ 'ಸಂಪಾದಕ ಸಮಿತಿ'ಯೊಂದನ್ನು ರಚಿಸಿ ನಮ್ಮನ್ನು ಆಹ್ವಾನಿಸಿದಾಗ ಈ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಸಂತೋಷದಿಂದ ನಾವು ಒಪ್ಪಿಕೊಂಡೆವು. ಅನಂತರ ಈ ಸಮಿತಿಯ ಸೇರಿ ಹಲವು ಸಭೆಗಳನ್ನು ನಡೆಸಿ ಈ ಮಾಲೆಯ ಪುಸ್ತಕಗಳ ಸ್ವರೂಪ, ಬರೆಸಬೇಕಾದ ವ್ಯಕ್ತಿಗಳ ಹಾಗೂ ಬರೆಯುವ ಲೇಖಕರ ಪಟ್ಟಿ ಇದನ್ನೆಲ್ಲಾ ಸಿದ್ಧಪಡಿಸಲಾಯಿತು. ಈ ಮಾಲೆಯ ಪುಸ್ತಕಗಳು ಮುಖ್ಯವಾಗಿ ಈ ಕೆಳಕಂಡ ರೀತಿಯಲ್ಲಿ ಮೂರು ಮುಖ್ಯ ವಿಷಯಗಳನ್ನು ಒಳಗೊಂಡಿರಬೇಕೆಂದು ತೀರ್ಮಾನಿಸಿ ಕಾರ್ಯೋನ್ಮುಖರಾದೆವು.

೧. ಆಯಾ ವ್ಯಕ್ತಿಗಳ ಬಾಲ್ಯ, ವಿದ್ಯಾಭ್ಯಾಸ ಕೌಟುಂಬಿಕ ಹಿನ್ನೆಲೆ–ವಿವರಗಳು, ಗಣ್ಯರೊಡನೆ ಒಡನಾಟ, ಪಡೆದ ಪ್ರೇರಣೆ–ಪ್ರಭಾವಗಳು, ಭಾಗವಹಿಸಿದ ಚಳುವಳಿ–ಹೋರಾಟಗಳು, ಸಂಘಟನೆಗಳು, ನಾಡು–ನುಡಿ–ಸಾಹಿತ್ಯ–ಸಂಸ್ಕೃತಿಗೆ ಸಲ್ಲಿಸಿದ ಸೇವೆಗಳು, ಮಾನವೀಯ ಗುಣ–ನಡತೆ ಇತ್ಯಾದಿ ವಿವರಗಳನ್ನು ಅಡಕವಾಗಿ ಈ ಪುಸ್ತಕಗಳಲ್ಲಿ ಅಳವಡಿಸಿ ಬರೆಯಬೇಕು.

೨. ಆಯಾ ವ್ಯಕ್ತಿಗಳ ಜೀವನ ಹಾಗೂ ಸಾಧನೆಗಳನ್ನು ದಾಖಲು ಮಾಡುವಾಗ ಅಧಿಕೃತ ದಾಖಲೆಗಳನ್ನು ಅವಲಂಬಿಸಿ ಬರೆಯಬೇಕು; ಆದಷ್ಟು ಕ್ಷೇತ್ರಕಾರ್ಯ ಮಾಡಿ ಮಾಹಿತಿಗಳನ್ನು ಕಲೆಹಾಕಿ ವಸ್ತುನಿಷ್ಠವಾಗಿ ನಿರೂಪಿಸಬೇಕು.

೩. ಎಲ್ಲಾ ಬಗೆಯ ಓದುಗರನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಪುಸ್ತಕಗಳನ್ನು ಸರಳವಾಗಿ, ಸಂಕ್ಷಿಪ್ತವಾಗಿ ಮತ್ತು ಸ್ಪಷ್ಟವಾಗಿ ಬರೆಯಬೇಕು.

ಹಲವಾರು ಜನ ಎಲೆಮರೆಯ ಕಾಯಂತೆ, ಕರ್ನಾಟಕದ ಏಳ್ಗೆಗಾಗಿ ದುಡಿದು ಕಣ್ಮರೆಯಾಗಿದ್ದಾರೆ. ಆದರೆ ಅಂತಹವರ ಬಗ್ಗೆ ಸಾಹಿತ್ಯ ಚರಿತ್ರೆಯಲ್ಲಿ ಒಂದು

ಸಣ್ಣ ದಾಖಲೆಯೂ ಸಿಗುವುದಿಲ್ಲ. ಈ ನಿಟ್ಟಿನಲ್ಲಿ ಶ್ರಮಿಸಿದ ಅನೇಕ ಜನರ ಹೋರಾಟದ ಕಥೆ ನೇಪಥ್ಯಕ್ಕೆ ಸರಿದು ಹೋಗಿದೆ. ಅಂತಹ ವ್ಯಕ್ತಿಗಳ ಚರಿತ್ರೆಯನ್ನು ಇಂದು ಹುಡುಕಿ ಹೊರತೆಗೆದು ದಾಖಲಿಸಿ ಅವರ ಸೇವೆಯನ್ನು ಕೃತಜ್ಞತೆಯಿಂದ ಸ್ಮರಿಸಬೇಕಾಗಿದೆ. ಇಂತಹವರ ಹೋರಾಟದ ಜೀವನವು ಮುಂದಿನ ಪೀಳಿಗೆಗೆ ಆದರ್ಶವೂ ಅನುಕರಣೀಯವೂ ಆಗಬೇಕಾಗಿದೆ. ಈ ಪುಸ್ತಕಗಳಲ್ಲಿ ದೊಡ್ಡಗ್ರಂಥಗಳಲ್ಲಿ ಹೇಳಬಹುದಾದ ವಿವರಗಳೆಲ್ಲವನ್ನೂ ಹೇಳಲಾಗದಿದ್ದರೂ ಸೂಕ್ಷ್ಮವಾಗಿ, ಸಂಕ್ಷಿಪ್ತವಾಗಿ ಮತ್ತು ಪರಿಣಾಮಕಾರಿಯಾಗಿ ಹೇಳಲಾಗಿದೆ. ಈ ಪುಸ್ತಕಗಳನ್ನು ಓದುವಾಗ ಇವರ ವ್ಯಕ್ತಿತ್ವ, ಸಾಧನೆ, ಹೋರಾಟ, ವಿಚಾರಲಹರಿ, ಆಸಕ್ತಿಗಳು ಇನ್ನಷ್ಟು ಸ್ಫುಟಗೊಳ್ಳುತ್ತಾ ಹೋಗುತ್ತವೆ; ಇವರ ವಿಷಯದಲ್ಲಿ ಪ್ರೀತ್ಯಾದರಗಳು ಇಮ್ಮಡಿಗೊಳ್ಳುವುದರ ಜೊತೆಗೆ ಕನ್ನಡ ಪುನರುಜ್ಜೀವನದ ಸಂದರ್ಭಗಳು ಹಾಗೂ ಸವಾಲುಗಳು ಸ್ಫುಟಗೊಳ್ಳುತ್ತವೆ. ಇವರು ಬರೀ ಕನ್ನಡ ನಾಡು, ನುಡಿ, ಸಾಹಿತ್ಯ ಕಟ್ಟಿದವರು ಮಾತ್ರವಲ್ಲ; ಇವರು ಕನ್ನಡ ಸಂಸ್ಕೃತಿಯ ನಿರ್ಮಾಪಕರೂ ಹೌದು. ಕನ್ನಡ ಸಂಸ್ಕೃತಿಯ ಬಗೆಗೆ ಮತ್ತು ಕನ್ನಡಿಗರ ಬದುಕಿನ ಬಗೆಗೆ ಕೆಲಸ ಮಾಡುವ ಯಾರಿಗಾದರೂ ಈ ವ್ಯಕ್ತಿಗಳು ಪ್ರೇರಕಶಕ್ತಿಗಳಾಗಿದ್ದಾರೆ.

ಮೊದಲಿಗೆ ಇಂತಹ ನೂರು ಜನ ಮಹನೀಯರು ಬಗ್ಗೆ ಕಿರುಹೊತ್ತಿಗೆಗಳನ್ನು ಬರೆಸಬೇಕೆಂದು ಸಮಿತಿಯ ಪಟ್ಟಿ ಮಾಡಿ ಬರೆದುಕೊಡುವಂತೆ ನೂರು ಜನ ನುರಿತ ಲೇಖಕರನ್ನು ಗುರುತಿಸಿ ಅವರಿಗೆ ಪತ್ರ ಬರೆಯಲಾಯಿತು. ಆದರೆ ಬರೆಯುವವರು ಸಿಗುವುದು ಬಹಳ ಕಷ್ಟ ಎಂಬ ಸಂಗತಿ ನಂತರ ನಮಗೆ ಮನವರಿಕೆಯಾಯಿತು. ಕೊನೆಗೆ ಈ ಮಾಲೆಗೆ ಇನ್ನೂ ಕೆಲವರು ಬರೆಯುತ್ತಿರುವುದಾಗಿ ತಿಳಿಸಿದ್ದರೂ, ಬರೆದು ಬಂದಂತಹ ಹಸ್ತಪ್ರತಿಗಳು ೩೫ ಮಾತ್ರ. ಅವುಗಳನ್ನೆಲ್ಲಾ ಸಂಪಾದಕ ಮಂಡಲಿಯ ಸದಸ್ಯರೆಲ್ಲಾ ಓದಿ, ಪರಿಶೀಲಿಸಿ, ತಿದ್ದುಪಡಿಗಳಿದ್ದರೆ ಲೇಖಕರಿಗೆ ಅವುಗಳನ್ನು ಸೂಚಿಸಿ ನಂತರ ಹಸ್ತಪ್ರತಿಗಳನ್ನು ಮುದ್ರಣಕ್ಕೆ ಅಂತಿಮಗೊಳಿಸಲಾಯಿತು.

ಈ ಯೋಜನೆಯ ಪ್ರತಿಯೊಂದು ಹಂತದಲ್ಲಿಯೂ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಸಿದ್ಧಲಿಂಗಯ್ಯ ಅವರು ತಮ್ಮ ಸಲಹೆ, ಸಹಕಾರವನ್ನು ನೀಡಿದ್ದಾರೆ. ಕನ್ನಡ ಪುಸ್ತಕ ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ಬಿ. ಹೆಚ್. ಮಲ್ಲಿಕಾರ್ಜುನ ಅವರು, ಹಿಂದಿನ ಶ್ರೀ ಅಶೋಕ ಎನ್. ಚಲವಾದಿ ಅವರು, ಅಧ್ಯಕ್ಷರ ಆಪ್ತಕಾರ್ಯದರ್ಶಿಗಳಾದ ಶ್ರೀ ಕೆ ಮುಕುಂದನ್ ಅವರು ಹಾಗೂ ಅವರ ಸಿಬ್ಬಂದಿ ಇಂತಹ ಜವಾಬ್ದಾರಿಯನ್ನು ವಹಿಸಿದ ಕನ್ನಡ ಪುಸ್ತಕ ಪ್ರಾಧಿಕಾರದ ಗೌರವಾನ್ವಿತ ಸದಸ್ಯರು–ಇವರೆಲ್ಲರ ಸಲಹೆ, ಸಹಕಾರ ನಮಗೆ ದೊರೆತಿರುತ್ತದೆ. ಇದರ ಸಂಪಾದಕ

ಸಮಿತಿ ಸದಸ್ಯರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ಶ್ರೀ ಹೊರೆಯಾಲ ದೊರೆಸ್ವಾಮಿ, ಶ್ರೀಮತಿ ಸುಕನ್ಯಾ ಮಾರುತಿ, ಡಾ. ಹೆಚ್.ಟಿ. ಪೋತೆ, ಶ್ರೀ ಪ್ರಕಾಶ್ ಕಂಬತ್ತಹಳ್ಳಿ–ಇವರೆಲ್ಲರ ಸಲಹೆ, ಸಹಕಾರ ಹಾಗೂ ಸಾಮೂಹಿಕ ಪ್ರಯತ್ನದ ಫಲವಾಗಿ ಈ ಕೃತಿಗಳು ಸಕಾಲದಲ್ಲಿ ಪ್ರಕಟವಾಗಲು ಕಾರಣವಾಗಿದೆ. ಹೀಗೆ ಇಂತಹ ಒಂದು ಅಪರೂಪದ ಯೋಜನೆಯೊಂದನ್ನು ಅನುಷ್ಠಾನಗೊಳಿಸಲು ನೆರವಾದ ಎಲ್ಲರಿಗು ಸಂಪಾದಕ ಸಮಿತಿಯ ಪರವಾಗಿ ಕೃತಜ್ಞತೆಗಳು.

ಡಾ. ಕರೀಗೌಡ ಬೀಚನಹಳ್ಳಿ
ಸಂಪಾದಕ

# ಲೇಖಕರ ಮಾತು

'ಕನ್ನಡ ಕಟ್ಟಿದವರು' ಮಾಲೆಯಡಿಯಲ್ಲಿ ಅನೇಕ ಮಹನೀಯರನ್ನು ನೆನಪು ಮಾಡಿಕೊಳ್ಳುವ ಕೆಲಸವನ್ನು ಪುಸ್ತಕ ಪ್ರಾಧಿಕಾರ ಮಾಡುತ್ತಿರುವುದು ಸಂತಸದ ಸಂಗತಿ. ನಾಡು, ನುಡಿ, ಸಂಸ್ಕೃತಿ ವಿಚಾರಗಳಲ್ಲಿ ತಮ್ಮನ್ನು ತಾವು ತೇದುಕೊಂಡವರು ಅನೇಕ. ಅವರೆಲ್ಲರನ್ನೂ ಒಂದೆಡೆ ಪರಿಶೀಲಿಸಿ ಅಧ್ಯಯನಕ್ಕೆ ಒಳಪಡಿಸುವ ಕೆಲಸ ಸುಲಭದ್ದೇನಲ್ಲ. ಇಂಥ ಮಹತ್ವದ ಕೆಲಸಕ್ಕಾಗಿ ನನ್ನನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಈ ಕಾರಣಕ್ಕಾಗಿ ಹಿರಿಯರೂ, ಆತ್ಮೀಯರೂ ಆದ ಕವಿ ಸಿದ್ಧಲಿಂಗಯ್ಯ ಮೇಷ್ಟ್ರಿಗೆ ಧನ್ಯವಾದಗಳು. ಇನ್ನೊಂದು ಮುಖ್ಯ ಸಂಗತಿಯೇನೆಂದರೆ ಈ ಮಾಲೆಯಲ್ಲಿ ಸೂಕ್ತರಾದವರನ್ನು ಆಯ್ಕೆ ಮಾಡಿಕೊಳ್ಳುವಲ್ಲಿ ಸಂಪಾದಕರೂ, ಹಿರಿಯ ಕತೆಗಾರರೂ ಆದ ಡಾ. ಕರೀಗೌಡ ಬೀಚನಹಳ್ಳಿ ಅವರ ಪಾತ್ರವೂ ದೊಡ್ಡದು. ಅವರಿಗೂ ನನ್ನ ಧನ್ಯವಾದಗಳು.

ನಾಡನ್ನು ರೂಪಿಸಿದ ಚಿಂತಕರು, ಹೋರಾಟಗಾರರು, ವಿದ್ವಾಂಸರು ಅನೇಕ. ಅಂಥ ಮಹನೀಯರಲ್ಲಿ ಒಬ್ಬರು ಕನ್ನಡ ಚಳವಳಿಗಾರ ಮ. ರಾಮಮೂರ್ತಿ. ಹುಟ್ಟಿನಿಂದ ಅಂತ್ಯದವರೆಗೂ ಕನ್ನಡಕ್ಕಾಗಿಯೇ ಮೀಸಲಿಟ್ಟ ಜೀವ ರಾಮಮೂರ್ತಿ ಅವರದು. ಆದ್ದರಿಂದಲೇ ಮುಂಚೂಣಿಯಲ್ಲಿರುತ್ತಿದ್ದ ಅವರನ್ನು ಕನ್ನಡಿಗರು ಪ್ರೀತಿಯಿಂದ 'ಕನ್ನಡ ಸೇನಾನಿ' ಎಂತಲೇ ಕರೆಯುತ್ತಿರುವುದು. ನಾಡಿಗೆ ಬೇಕಾದ ಬಹುಮುಖ್ಯ ಅನನ್ಯತೆಯ ಕುರುಹು ಕನ್ನಡ ಬಾವುಟ. ಈ ಹೊತ್ತಿನ ಹಳದಿ ಕೆಂಪಿನ ಬಾವುಟವನ್ನು ನಾಡಿಗೆ ನೀಡಿದ ಕೀರ್ತಿ ಮ. ರಾಮಮೂರ್ತಿ ಅವರಿಗೆ ಸಲ್ಲುತ್ತದೆ. ಇದರ ಚರಿತ್ರೆಯನ್ನು ದಾಖಲಿಸುವುದರ ಜೊತೆಗೆ ಅವರ ಬದುಕಿನ ವಿಭಿನ್ನತೆಗಳು ಕನ್ನಡದೊಂದಿಗೆ ಹೇಗೆ ಮೇಳೈವಿಸಿಕೊಂಡಿದ್ದವು ಎಂಬುದನ್ನು ಇಲ್ಲಿ ಪರಿಶೀಲಿಸಲಾಗಿದೆ. ಅಂತೆಯೇ 'ಮೊದಲ ಕನ್ನಡ ರಾಜ್ಯೋತ್ಸವ'ದ ರೂವಾರಿಗಳು ಸಹ ಅವರೇ. ಭಿನ್ನ ಭಾಷಿಕರ ಉಪಟಳವನ್ನು ಸಹಿಸಿಕೊಳ್ಳದ ಕಡಕ್ ಕನ್ನಡ ಹೋರಾಟಗಾರರು ಮ. ರಾಮಮೂರ್ತಿ. ಅವರ ಚಿಂತನೆ, ಚಟುವಟಿಕೆಗಳು ಈ ಹೊತ್ತಿನ ಅನೇಕ ಕನ್ನಡ ಚಳವಳಿಗಾರರಿಗೆ ಹಾಗೂ ಸಂಘಟನೆಗಳಿಗೆ ಅರಿವಿಗೇ ಬಂದಿಲ್ಲ. ಅಂಥ ಕೆಲಸವನ್ನು ಪ್ರಾಧಿಕಾರ ಈ ಕೃತಿಯನ್ನು

ಪ್ರಕಟಿಸಿ ಕೊರತೆಯನ್ನು ನೀಗಿಸಿದೆ. ಈ ಕೆಲಸಕ್ಕಾಗಿ ನನ್ನ ಅಳಿಲು ಸೇವೆಯನ್ನು ಬಯಸಿದ ಪ್ರಾಧಿಕಾರದ ಎಲ್ಲ ಪದಾಧಿಕಾರಿಗಳಿಗೆ, ಸದಸ್ಯರಿಗೆ, ಸಿಬ್ಬಂದಿಗೆ ಧನ್ಯವಾದಗಳು.

ಕನ್ನಡ-ಕನ್ನಡಿಗ-ಕರ್ನಾಟಕ ಈ ಪರಿಕಲ್ಪನೆಗಳ ಹಿನ್ನೆಲೆಗಳಲ್ಲಿ ಚಿಂತನೆ, ಕೆಲಸ ಮಾಡಿದವರು ಮ. ರಾಮಮೂರ್ತಿ ಅವರು. ಅದೇ ರೀತಿಯಲ್ಲಿ ತಮ್ಮದೇ ಆದ ಕಾಯಕದ ಮೂಲಕ ಅಪ್ಪಟ ಕನ್ನಡತನವನ್ನು ಮೆರೆದವರು ನನ್ನ ಗುರುಗಳೂ, ಹಿತಚಿಂತಕರೂ ಆಗಿದ್ದ ದಿವಂಗತ ಪ್ರೊ. ಕಿ.ರಂ. ನಾಗರಾಜ ಅವರು. ಅವರ ಪ್ರಭಾವ-ಪರಿಣಾಮಗಳ ಫಲಿತವೇ ನಾನು ಹಾಗೂ ನನ್ನ ಬರೆಹಗಳು. ಅಂತೆಯೇ ನಾಡಿನ ಹಿರಿಯ ಚಿಂತಕರಾದ ಡಾ. ಚಂದ್ರಶೇಖರ ಕಂಬಾರ, ಡಾ. ಯು.ಆರ್. ಅನಂತಮೂರ್ತಿ, ಡಾ. ಕೆ.ವಿ. ನಾರಾಯಣ ಮೊದಲಾದವರನ್ನು ನೆನಪು ಮಾಡಿಕೊಳ್ಳದೆ ಇರಲಾರೆ. ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಕರಿಸುತ್ತಿರುವ ಎಲ್ಲರಿಗೂ ನನ್ನ ಧನ್ಯವಾದಗಳು. ಸಂದರ್ಶನಕ್ಕೆ ಸಹಕರಿಸಿದ ಪ್ರತಿಯೊಬ್ಬರಿಗೂ ವಂದನೆಗಳು. ಅದರಲ್ಲೂ ಮ. ರಾಮಮೂರ್ತಿ ಅವರ ಶ್ರೀಮತಿಯವರಾದ ಕಮಲಮ್ಮನವರ ಸಹಕಾರವನ್ನು ನೆನೆಯದೆ ಇರುವಂತಿಲ್ಲ. ಅವರಿಗೂ, ಮ. ರಾಮಮೂರ್ತಿ ಅವರ ಸೋದರ-ಸೋದರಿಯರಿಗೂ ನನ್ನ ಧನ್ಯವಾದಗಳು.

ಡಾ. ಸಿ.ಆರ್. ಗೋವಿಂದರಾಜು

# ಪರಿವಿಡಿ


೧. ಪ್ರವೇಶ / ೧
೨. ಮನೆತನದ ಹಿನ್ನೆಲೆ / ೨
೩. ಬಾಲ್ಯ ಹಾಗೂ ವಿದ್ಯಾರ್ಥಿ ಜೀವನ / ೩
೪. ಪತ್ರಿಕೋದ್ಯಮದ ಬದುಕು / ೬
೫. ಪತ್ತೇದಾರಿ ರಾಮಮೂರ್ತಿ / ೭
೬. ಕನ್ನಡ ಚಳವಳಿಗೆ ಪ್ರವೇಶ / ೮
೭. ಕನ್ನಡ ಯುವಜನ ಸಭಾ / ೯
೮. 'ಸಭಾ'ದ ಮೊದಲ ಅಧಿವೇಶನ / ೧೦
೯. ಕರ್ನಾಟಕ ಸಂಯುಕ್ತರಂಗ / ೧೧
೧೦. ಮೊದಲ ಕನ್ನಡ ರಾಜ್ಯೋತ್ಸವ / ೧೨
೧೧. ಕನ್ನಡ ಚಲನಚಿತ್ರರಂಗ ಹಾಗೂ ಮ. ರಾಮಮೂರ್ತಿ / ೧೩
೧೨. ಹಿರಿಯೂರಿನ ಬಾವುಟದ ಘಟನೆ / ೧೬
೧೩. ತಮಿಳರ ಹಲ್ಲೆಗಳು / ೧೭
೧೪. ಕನ್ನಡ ಬಾವುಟ ಹಾಗೂ ಮ. ರಾಮಮೂರ್ತಿ / ೧೯
೧೫. ಗಡಿ ವಿಚಾರಗಳು / ೨೧
೧೬. 'ಕನ್ನಡ ಪಕ್ಷ'ದ ನೇತಾರ / ೨೩
೧೭. ಮ. ರಾಮಮೂರ್ತಿ ಅವರ ಆಕಸ್ಮಿಕ ಸಾವು / ೨೪
೧೮. ಮ. ರಾಮಮೂರ್ತಿ ಅವರ ಸಾಹಿತ್ಯ ಚಿಂತನೆ / ೨೫
೧೯. ಮ. ರಾಮಮೂರ್ತಿ ಅವರ ಕೃತಿಗಳು / ೨೮
೨೦. 'ಕನ್ನಡಿಗರ ನ್ಯಾಯ' / ೩೧
೨೧. 'ಕನ್ನಡ ಚಳುವಳಿ' / ೪೧

೨೨. 'ಮೈಕೋ ಕನ್ನಡ ಕಾರ್ಮಿಕರ ದುರವಸ್ಥೆ' / ೪೫
೨೩. 'ರಜಾಕಾರ್ ಗುಪ್ತಾಚಾರ' / ೫೨
ಅನುಬಂಧಗಳು / ೫೯
೧. ಆಕಾರ ಹಾಗೂ ಪೂರಕ ಸಾಹಿತ್ಯ / ೬೧
೨. ಸಂದರ್ಶನಗಳು / ೬೪
೩. ದಾಖಲೆಗಳು / ೬೫
೪. ಶ್ರೀಮತಿ ಕಮಲಮ್ಮನವರೊಂದಿಗೆ ಸಂದರ್ಶನ / ೬೬

# ಕನ್ನಡ ಸೇನಾನಿ ಮ. ರಾಮಮೂರ್ತಿ

## ೧. ಪ್ರವೇಶ

'ಸುವರ್ಣ ಕರ್ನಾಟಕ'ದ ಹಾದಿಯನ್ನು ವಿಮರ್ಶಾತ್ಮಕವಾಗಿ ತಿರುಗಿ ನೋಡಬೇಕಾದ ಜರೂರು ಕನ್ನಡಿಗರದು. ಈ ಹೊತ್ತು ನಾವು ಸವೆಸಿರುವ ಹಾದಿಯನ್ನೊಮ್ಮೆ ದಿಟ್ಟಿಸಿ ನೋಡಿದಾಗ ಕೇವಲ ಹೆಮ್ಮೆಯ ಸಂಗತಿಗಳಷ್ಟೇ ಕಾಣುತ್ತಿಲ್ಲ. ಸವಾಲಿನ ಸಂಗತಿಗಳೂ ಕಂಡುಬರುತ್ತಿವೆ. ೧೯೫೬ ರಿಂದೀಚೆಗೆ ಆದಂಥ ಸ್ಥಿತ್ಯಂತರಗಳು ಅನೇಕ ಮಹನೀಯರ ದೂರದೃಷ್ಟಿಯ ಪ್ರತೀಕವಾಗಿ ನೆಲೆ ನಿಂತಿವೆ. ಅಂಥ ಪ್ರತೀಕಗಳಲ್ಲಿ ಒಬ್ಬರು ಕನ್ನಡ ಚಳವಳಿಗಾರ ಮ. ರಾಮಮೂರ್ತಿ. ಒಂದೂ ಕನ್ನಡ ಸಂಘಟನೆಯಿಲ್ಲದ ಸನ್ನಿವೇಶದಲ್ಲಿ ಕನ್ನಡಿಗರನ್ನು ಒಂದು ಗೂಡಿಸಿದ ಕೀರ್ತಿ ಅವರದು. ಇಂದು ನಾಡಿನಾದ್ಯಂತ ಅಸಂಖ್ಯಾತ ಕನ್ನಡ ಸಂಘಟನೆಗಳು ಕ್ರಿಯಾಶೀಲವಾಗಿದ್ದರೆ, ಆ ಶ್ರೇಯಸ್ಸು ಮ. ರಾಮಮೂರ್ತಿ ಅವರಿಗೇ ಸಲ್ಲುತ್ತದೆ. ಅನೇಕ ಕನ್ನಡ ಹೋರಾಟಗಾರರ ನಡುವೆ ಮ. ರಾಮಮೂರ್ತಿ ಅವರು ಪ್ರಮುಖರು. ಹೇಗೆ ಪ್ರಮುಖರು ಎಂಬುದನ್ನು ಪರಿಶೀಲಿಸುವುದೇ ಈ ಕೃತಿಯ ಆಶಯ.

ಎಲ್ಲ ವಿಭಜಿತ ಕನ್ನಡ ಭೂಪ್ರದೇಶಗಳಲ್ಲಿನ ಕನ್ನಡಿಗರು ೧೯೫೬ರ ನವೆಂಬರ್ ಒಂದರಂದು ಒಂದೇ ಆಡಳಿತದ ಪರಿಧಿಗೆ ಬಂದದ್ದು ಚರಿತ್ರೆಗೆ ಸೇರಿಹೋದ ಸಂಗತಿ. ಹೀಗೆ ಒಂದುಗೂಡಿದ ಕನ್ನಡಿಗರಲ್ಲಿ ಅನೇಕ ರೀತಿಯ ಕನಸುಗಳು ಆಶೋತ್ತರಗಳು ಇದ್ದವು. ಇವುಗಳ ಈಡೇರಿಕೆ ಅಷ್ಟು ಸುಲಭದ ಮಾತಾಗಿರಲಿಲ್ಲ. ನಾಡಿನ ಹೆಸರನ್ನು 'ಕರ್ನಾಟಕ' ಎಂದು ಕರೆಯುವ ಆಶಯವೆ ಅಂದು ಈಡೇರದೆ ಹೋದದ್ದು ಕನ್ನಡಿಗರಲ್ಲಿ ಭ್ರಮನಿರಸನವನ್ನು ಉಂಟು ಮಾಡಿತ್ತು. ಇದರೊಂದಿಗೆ ಎಲ್ಲ ಪ್ರದೇಶಗಳಲ್ಲಿನ ಕನ್ನಡಿಗರ ಪ್ರಗತಿ, ನಾಡಿನ ಅಭಿವೃದ್ಧಿ ಯೋಜನೆಗಳ ಸಾಕಾರಕ್ಕೆ ಶ್ರಮಿಸಬೇಕಿತ್ತು. ಸರ್ಕಾರವು ಇವೆಲ್ಲದರ ಜೊತೆಗೆ ನಮಗೆ ಸೇರಬೇಕಿದ್ದ ಕನ್ನಡ ಪ್ರದೇಶಗಳ ಕಡೆಗೂ ಗಮನಹರಿಸುವುದು ಅನಿವಾರ್ಯ ಆಯಿತು. ಇಂಥ ಸನ್ನಿವೇಶದಲ್ಲಿಯೆ ಕನ್ನಡೇತರರ ಪ್ರಾಬಲ್ಯ, ಒತ್ತಡ, ಹುನ್ನಾರಗಳು ಹೆಚ್ಚಾಗತೊಡಗಿದ್ದವು. ಅದರಲ್ಲೂ ನಾಡಿನ ರಾಜಧಾನಿ

ಬೆಂಗಳೂರಿನಲ್ಲಿ ಕನ್ನಡದ ಪರಿಸರವೆ ಇರಲಿಲ್ಲ. ಸಾಂಸ್ಕೃತಿಕವಾಗಿ ನಾಡನ್ನು ಪ್ರತಿನಿಧಿಸಬೇಕಿದ್ದ ಬೆಂಗಳೂರು ಕನ್ನಡದ ವಾತಾವರಣದಿಂದ ವಂಚಿತವಾಗಿತ್ತು. ಇಂಥ ಸ್ಥಿತಿ-ಗತಿಗಳನ್ನು ಬದಲಿಸಲಾಗದ ಮೌನ ಕನ್ನಡಿಗರದು. ಕನ್ನಡದಲ್ಲಿ ಮಾತನಾಡಿದರೆ, ಕನ್ನಡ ದಿನಪತ್ರಿಕೆಗಳನ್ನು ಓದಿದರೆ ಅವಮಾನಕ್ಕೆ ಒಳಗಾಗಬೇಕಿದ್ದ ಪರಿಸ್ಥಿತಿ ನಿರ್ಮಾಣಗೊಂಡಿತ್ತು. ಬಸ್ಸು, ರೈಲ್ವೆ ನಿಲ್ದಾಣದಂಥ ಕಡೆಗಳಲ್ಲಿ ಕನ್ನಡದಲ್ಲಿ ಮಾತನಾಡಿದರೆ ಕನ್ನಡೇತರರಿಂದ ಹೀನಾಯವಾಗಿ ಅಪಮಾನಿತರಾಗುತ್ತಿದ್ದುದೇ ಹೆಚ್ಚು. ಅದರಲ್ಲೂ ತಮಿಳರ ಪ್ರಾಬಲ್ಯ ಹೆಚ್ಚು ಇದ್ದಂಥ ಬೆಂಗಳೂರಿನ ಕೇಂದ್ರ ತಾಣದಲ್ಲಿ ಕನ್ನಡಿಗರು ಗೇಲಿ, ಕೀಟಲೆಗಳಿಗೆ ಒಳಗಾಗಿದ್ದರು. ಈ ಬಗೆಯ ಸಮಸ್ಯೆಗಳನ್ನು ಬಗೆಹರಿಸಿ ಕನ್ನಡದ ವಾತಾವರಣವನ್ನು ಮೂಡಿಸಲು ಹುಟ್ಟಿಕೊಂಡಿದ್ದೇ 'ಕನ್ನಡ ಚಳವಳಿ'. ಕನ್ನಡ ಚಳವಳಿಯು ನಾಡು, ನುಡಿ, ಸಾಹಿತ್ಯ, ಸಂಸ್ಕೃತಿಗಳ ಅರಿವನ್ನು ಕನ್ನಡಿಗರಲ್ಲಿ ಪ್ರೇರೇಪಿಸಿ ಎಚ್ಚರವನ್ನುಂಟು ಮಾಡಲು ಹುಟ್ಟಿಕೊಂಡಿತು. ಈ ಆಶಯವನ್ನು ಸಾಕಾರಗೊಳಿಸಲು ಆರಂಭಿಕ ಯತ್ನಗಳನ್ನು ಮಾಡಿದವರು ಕೆಲವೇ ಮಂದಿ. ಅವರಲ್ಲಿ ಕೋಣಂದೂರು ಲಿಂಗಪ್ಪ, ಅ.ನ. ಕೃಷ್ಣರಾವ್, ಮ. ರಾಮಮೂರ್ತಿ, ಮೈ.ಸು. ನಟರಾಜ್, ಮೈ.ಸು. ಶೇಷಗಿರಿರಾವ್, ನಾಡಿಗೇರ ಕೃಷ್ಣರಾವ್, ಕರ್ಲಮಂಗಲಂ ಶ್ರೀಕಂಠಯ್ಯ ಮೊದಲಾದವರು ಪ್ರಮುಖರು. ೧೯೬೦ರ ದಶಕದ ಮೊದಲ ವರುಷಗಳಲ್ಲಿ 'ಕನ್ನಡ ಚಳವಳಿ'ಗೆ ನಾಂದಿ ಹಾಡಿದವರ ಪೈಕಿ ಕೋಣಂದೂರು ಲಿಂಗಪ್ಪ, ಅ.ನ.ಕೃ., ಮ. ರಾಮಮೂರ್ತಿ ಅವರ ಹೆಸರುಗಳು ಪ್ರಧಾನವಾದುವು. ಈ ಚಳವಳಿಯ ನೇತೃತ್ವವನ್ನು ಮ. ರಾಮಮೂರ್ತಿ ಅವರು ವಹಿಸಿಕೊಂಡ ಮೇಲೆ ಕನ್ನಡ ಪರವಾದ ಅನೇಕ ಬದಲಾವಣೆಗಳು ಆದವು. ಈ ದಿಸೆಯಲ್ಲಿ ಅವರ ಜೀವನ, ಚಳವಳಿಗಳನ್ನು ಅರಿಯುವ ಕಿರುಪ್ರಯತ್ನವೇ ಪ್ರಸ್ತುತ ಕೃತಿ.

## ೨. ಮನೆತನದ ಹಿನ್ನೆಲೆ

ಮ. ರಾಮಮೂರ್ತಿ ಅವರು ಹುಟ್ಟಿದ್ದು ಒಂದು ವೈದಿಕ ಸಂಪ್ರದಾಯವಾದಿ ಕುಟುಂಬದಲ್ಲಿ. ಆದರೆ ಬೆಳೆದದ್ದು ಮಾತ್ರ ಭಿನ್ನವಾಗಿ. ಇವರ ತಂದೆ ಕನ್ನಡದ ಖ್ಯಾತ ಕಾದಂಬರಿಕಾರ, ಸಾಹಿತಿ, ಪತ್ರಿಕೋದ್ಯಮಿಯೂ ಆಗಿದ್ದ 'ವೀರಕೇಸರಿ' ಸೀತಾರಾಮ ಶಾಸ್ತ್ರಿಯವರು (೧೮೯೩-೧೯೭೧). ಶಾಸ್ತ್ರಿಯವರ ತಂದೆ ಮದ್ದೂರಿನ ಪುರೋಹಿತ ಶಾಹಿ ವಂಶಕ್ಕೆ ಸೇರಿದ್ದ ನಾಗೇಶ ಶಾಸ್ತ್ರಿಗಳು. ಶಾಸ್ತ್ರಿಯವರ ತಾಯಿ ನಂಜನಗೂಡಿನ ಪಾರ್ವತಮ್ಮ. ಹೀಗಾಗಿ ಮ. ರಾಮಮೂರ್ತಿ ಅವರಿಗೆ ಅಜ್ಜ-ಅಜ್ಜಿಯವರ ಕೌಟುಂಬಿಕ ಪ್ರಭಾವ, ತಂದೆ ವೀರಕೇಸರಿ ಸೀತಾರಾಮಶಾಸ್ತ್ರಿಗಳಿಂದ ಬಂದ ಪಾರಂಪರಿಕ ಜ್ಞಾನ ಇತ್ಯಾದಿಗಳ ಹಿನ್ನೆಲೆ ಇತ್ತು. ಮೈಸೂರಿನ ಮಹಾರಾಜರ ಕಾಲದಿಂದಲೂ ತಮ್ಮ ಮನೆತನ 'ವಿದ್ವಾಂಸರ ಮನೆತನ'ವಾಗಿ ಬೆಳೆದುಬಂದಿದ್ದುದು ರಾಮಮೂರ್ತಿಗೆ

ತಿಳಿಯದ ವಿಚಾರವೇನಾಗಿರಲಿಲ್ಲ. ಆದರೂ ತಮ್ಮ ಬಾಲ್ಯ, ವಿದ್ಯಾಭ್ಯಾಸದ ದಿನಗಳಲ್ಲಿ ಭಿನ್ನವಾಗಿ ತಮ್ಮನ್ನು ತಾವು ಗುರುತಿಸಿಕೊಂಡದ್ದು ಇವರ ವಿಶೇಷತೆ. ಜನರೊಂದಿಗೆ ಬೆರೆತು ಜಾತಿ ಭೇದಗಳನ್ನು ಮರೆತು ಸಾಂಪ್ರದಾಯಿಕ ಮನೋವೃತ್ತಿಗಳಿಗೆ ವ್ಯತಿರಿಕ್ತವಾಗಿ ರಾಮಮೂರ್ತಿ ಬೆಳೆದುಬಂದರು.

ತಂದೆ ವೀರಕೇಸರಿ ಸೀತಾರಾಮಶಾಸ್ತ್ರಿಗಳು ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಪ್ರತಿಕ್ರಿಯಿಸುತ್ತಿದ್ದ ಬಗೆಯನ್ನು ಬಾಲಕ ರಾಮಮೂರ್ತಿ ಗಮನಿಸದೆ ಇರಲಿಲ್ಲ. ತಂದೆಯವರ ಗಾಂಧೀಜಿಯವರೊಂದಿಗಿನ ಸಂಬಂಧ, ಪತ್ರಿಕಾವಲಯದಲ್ಲಿನ ಚಟುವಟಿಕೆಗಳು 'ವೀರಕೇಸರಿ' ಪತ್ರಿಕೆಯ ಮೂಲಕ ಜನರಲ್ಲಿ ಜಾಗೃತಿ ಮೂಡಿಸುತ್ತಿದ್ದ ಬರವಣಿಗೆ, ರಾಜಕಾರಣದಲ್ಲಿನ ಸಕ್ರಿಯ ಪಾತ್ರ ನಿರ್ವಹಣೆ ಮೊದಲಾದವುಗಳನ್ನು ಬಹಳ ಹತ್ತಿರದಿಂದ ಬಲ್ಲವರಾಗಿದ್ದರು. ಅಂತೆಯೇ ಪ್ರಭಾವಿತರೂ ಆಗಿದ್ದು ಉಂಟು. ಶಾಸ್ತ್ರಿಗಳ ದೌಲತ್, ಬಿದನೂರ ರಾಣಿ, ಶ್ರೀರಂಗರಾಯ, ಛತ್ರಪತಿ ಶಿವಾಜಿ, ಆದಿಲ್ ಶಾಹಿಯ ಕಡೆಯ ದಿನಗಳು ಮೊದಲಾದ ಕಾದಂಬರಿಗಳು ಹಾಗೂ ಅರವತ್ತಕ್ಕೂ ಹೆಚ್ಚಿನ ಕೃತಿಗಳು ಅವರನ್ನು ಸಾಹಿತ್ಯಕ ವಲಯದಲ್ಲಿ ಗುರುತಿಸುವಂತೆ ಮಾಡಿದ್ದವು. ಇದರಿಂದ ತಂದೆಯ ಸಾಹಿತ್ಯಕ ಅಭಿರುಚಿ, ಪ್ರತಿಭೆ, ಚಟುವಟಿಕೆಗಳು ರಾಮಮೂರ್ತಿಯವರನ್ನು ಮುಂದೆ ಪತ್ತೇದಾರಿ ಕಾದಂಬರಿಕಾರರನ್ನಾಗಿ ಮಾಡುವಲ್ಲಿ ಸಹಕರಿಸಿದ್ದವು. ಸೀತಾರಾಮಶಾಸ್ತ್ರಿ ಹಾಗೂ ಸುಬ್ಬಮ್ಮ ದಂಪತಿಗಳಿಗೆ ಒಂಬತ್ತು ಜನ ಮಕ್ಕಳು. ಅವರಲ್ಲಿ. ಮ. ರಾಮಮೂರ್ತಿ ಅವರೆ ಹಿರಿಯ ಮಗ. ಇಂದು ಅವರ ಸಹೋದರಿಯರು, ತಮ್ಮಂದಿರು ಹಾಗೂ ಪತ್ನಿ ಕಮಲಮ್ಮನವರು ನಮ್ಮ ನಡುವೆ ಇದ್ದಾರೆ.

## ೩. ಬಾಲ್ಯ ಹಾಗೂ ವಿದ್ಯಾರ್ಥಿ ಜೀವನ

ರಾಮಮೂರ್ತಿ ಹುಟ್ಟಿದ್ದು ೧೯೧೮ರ ಮಾರ್ಚ್ ೧೧ ರಂದು. ನಂಜನಗೂಡಿನಲ್ಲಿ ಹುಟ್ಟಿದ ಇವರಿಗೆ ಆರಂಭಿಕ ವಿದ್ಯಾಭ್ಯಾಸ ದೊರೆತದ್ದು ಸಹ ಅಲ್ಲಿಯೆ. ವೈದಿಕ ವೃತ್ತಿಯಲ್ಲಿದ್ದ ತಂದೆಯವರಿಂದ ರಾಮಮೂರ್ತಿ ಅವರಿಗೆ ಸಂಸ್ಕೃತ ಶ್ಲೋಕಗಳ ಕಂಠಪಾಠವು ಕಡ್ಡಾಯವಾಗಿತ್ತು. ಇದರ ಜೊತೆಗೆ ಶಾಲೆ ಮತ್ತು ಮನೆಯಲ್ಲಿ ಕನ್ನಡ ಭಾಷೆಯ ಅಭ್ಯಾಸ. ಬಾಲಕ ರಾಮಮೂರ್ತಿಯ ಆಸಕ್ತಿ ವಿಚಾರಗಳು ಮನೆಯಲ್ಲಿನ ಪೂಜೆ, ಆಚರಣೆಗಳು ಆಗಿರಲಿಲ್ಲ. ಬದಲಾಗಿ ಊರಿನ ಇತರೆ ಸ್ನೇಹಿತರೊಂದಿಗೆ ಬುಗುರಿ, ಚೆಂಡು, ಗೋಲಿ ಇತ್ಯಾದಿಗಳ ಆಟಗಳನ್ನಾಡುವುದರ ಜೊತೆಗೆ ಹೊರಳಿತ್ತು. ಅಲ್ಲದೆ ಕುದುರೆ, ನಾಯಿಗಳನ್ನು ಜೊತೆಮಾಡಿಕೊಂಡು ಪಿಸ್ತೂಲೊಂದನ್ನು ಹಿಡಿದು ಓಡಾಡುವುದು ಸಾಮಾನ್ಯವಾಯಿತು. ಪ್ರಾಥಮಿಕ ಶಾಲೆಯಲ್ಲಿದ್ದ ರಾಮಮೂರ್ತಿಗೆ ಪಠ್ಯ ವಿಷಯಗಳಿಗಿಂತ, ಪಠ್ಯೇತರ ಚಟುವಟಿಕೆ, ಅಲೆದಾಟಗಳಲ್ಲಿ ಆಸಕ್ತಿ ಮೂಡಿದ್ದವು. ತನಗೆ ಓದಬೇಕೆನ್ನಿಸಿದ ವಿಚಾರಗಳ ಕಡೆಗೆ ಗಮನ ಹರಿಸುವುದು, ಇಷ್ಟವಾದ

ಚಟುವಟಿಕೆಗಳಲ್ಲಿ ತೊಡಗುವ ಹಠಮಾರಿತನಗಳಿಂದ ರಾಮಮೂರ್ತಿ ಭಿನ್ನವಾಗಿ ಗುರುತಿಸಿಕೊಂಡಿದ್ದರು. ಶಾಲೆಗೆ ಹೋಗುವುದು ಇವರಿಗೆ ಬೇಸರದ ಸಂಗತಿ ಆಗಿತ್ತು. ಇಂಥ ಹುಡುಗನಲ್ಲಿ ಆಸಕ್ತಿ ಮೂಡಿಸಿದ ಶಾಲಾ ಮಾಸ್ತರರೆಂದರೆ ಸುಬ್ರಹ್ಮಣ್ಯ ಅಯ್ಯರ್. ಇವರ ಪ್ರಭಾವದಿಂದ ಕುಮಾರವ್ಯಾಸ, ರಾಘವಾಂಕ, ಹರಿಹರ ಮೊದಲಾದವರ ಕಾವ್ಯಗಳ ಬಗ್ಗೆ ಆಸಕ್ತಿ ಮೂಡಿತು. ಧೈರ್ಯಶಾಲಿ ಬಾಲಕನೆನ್ನಿಸಿದ್ದ ರಾಮಮೂರ್ತಿಗೆ ಕನ್ನಡ ಸಾಹಿತ್ಯದ ಪರಿಚಯವನ್ನು ಮಾಡಿಸಿದವರು ಈ ಅಯ್ಯರ್ ಮೇಷ್ಟ್ರು.

ತಂದೆ ಸೀತಾರಾಮ ಶಾಸ್ತ್ರಿಗಳು ಬೆಂಗಳೂರಿನ ಶಂಕರಮಠದ ಅಧಿಕಾರಿಗಳಾಗಿ ನೇಮಕ ಆಗಿದ್ದರು. ಬಾಲಕ ರಾಮಮೂರ್ತಿ ಪ್ರಾಥಮಿಕ ಶಾಲೆಯಲ್ಲಿ ಕಲಿಯುತ್ತಿದ್ದುದರಿಂದ ನಂಜನಗೂಡಿಯಲ್ಲಿಯೆ ಉಳಿಯಬೇಕಾಯಿತು. ರಾಮಮೂರ್ತಿ ಮಾಧ್ಯಮಿಕ ಶಾಲೆಯಲ್ಲಿ ಅಭ್ಯಾಸ ಮಾಡುವ ವೇಳೆಗೆ ತಂದೆ ಬೆಂಗಳೂರು ಮತ್ತು ಮೈಸೂರುಗಳಲ್ಲಿನ ರಾಜಕೀಯ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದರು. ಬ್ರಿಟಿಷರ ವಸಾಹತುಶಾಹಿ ಧೋರಣೆಗಳನ್ನು ವಿರೋಧಿಸುವಲ್ಲಿ ಗಾಂಧೀಜಿ ಅವರನ್ನು ಭೇಟಿ ಮಾಡಿ ಅವರಿಂದ ಪ್ರಭಾವಿತರಾಗಿದ್ದೂ ಉಂಟು. ಶಾಸ್ತ್ರಿಗಳಿಗೆ ಗಾಂಧಿ ಮತ್ತು ಕಾಂಗ್ರೆಸ್ಸಿನ ವಿಚಾರಧಾರೆ ಹಿಡಿಸಿತ್ತು. ಹೀಗಾಗಿ ಸ್ವಾತಂತ್ರ್ಯ ಚಳವಳಿಯ ಪ್ರಚಾರಕ್ಕಾಗಿ ಒಂದು ಪತ್ರಿಕೆಯನ್ನೇ ಹುಟ್ಟುಹಾಕಿದರು. ಅದೆ 'ವೀರಕೇಸರಿ' ಪತ್ರಿಕೆ. ಈ ಪತ್ರಿಕೆಯಿಂದ ಶಾಸ್ತ್ರಿಗಳು ತಮ್ಮ ತೀವ್ರ ಸ್ವರೂಪದ ಬರವಣಿಗೆಯನ್ನು ಜನರಿಗೆ ಪರಿಚಯಿಸಿದರು. ಆ ಮೂಲಕ ಸರ್ಕಾರದ ಸಿಟ್ಟಿಗೂ ಒಳಗಾಗಬೇಕಾಯಿತು. 'ವೀರಕೇಸರಿ' ಪತ್ರಿಕೆಯ ಸಂಪಾದಕರಾಗಿದ್ದ ಇವರು ಮುಂದೆ 'ವೀರಕೇಸರಿ' ಸೀತಾರಾಮ ಶಾಸ್ತ್ರಿಗಳೆಂದೆ ಖ್ಯಾತರಾದರು. ಮದ್ದೂರು ವೇದಮೂರ್ತಿ ಸೀತಾರಾಮಶಾಸ್ತ್ರಿ (ಮ.ವೇ. ಸೀತಾರಾಮಶಾಸ್ತ್ರಿ) ಎಂಬ ಹೆಸರು ಜನರಿಗೆ ಮರೆತೇ ಹೋಗಿತ್ತು. 'ಮೈಸೂರು ಕಾಂಗ್ರೆಸ್' ಪಕ್ಷದ ಹುಟ್ಟಿಗೂ ಸೀತಾರಾಮಶಾಸ್ತ್ರಿಯವರೆ ಪ್ರಯತ್ನಿಸಿದ್ದು. ಇಂಥ ಚಟುವಟಿಕೆಗಳು ಬಹಳ ಬೇಗನೆ ಶಾಸ್ತ್ರಿಗಳನ್ನು ಗುರುತಿಸುವಂತೆ ಮಾಡಿದ್ದವು. ಈ ಮಧ್ಯೆ ಬೆಂಗಳೂರಿನ ಸುಲ್ತಾನ್ ಪೇಟೆಯ ಗಣಪತಿ ಗಲಭೆಯ ಘಟನೆ (೧೯೨೮) ನಡೆಯಿತು. ದಿವಾನರಾಗಿದ್ದ ಮಿರ್ಜಾ ಇಸ್ಮಾಯಿಲರು ತನಿಖೆಗೆ ಆದೇಶಿಸಿದ್ದರು. ಅಬ್ಬಾಸ್ ಖಾನ್ ಮೊದಲಾದವರ ಪ್ರಯತ್ನಗಳಿಂದ 'ಗಣಪತಿ ಗಲಭೆ'ಯು ಭಿನ್ನ ಸ್ವರೂಪವನ್ನು ಪಡೆದಿತ್ತು. ಈ ಕುರಿತು ನಡೆದ ಸಂಚು, ಹಿಂಸಾಚಾರಗಳಿಗೆ ವೀರಕೇಸರಿ ಸೀತಾರಾಮಶಾಸ್ತ್ರಿ, ಹೆಚ್.ವಿ. ಸುಬ್ರಹ್ಮಣ್ಯ ಮೊದಲಾದವರೆ ಕಾರಣವೆಂಬುದು ಸಾಬೀತಾಯಿತು. ಇದರಿಂದಾಗಿ ಶಾಸ್ತ್ರಿಗಳನ್ನು ಸರ್ಕಾರ ಬಂಧಿಸಿ ಬೆಂಗಳೂರಿನ ಕೇಂದ್ರ ಕಾರಾಗೃಹದಲ್ಲಿಟ್ಟಿತ್ತು.

ಈ ವೇಳೆಗಾಗಲೇ ಬಾಲಕ ರಾಮಮೂರ್ತಿ ತಂದೆಯವರ ಚಟುವಟಿಕೆಗಳನ್ನು ಅರಿತಿದ್ದ. ಬೆಂಗಳೂರಿನಲ್ಲಿದ್ದ ತಂದೆಯವರನ್ನು ನೋಡಲು ನಂಜನಗೂಡನ್ನು ತೊರೆದು ಬಂದು, ತಂದೆಯ ಸಲಹೆಯ ಮೇರೆಗೆ ಬೆಂಗಳೂರಿನಲ್ಲಿಯೇ ಹೈಸ್ಕೂಲು ವಿದ್ಯಾಭ್ಯಾಸ

ವನ್ನು ಮುಂದುವರೆಸುವುದು ರಾಮಮೂರ್ತಿಗೆ ಅನಿವಾರ್ಯವಾಯಿತು. ತಂದೆಯ ಸ್ನೇಹಿತರಾಗಿದ್ದ ದೇವುಡು ನರಸಿಂಹ ಶಾಸ್ತ್ರಿಗಳು ಗಾಂಧಿನಗರದ ತಮ್ಮ 'ಆರ್ಯ ವಿದ್ಯಾ ಶಾಲೆ'ಗೆ ಸೇರಿಸಿಕೊಂಡರು. ಆ ಶಾಲೆಯ ಮುಖ್ಯೋಪಾಧ್ಯಾಯರಾಗಿದ್ದ ದೇವುಡುರವರು ರಾಮಮೂರ್ತಿಯವರನ್ನು ಅಶ್ವಥನಾರಾಯಣರ ಮನೆಯಲ್ಲಿ ಉಳಿಯುವ ವ್ಯವಸ್ಥೆ ಮಾಡಿದ್ದು ಉಂಟು. ದೇವುಡು ಅವರ ಪ್ರೀತಿ, ಪ್ರೋತ್ಸಾಹ, ಸಹಕಾರಗಳಿಂದ ಪ್ರಭಾವಿತರಾಗಿದ್ದ ರಾಮಮೂರ್ತಿ, ಅವರನ್ನೆ ಕುರಿತಂತೆ 'ಗುರುದಕ್ಷಿಣೆ' ಎಂಬ ತಮ್ಮ ಮೊಟ್ಟ ಮೊದಲ ಕತೆಯನ್ನು ಬರೆದರು. ಇದು ಅಶ್ವಥನಾರಾಯಣರ 'ಮಕ್ಕಳ ಪುಸ್ತಕ'ದಲ್ಲಿ ಪ್ರಕಟವೂ ಆಯಿತು. ಮದ್ದೂರು ಸೀತಾರಾಮಶಾಸ್ತ್ರಿಗಳ ಮಗ ರಾಮಮೂರ್ತಿ, ಗೆಳೆಯರ ವಲಯದಲ್ಲಿ 'ಮ.ಸೀ: ರಾಮಮೂರ್ತಿ' ಎಂದೇ ಪ್ರಸಿದ್ಧಿ ಪಡೆದ. ಮುಂದೆ 'ಮ. ರಾಮಮೂರ್ತಿ' ಎಂಬ ಹೆಸರಿಂದಲೇ ಕರೆಸಿಕೊಳ್ಳುವಂತಾಯಿತು. 'ಮಕ್ಕಳ ಪುಸ್ತಕ'ದ ಸಂಪಾದಕರಾಗಿದ್ದ ಅಶ್ವಥನಾರಾಯಣರು ತಮ್ಮಲ್ಲಿದ್ದ ಗ್ರಂಥಗಳನ್ನು ಓದಿಕೊಳ್ಳಲು ಅವಕಾಶ ನೀಡಿದ್ದುದು ರಾಮಮೂರ್ತಿ ಅವರಿಗೆ ಹೆಚ್ಚಿನ ಸಂತಸವನ್ನುಂಟು ಮಾಡಿತ್ತು. ತಮಗೆ ದೊರೆತ ಗ್ರಂಥ ಭಂಡಾರದಿಂದ ರಾಮಮೂರ್ತಿ ಹೆಚ್ಚು ಓದಿಕೊಂಡರು. ಹೀಗಾಗಿ ಹೈಸ್ಕೂಲಿನ ಪಠ್ಯಪುಸ್ತಕಗಳು ರುಚಿಸದಾದವು. ಶಾಲೆಗೆ ಹೋಗಿ ಕಲಿಯುವುದರ ಬಗೆಗೆ ಆಸಕ್ತಿ ಬೆಳೆಯಲಿಲ್ಲ. ಈ ಮಧ್ಯೆ ತಂದೆಯ ಬಿಡುಗಡೆ ಆಯಿತು. ತಾನು ಶಾಲೆಗೆ ಹೋಗುವುದಿಲ್ಲವೆಂಬುದನ್ನು ಬಾಲಕ ರಾಮಮೂರ್ತಿ ತಂದೆಗೆ ಸ್ಪಷ್ಟಪಡಿಸಿದ.

ಜೈಲಿನಿಂದ ಬಿಡುಗಡೆಯಾದ ಮೇಲೆ ಸೀತಾರಾಮಶಾಸ್ತ್ರಿಗಳು ಕಾಂಗ್ರೆಸ್ ಸಭೆ, ಬಹಿರಂಗ ಅಧಿವೇಶನ, ಭಾಷಣ ಇತ್ಯಾಗಳಲ್ಲಿ ತಲ್ಲೀನರಾದರು. ಇವರೊಂದಿಗೆ ರಾಮಮೂರ್ತಿ ಓಡಾಡುತ್ತಿದ್ದುದರಿಂದ ಸಂಘಟನೆ, ಸ್ವಾತಂತ್ರ್ಯ, ಚಿಂತನೆ, ಭಾಷಣ, ಬರವಣಿಗೆ ಮೊದಲಾದವು ಅರಿವಿಗೆ ಬಂದವು. ಬಾಲಗಂಗಾಧರ ತಿಲಕರ ಸ್ಮರಣೆಯ ಸಲುವಾಗಿ (ಮೊದಲತಿಥಿ) ಬೆಂಗಳೂರಿನ ಗಾಂಧಿ ಮೈದಾನದಲ್ಲಿ (ಇಂದಿನ 'ಕನ್ನಡ ಸಾಹಿತ್ಯ ಪರಿಷತ್ತು' ಇರುವ ಸ್ಥಳ) ರಾಮಮೂರ್ತಿ ಮಾಡಿದ ಮೊಟ್ಟಮೊದಲ ಭಾಷಣ ಸಭಿಕರನ್ನು ಅಚ್ಚರಿಗೊಳಿಸಿತು. ಕರ್ಲಮಂಗಲಂ ಶ್ರೀಕಂಠಯ್ಯನವರು ಈ ಬಾಲಕನ ಪ್ರತಿಭೆಯನ್ನು ಬಳಸಿಕೊಳ್ಳಲು ಮುಂದಾದದ್ದು ಭಾಷಣದ ನಂತರವೆ. ವಯಸ್ಸಿನಲ್ಲಿ ಇಬ್ಬರಿಗೂ ಬಹಳ ಅಂತರ ವಿತ್ತು. ಆದರೆ ರಾಮಮೂರ್ತಿಯ ಹಿತೈಶಿ, ಗುರು, ಮಾರ್ಗದರ್ಶಿ, ಸ್ನೇಹಿತ ಎಲ್ಲವೂ ಶ್ರೀಕಂಠಯ್ಯನವರೇ ಆಗಿದ್ದರು. ಲಕ್ಷ್ಮೀಶ, ಕುಮಾರವ್ಯಾಸ, ಬಸವಣ್ಣ, ಅಕ್ಕಮಹಾದೇವಿ, ಪುರಂದರದಾಸ ಮೊದಲಾದವರನ್ನು ಓದಿಕೊಂಡದ್ದು ಶ್ರೀಕಂಠಯ್ಯನವರ ಒಡನಾಟದಿಂದಲೆ. ಬರವಣಿಗೆಯ ಗೀಳನ್ನು ಹಚ್ಚಿದ ಕರ್ಲಮಂಗಲಂ ಅವರು ಸ್ವಾತಂತ್ರ್ಯ ಚಳವಳಿಗೆ ಕಿರಿಯರನ್ನು ಸಂಘಟಿಸುತ್ತಿದ್ದ ಬಾಲಕ ರಾಮಮೂರ್ತಿಯನ್ನು ಮತ್ತಷ್ಟು ಹುರಿದುಂಬಿಸಿದರು. ಈತನ ಚಟುವಟಿಕೆಗಳನ್ನು

ಗಮನಿಸಿದ ಪೊಲೀಸರು ಬಂಧಿಸಿ ಒಂದೆರಡು ದಿನಗಳು ಸೆರೆಮನೆಯಲ್ಲಿಡುತ್ತಿದ್ದುದು ಉಂಟು.

## ೪. ಪತ್ರಿಕೋದ್ಯಮದ ಬದುಕು

ಸ್ವಾತಂತ್ರ್ಯ ಹೋರಾಟಕ್ಕೆ ತಂದೆಯವರ 'ವೀರಕೇಸರಿ' ಪತ್ರಿಕೆ ಸಂಪೂರ್ಣವಾಗಿ ತೊಡಗಿಸಿಕೊಂಡಿತ್ತು. ಹದಿನಾರರ ಹರೆಯದ ರಾಮಮೂರ್ತಿ ತಾನೂ ಸಹ ಪತ್ರಿಕೆಯ ಸಂಪಾದಕನಾಗುವ ಇಂಗಿತವನ್ನು ವ್ಯಕ್ತಪಡಿಸಿದ. ಅದರಂತೆ 'ವೀರಕೇಸರಿ'ಯಲ್ಲಿ ಕೆಲಸ ಮಾಡಲು ಬಂದಾಗ ತನಗೆ ಇಂಗ್ಲಿಷ್ ಭಾಷೆ ಬರುವುದಿಲ್ಲವೆಂಬ ತೊಡಕು ಕಾಣಿಸಿಕೊಂಡಿತು. ಪಿ.ಟಿ.ಐ. ಸುದ್ದಿ ಸಂಸ್ಥೆಯಿಂದ ಬರುತ್ತಿದ್ದ ವಾರ್ತಾ ಟೆಲಿಗ್ರಾಂಗಳನ್ನು ಕನ್ನಡೀಕರಿಸುವುದು ಸುಲಭದ ಮಾತಾಗಿರಲಿಲ್ಲ. ಈ ನಿಟ್ಟಿನಲ್ಲಿ ಇಂಗ್ಲಿಷ್ ಕಲಿಯುವುದು ಅನಿವಾರ್ಯ ಆಯಿತು. ತಂದೆಯ ಸಲಹೆಯ ಮೇರೆಗೆ ನಾರಾಯಣಸ್ವಾಮಿ ಅಯ್ಯರ್ ಅವರ ಬಳಿ ಇಂಗ್ಲಿಷಿನ ಪಾಠ- ಪ್ರವಚನಗಳು ಆರಂಭಗೊಂಡವು. ಅಯ್ಯರ್ ಅಂದು ಇಂಗ್ಲಿಷಿನಲ್ಲಿ ಪ್ರಕಟವಾಗುತ್ತಿದ್ದ 'ಟ್ರೂತ್' ವಾರ ಪತ್ರಿಕೆಯ ಸಂಪಾದಕರು. ಇವರ ಭಾಷೆ, ನಿಲುವುಗಳು ತೀಕ್ಷ್ಣವಾಗಿ ಪ್ರಕಟವಾಗುತ್ತಿದ್ದವು. ಅಯ್ಯರ್ ಅವರು ರಾಮ ಮೂರ್ತಿಗೆ ಇಂಗ್ಲಿಷಿನ ಜೊತೆಗೆ ಚುಟ್ಟಾ ಸೇದುವುದನ್ನೂ ಕಲಿಸಿದ್ದರು. ಇಪ್ಪತ್ತು ತುಂಬುವುದರೊಳಗೆ ರಾಮಮೂರ್ತಿ ಇಂಗ್ಲಿಷಿನಲ್ಲಿರುತ್ತಿದ್ದ ಟೆಲಿಗ್ರಾಂ ಸುದ್ದಿಗಳನ್ನು ಕನ್ನಡಕ್ಕೆ ಅನುವಾದಿಸಿ ಪತ್ರಿಕೆಯನ್ನು ನಡೆಸುವಲ್ಲಿ ನಿಸ್ಸೀಮರಾದರು. ಅಷ್ಟೇ ಅಲ್ಲದೆ ಈ ವೇಳೆಗಾಗಲೆ ಉತ್ತಮ ವಾಗ್ಮಿ, ಸಾಹಿತಿ, ಚಳವಳಿಗಾರರೆಂಬ ಹೆಸರನ್ನೂ ಮಾಡಿದ್ದುದು ಗಮನಿಸಬೇಕಾದ ಸಂಗತಿ.

ಪತ್ರಿಕೋದ್ಯಮವು ಹೆಸರನ್ನು ಕೊಟ್ಟಿತಾದರೂ ರಾಮಮೂರ್ತಿ ಅವರಿಗೆ ಸಂಪತ್ತನ್ನು ತಂದುಕೊಡಲಿಲ್ಲ. ಎರಡನೆಯ ಮಹಾಯುದ್ಧದ ಸಂದರ್ಭವನ್ನು ಬಳಸಿಕೊಳ್ಳುತ್ತಿದ್ದ ಅನೇಕರು ರಾತ್ರೋರಾತ್ರಿ ಶ್ರೀಮಂತರಾಗುತ್ತಿದ್ದುದು, ಆ ಕಡೆಗೆ ಗಮನಸೆಳೆಯುವಂತೆ ಮಾಡಿತು. ಸುಖ, ಭೋಗದ ಜೀವನವನ್ನು ಬಯಸುತ್ತಿದ್ದವರಿಗೆ ವಿವಿಧ ಬಗೆಯ ಮನರಂಜನೆಗಳು ಆರಂಭಗೊಂಡವು. ರಾಮಮೂರ್ತಿಯು ಸಹ 'ಬಾಂಬೆ ಷೋ' ಎಂಬ ಪ್ರದರ್ಶನಗಳನ್ನು ಆರಂಭಿಸಿ ಶ್ರೀಮಂತರು, ಅಧಿಕಾರಿಗಳು ಡೇರೆಗಳಲ್ಲಿ ರಾತ್ರಿಗಳನ್ನು ಕಳೆಯುವಂತೆ ಮಾಡಿದರು. ತಂದೆ ವೀರಕೇಸರಿ ಅವರಿಗೆ ಮಗನ ವರ್ತನೆಗಳು ಸರಿ ಕಾಣಲಿಲ್ಲ. ೧೯೪೨ರಲ್ಲಿ ನಂಜನಗೂಡಿನ ಕಮಲಮ್ಮನವರೊಂದಿಗೆ ರಾಮಮೂರ್ತಿಯವರ ವಿವಾಹವಾಯಿತು. 'ಬಾಂಬೆ ಷೋ'ಗಳು ನಿಂತವು. ಮನೆಯ ಜವಾಬ್ದಾರಿ ಅರಿವಿಗೆ ಬಂದು ಮತ್ತೆ ಪತ್ರಿಕೋದ್ಯಮದ ಕಡೆಗೆ ಮನಸ್ಸು ಹೊರಳಿತು. ಕನ್ನಡ ಪತ್ರಿಕೋದ್ಯಮವನ್ನೆ ಗಟ್ಟಿ ಮಾಡುವ ಛಲ ತೊಟ್ಟರು. ಈ ವೇಳೆಗಾಗಲೇ 'ವೀರಕೇಸರಿ' ಪತ್ರಿಕೆ ನಿಂತು ಹೋಗಿತ್ತು. ಹೀಗಾಗಿ ತಾವೆ ವಿನೋದಿನಿ, ಕಥಾವಾಣಿ,

ವಿನೋದವಾಣಿ ಮೊದಲಾದ ಪತ್ರಿಕೆಗಳನ್ನು ಹುಟ್ಟುಹಾಕಿದರು. ಇವು ಯಾವುದು ಹಣವನ್ನು ತಂದುಕೊಡಲಿಲ್ಲ. ಕನ್ನಡದಲ್ಲಿ ಲೈಂಗಿಕ ವಿಜ್ಞಾನದ ಪತ್ರಿಕೆಗಳ ಕೊರತೆ ಇದ್ದದ್ದು ರಾಮಮೂರ್ತಿಯ ಗಮನ ಸೆಳೆಯಿತು. ಈ ದಿಸೆಯಲ್ಲಿ 'ಕಾಮಕಲಾ' ಎಂಬ ಮಾಸಿಕವನ್ನು ಹೊರಡಿಸಿದರು. ಸರಳವಾದ ಕನ್ನಡದಲ್ಲಿ ಲೈಂಗಿಕ ವಿಚಾರಗಳನ್ನು ಅರಿಯುವಲ್ಲಿ ಸಹಕಾರಿಯಾದ ಈ ಪತ್ರಿಕೆ ಬಹಳ ಬೇಗನೆ ಜನಪ್ರಿಯವಾಯಿತು. ಸಂಪ್ರದಾಯವಾದಿಗಳು, ವೈದಿಕರು ರಾಮಮೂರ್ತಿ ಅವರು ಅಶ್ಲೀಲ ಪತ್ರಿಕೆಯನ್ನು ನಡೆಸುತ್ತಿದ್ದಾರೆ ಎಂದು ಪ್ರಚಾರ ಕೈಗೊಂಡರು. ಇದರಿಂದ ಪತ್ರಿಕೆಯನ್ನು ಮುಟ್ಟುಗೋಲು ಹಾಕಿಕೊಳ್ಳುವಂತೆ ಸರ್ಕಾರದಿಂದ ಆದೇಶ ಹೊರಬಿತ್ತು. ಕೋರ್ಟಿಗೆ ಹೋದ ರಾಮಮೂರ್ತಿ ತಮ್ಮ ಪತ್ರಿಕೆ ವೈಜ್ಞಾನಿಕವಾದ ಲೈಂಗಿಕ ಶಿಕ್ಷಣಕ್ಕೆ ಸಂಬಂಧಿಸಿದುದು ಎಂದು ಸಾಬೀತು ಪಡಿಸಿದರು. ಇದನ್ನು ಕೋರ್ಟು ಒಪ್ಪಿಕೊಳ್ಳದೆ ಇರಲು ಸಾಧ್ಯವಾಗಲಿಲ್ಲ. ಮತ್ತೆ 'ಕಾಮಕಲಾ' ಆರಂಭವಾಯಿತಾದರೂ ಲೈಂಗಿಕ ಶಿಕ್ಷಣದ ಹೆಸರಿನಲ್ಲಿ ಅನೇಕ ಪತ್ರಿಕೆಗಳು ಪ್ರಕಟಗೊಳ್ಳಲು ಆರಂಭಿಸಿದ್ದವು. ಇದರಿಂದ ರಾಮಮೂರ್ತಿ ತಮ್ಮ ಪತ್ರಿಕೆಯನ್ನು ಮುನ್ನಡೆಸಲು ಇಚ್ಛಿಸಲಿಲ್ಲ.

## ೫. ಪತ್ತೇದಾರಿ ರಾಮಮೂರ್ತಿ

೧೯೫೦ರ ವೇಳೆಗೆ ದೇಶವು ಸ್ವಾತಂತ್ರ್ಯ ಪಡೆದು ಪ್ರಗತಿಯ ಹಾದಿಯಲ್ಲಿ ಪ್ರಯೋಗಗಳನ್ನು ಮಾಡುತ್ತಿತ್ತು. ಕನ್ನಡದ ಸಂದರ್ಭದಲ್ಲಿ 'ಕನ್ನಡ'ವನ್ನು ಓದುವ ಅಭಿರುಚಿ ಮೂಡಿಸುವ ವಾತಾವರಣ ಅನಿವಾರ್ಯ ಎಂಬ ಅನಿಸಿಕೆ ರಾಮಮೂರ್ತಿ ಅವರಿಗೆ ಮೂಡಿದ್ದು ಗಮನಾರ್ಹವಾದುದು. ಏಕೆಂದರೆ ಅಂದು ಬೆಂಗಳೂರಿನ ಪರಿಸರ ಕನ್ನಡೇತರರ ಹಾವಳಿಯಿಂದ ಸುತ್ತುವರೆದಿತ್ತು. ಈ ನಿಟ್ಟಿನಲ್ಲಿ ಜನಸಾಮಾನ್ಯರು ಸಹ ಕನ್ನಡವನ್ನು ಓದುವಂತಾಗಲು ಕುತೂಹಲದಾಯಕ ಪತ್ತೇದಾರಿ ಕಾದಂಬರಿಗಳನ್ನು ಬರೆಯತೊಡಗಿದರು. ಇದರ ಪರಿಣಾಮವೇ ಸುಮಾರು ೧೫೦ಕ್ಕೂ ಹೆಚ್ಚು ಪತ್ತೇದಾರಿ ಕಾದಂಬರಿಗಳನ್ನು ಬರೆದು 'ಪತ್ತೇದಾರಿ ರಾಮಮೂರ್ತಿ' ಎಂದು ಖ್ಯಾತಿ ಪಡೆದದ್ದು. ಶೆರ್ಲಾಕ್ ಹೋಮ್ಸ್, ಅಗಾಥ ಕ್ರಿಸ್ಟಿ, ಅಲೆನ್ ಪೋ, ಗಾರ್ಡನರ್ ಮೊದಲಾದವರ ಕಾದಂಬರಿಗಳ ಜನಪ್ರಿಯತೆ ರಾಮಮೂರ್ತಿ ಅವರನ್ನು ಕಾಡಿತ್ತು. ಕನ್ನಡದಲ್ಲಿ ವಿಮರ್ಶಕರ ಗಮನ ಸೆಳೆಯುವಲ್ಲಿ ಪತ್ತೇದಾರಿ ಕಾದಂಬರಿಗಳು ಸೋತಿದ್ದರೂ, ಈ ಬಗೆಯಲ್ಲಿ ಸಾಹಿತ್ಯ ಸೃಷ್ಟಿಮಾಡಿ ಕನ್ನಡಿಗರಿಗೆ ಓದುವ ಗೀಳನ್ನು ಉಂಟುಮಾಡಿದ ರಾಮಮೂರ್ತಿಯವರ ಅಂದಿನ ಪ್ರಯತ್ನವನ್ನು ಯಾರು ಅಲ್ಲಗಳೆಯಲು ಸಾಧ್ಯವಿಲ್ಲ. ೧೯೫೦ ರಿಂದ ೬೦ರ ವರೆಗೂ ಹತ್ತು ವರ್ಷಗಳು ಅವರು ಪತ್ತೇದಾರಿ ಕಾದಂಬರಿಗಳನ್ನು ರಚಿಸುವಲ್ಲಿಯೇ ಮಗ್ನರಾದರು. ಆರಂಭದಲ್ಲಿ ಇಂಗ್ಲಿಷಿನ ರೂಪಾಂತರಗಳು ಕಾಣಿಸಿಕೊಂಡರೂ ಅನಂತರ ಕೆಲವು ಸ್ವತಂತ್ರವಾಗಿಯೂ ಪ್ರಕಟ ಆದವು. ಅಷ್ಟೇ

ಅಲ್ಲದೆ ರಾಮಮೂರ್ತಿ ಅವರಿಂದ ಐತಿಹಾಸಿಕ, ಸಾಮಾಜಿಕ ಕಾದಂಬರಿಗಳು ಸಹ ಪ್ರಕಟವಾದವು.

ರಾಮಮೂರ್ತಿ ಅವರಿಗೆ ತಮ್ಮ ಕಾದಂಬರಿಗಳು ಸಾರ್ವಕಾಲಿಕವಾದುವು ಎಂಬ ಭ್ರಮೆ ಇರಲಿಲ್ಲ. ಬದಲಾಗಿ ಅವು ಜನರಲ್ಲಿ ಓದುವ ಚಟವನ್ನು ಬೆಳೆಸುವಲ್ಲಿ ಕ್ರಿಯಾಶೀಲವಾಗಿದ್ದವು. ಈ ಬಗ್ಗೆ ಅವರಿಗೆ ಸ್ಪಷ್ಟ ಅರಿವಿದ್ದಿತು. ಕುವೆಂಪು, ಕಾರಂತರನ್ನು ಓದಲು ತಮ್ಮ ಕೃತಿಗಳು ಕೇವಲ ಮೆಟ್ಟಿಲುಗಳೆಂದು ತಿಳಿದಿದ್ದರು. ಕೇವಲ ಒಂಭತ್ತಾಣೆಗೆ ನೂರೈವತ್ತು, ಎರಡು ನೂರು ಪುಟಗಳ ಕಾದಂಬರಿಗಳನ್ನು ನೀಡಿದ ಅವರು ಬಹಳ ಬೇಗ ಜನಪ್ರಿಯರಾಗಲು ಕಾರಣ ಆಯಿತು. ಬಸ್ಸು ಮತ್ತು ರೈಲ್ವೆ ನಿಲ್ದಾಣಗಳಲ್ಲಿ ಕನ್ನಡಿಗರು ಇವರ ಕಾದಂಬರಿಗಳನ್ನು ಓದುವಂತಾದರೆ ಅಷ್ಟೇ ಸಾಕು ಎಂಬುದು ರಾಮಮೂರ್ತಿಯವರ ಅಭಿಮತವಾಗಿತ್ತು. ಇಲ್ಲಿ ಅವರಿಗೆ ಕನ್ನಡದ ಅಭಿರುಚಿ ಮೂಡಿಸುವ ಆಶಯವೊಂದೆ ಪ್ರಧಾನವಾದುದು. ಈ ನಿಟ್ಟಿನಲ್ಲಿ ಬೇರೆ ಲೇಖಕರು ಸಹ ಸಾವಿರಾರು ಸಂಖ್ಯೆಯಲ್ಲಿ ಕನ್ನಡದ ಕೃತಿಗಳನ್ನು ಬರೆಯಲು, ಪ್ರಕಟಿಸಲು ಮುಂದಾದರು.

## ೬. ಕನ್ನಡ ಚಳವಳಿಗೆ ಪ್ರವೇಶ

೧೯೬೦ರ ದಶಕದಲ್ಲಿ ಆರಂಭಗೊಂಡ ಬೆಂಗಳೂರಿನ ಕನ್ನಡ ಚಳವಳಿಗಳಿಗೆ ಮ. ರಾಮಮೂರ್ತಿ ಅವರ ಪ್ರವೇಶ ಹೇಳಿಮಾಡಿಸಿದಂತೆ ಇತ್ತು. ಕೇವಲ ಬರಹಗಾರರಾಗಿ ವಿದ್ಯಾರ್ಥಿ, ಕಾರ್ಮಿಕ, ಚಾಲಕ, ಜನಸಾಮಾನ್ಯ ಕನ್ನಡಿಗರಲ್ಲಿ ಪರಿಚಿತರಿದ್ದ ರಾಮಮೂರ್ತಿ ಅವರು ಚಳವಳಿಗಾರರಾಗಿ ಕಾಣಿಸಿಕೊಳ್ಳುವಂತೆ ಆಯಿತು. ಪ್ರಸ್ತುತ ಕೃತಿಯ ಆರಂಭದಲ್ಲಿ ಹೇಳಿದಂತೆ ಬೆಂಗಳೂರಿನಲ್ಲಿ ಕನ್ನಡದ ವಾತಾವರಣವೇ ಇರಲಿಲ್ಲ. ಎಲ್ಲ ಕಡೆಗೂ ತಮಿಳರ ಹಾವಳಿ, ಅವರ ಚಲನಚಿತ್ರ, ಧ್ವನಿ ಮುದ್ರಿಕೆಗಳ ಆರ್ಭಟಗಳು ಸರ್ವೇಸಾಮಾನ್ಯವಾಗಿದ್ದವು. ದಿನನಿತ್ಯದ ವ್ಯವಹಾರಗಳೆಲ್ಲ ತಮಿಳಿನಲ್ಲಿಯೆ. ಕನ್ನಡದಲ್ಲಿ ಮಾತನಾಡಿದವರಿಗೆ ಕೀಟಲೆ, ಅವಮಾನ ಮಾಡುತ್ತಿದ್ದ ವಾತಾವರಣ ಸೃಷ್ಟಿ ಆಗಿತ್ತು. ಈ ಥರದ ಅವಮಾನಗಳಿಗೆ ಕೋಣಂದೂರು ಲಿಂಗಪ್ಪ, ಅ.ನ. ಕೃಷ್ಣರಾವ್, ಮ. ರಾಮಮೂರ್ತಿ ಮೊದಲಾದವರು ಒಳಗಾಗದೆ ಇರಲಿಲ್ಲ. ಬೇರೆ ಜಿಲ್ಲೆಗಳಿಂದ ಬಂದ ಕನ್ನಡಿಗರಿಗೆ ಬೆಂಗಳೂರಿನ ಬಸ್ಸು, ರೈಲು ನಿಲ್ದಾಣಗಳಲ್ಲಿ ಅವಮಾನ, ಗೇಲಿಗಳು ತಮಿಳರಿಂದ ಸಾಮಾನ್ಯವಾಗಿತ್ತು. ಅಂಚೆ, ತಂತಿ, ರೈಲ್ವೆ, ಪೊಲೀಸು, ಕೇಂದ್ರ ಸರ್ಕಾರದ ಉದ್ದಿಮೆ ಮೊದಲಾದ ಕಡೆಗಳಲ್ಲಿ ತಮಿಳರದೇ ಹೆಚ್ಚಿನ ಸಂಖ್ಯೆ. ಕನ್ನಡಿಗರು ಅಲ್ಪಸಂಖ್ಯಾತರಾಗಿದ್ದರು. ಬೆಂಗಳೂರಿನಲ್ಲಿ ನಡೆಯುತ್ತಿದ್ದ ಎಲ್ಲ ರೀತಿಯ ಸಾಂಸ್ಕೃತಿಕ ಕಾರ್ಯಕ್ರಮಗಳು ತಮಿಳು ಕಲಾವಿದರಿಂದಲೇ ನಡೆಯುತ್ತಿದ್ದವು. ಎಲ್ಲ ಬಗೆಯ

ಮನರಂಜನಾ ಕಾರ್ಯಕ್ರಮಗಳಿಂದ ಕನ್ನಡ ಕಲಾವಿದರು ವಂಚಿತರಾಗಿದ್ದ ಸ್ಥಿತಿ ಅಂದಿನದು. ಇದನ್ನೆಲ್ಲ ಹೋಗಲಾಡಿಸಿ ಕನ್ನಡ ಭಾಷೆ, ಸಂಸ್ಕೃತಿಗಳನ್ನು ಮೂಡಿಸಿ ಕನ್ನಡಿಗರು ಕನ್ನಡಿಗರ ನಡುವೆ ಉಸಿರಾಡುವಂತಾಗಲು ಪಣತೊಟ್ಟ ಅಗ್ರಗಣ್ಯರ ಪೈಕಿ ಮ. ರಾಮಮೂರ್ತಿ ಪ್ರಮುಖರು. ಇದಕ್ಕಾಗಿ ಬೆಂಗಳೂರಿನಲ್ಲಿ ದೊಡ್ಡಪ್ರಮಾಣದಲ್ಲಿ 'ಕನ್ನಡ ಚಳವಳಿ'ಯೂ ಆರಂಭವಾಗಬೇಕಾಯಿತು. ಈ ಚಳವಳಿಯಲ್ಲಿ 'ಪತ್ತೇದಾರಿ ರಾಮಮೂರ್ತಿ' 'ಕನ್ನಡ ಸೇನಾನಿ'ಯಾಗಿ ಮುಂದಾಳತ್ವ ವಹಿಸಿಕೊಂಡು ಕಾರ್ಯಶೀಲರಾದರು.

## ೭. ಕನ್ನಡ ಯುವಜನ ಸಭಾ

ಬೆಂಗಳೂರಿನ ವಾತಾವರಣವನ್ನು ಕನ್ನಡಮಯವನ್ನಾಗಿಸುವುದು ಸುಲಭದ ಮಾತಾಗಿರಲಿಲ್ಲ. ಕೆಂಪೇಗೌಡ ರಸ್ತೆ, ಗಾಂಧಿನಗರದ ಸಿನಿಮಾ ಥಿಯೇಟರುಗಳಲ್ಲಿ ತಮಿಳು, ಹಿಂದಿ, ತೆಲುಗು, ಮಲಯಾಳಿ, ಇಂಗ್ಲಿಷ್ ಚಲನಚಿತ್ರಗಳ ಪ್ರದರ್ಶನಕ್ಕೆ ಮೊದಲ ಆದ್ಯತೆ ದೊರೆಯುತ್ತಿತ್ತು. ಕನ್ನಡ ಚಲನಚಿತ್ರರಂಗವು ಈ ಘಟ್ಟದಲ್ಲಿ ಶೋಚನೀಯ ಸ್ಥಿತಿಯನ್ನು ಕಂಡಿತ್ತು. ಬೆಂಗಳೂರಿನಲ್ಲಿ ನಡೆಯುತ್ತಿದ್ದ ರಾಮೋತ್ಸವಗಳು ತಮಿಳು ಕಲಾವಿದರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುತ್ತಿದ್ದವು. ಇದರಿಂದ ಕನ್ನಡದ ರಂಗಭೂಮಿ, ನೃತ್ಯ, ಸಂಗೀತ, ಹರಿಕಥೆ, ಜಾನಪದೀಯ ಕಾರ್ಯಕ್ರಮಗಳನ್ನು ನಂಬಿಕೊಂಡಿದ್ದ ಕಲಾವಿದರು ಕರ್ನಾಟಕದಲ್ಲಿಯೇ ಪ್ರಾತಿನಿಧ್ಯ, ಅವಕಾಶಗಳು ದೊರೆಯದೆ ವಂಚಿತರಾಗಿದ್ದರು. ಇಂಥ ಗಂಡಾಂತರಕಾರಿ ಪರಿಸ್ಥಿತಿಯಲ್ಲಿ ಕವಿ ಕುವೆಂಪು, ಲೋಹಿಯಾ ವಿಚಾರಧಾರೆಯಲ್ಲಿ ನಂಬಿಕೆ ಇಟ್ಟಿದ್ದ ಶಾಂತವೇರಿ ಗೋಪಾಲಗೌಡ, ಯು.ಆರ್. ಅನಂತಮೂರ್ತಿ, ಜೆ.ಎಚ್. ಪಟೇಲ್ ಮೊದಲಾದವರ ಕನ್ನಡದ ಕಳಕಳಿ ಒಂದಷ್ಟು ಉತ್ಸಾಹಿ ಯುವಕರನ್ನು ಸಂಘಟಿಸುವಂತೆ ಮಾಡಿತ್ತು. ಅವರುಗಳಲ್ಲಿ ಕೋಣಂದೂರು ಲಿಂಗಪ್ಪ, ಪೂರ್ಣಚಂದ್ರ ತೇಜಸ್ವಿ, ಕಡಿದಾಳ್ ಶಾಮಣ್ಣ, ಕೆ.ಎಚ್. ಶ್ರೀನಿವಾಸ ಮೊದಲಾದವರು ಪ್ರಮುಖರು. ಬಹುಪಾಲು ಯುವಕರೆ ಇದ್ದ ಈ ಸಂಘಟನೆಯು ೧೯೬೦ರ ವೇಳೆಗೆ 'ಕನ್ನಡ ಯುವಜನ ಸಭಾ' ಎಂಬ ಸಾಂಸ್ಥಿಕ ರೂಪವನ್ನು ಪಡೆದಿತ್ತು. ನಾಡಿನ ಪ್ರಮುಖ ಸಾಹಿತಿಗಳನ್ನು ಸೇರಿಸಿಕೊಂಡು ಬೆಂಗಳೂರಿನಲ್ಲಿ ಕನ್ನಡದ ಪರಿಸರವನ್ನು ಹುಟ್ಟುಹಾಕುವುದು ಇವರೆಲ್ಲರ ಆಶಯ. ಈ ಆಶಯಕ್ಕೆ ಕಾದಂಬರಿಕಾರ ಅ.ನ. ಕೃಷ್ಣರಾವ್, ವೀರಕೇಸರಿ ಸೀತಾರಾಮಶಾಸ್ತ್ರಿ, ಕರ್ಲಮಂಗಲಂ ಶ್ರೀಕಂಠಯ್ಯ, ನಾಡಿಗೇರ ಕೃಷ್ಣರಾವ್ ಮೊದಲಾದ ಹಿರಿಯರ ಪ್ರೋತ್ಸಾಹವು ದೊರೆಯಿತು. ಇವರೆಲ್ಲರೂ ಬೆಂಗಳೂರಿನಲ್ಲಿ ದೊಡ್ಡ ಸಮಾವೇಶವನ್ನು ನಡೆಸಿ ಕನ್ನಡ-ಕರ್ನಾಟಕಪರ ನಿರ್ಣಯಗಳನ್ನು ತೆಗೆದುಕೊಳ್ಳುವಲ್ಲಿ ಯಶಸ್ವಿಯಾದರು. ಇದರ ಪರಿಣಾಮವೇ ೪.೨.೧೯೬೨ರ 'ಸಭಾ'ದ ಮೊದಲ ಅಧಿವೇಶನ.

## ೮. 'ಸಭಾ'ದ ಮೊದಲ ಸಾರ್ವಜನಿಕ ಅಧಿವೇಶನ

ಬೆಂಗಳೂರಿನ ಕೆಂಪೇಗೌಡ ರಸ್ತೆಯ 'ಮೈಸೂರು ವಾಣಿಜ್ಯ ಭವನ'ದಲ್ಲಿ ಕನ್ನಡ ಯುವಜನ ಸಭೆಯ ಮೊದಲ ಅಧಿವೇಶನವು ಆರಂಭಗೊಂಡಿತು. ಎಲ್ಲ ಕನ್ನಡ ಕಾರ್ಯಕರ್ತರನ್ನು, ಸಂಘ-ಸಂಸ್ಥೆಗಳನ್ನು ಒಂದೆಡೆ ಸೇರುವಂತೆ ಮಾಡಿ ನಿರ್ಣಯ(ಠರಾವು)ಗಳನ್ನು ಪಾಸುಮಾಡಿದುದು ಈ ಸಮಾವೇಶದ ವಿಶೇಷತೆಗಳಲ್ಲಿ ಒಂದು. ನಾಡಿನ ಭಾಷೆ, ಸಂಸ್ಕೃತಿ, ಸಾಹಿತ್ಯ, ಕಲೆ, ಶಿಕ್ಷಣ, ಚಲನಚಿತ್ರ, ರೈಲ್ವೆ, ಭೂಪ್ರದೇಶ, ಬಂದರು, ಚುನಾವಣೆ ಮೊದಲಾದ ೧೫ ಪ್ರಮುಖ ನಿರ್ಣಯಗಳನ್ನು ಈ ಸಮ್ಮೇಳನದಲ್ಲಿ ಮಂಡಿಸಲಾಯಿತು. ಅಷ್ಟೇ ಅಲ್ಲದೆ ಕನ್ನಡಿಗರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ಒಂದು ವಾರಪತ್ರಿಕೆಯನ್ನೇ ಹೊರಡಿಸುವ ನಿರ್ಣಯ ತೆಗೆದುಕೊಂಡದ್ದು ಮಹತ್ತ್ವದ್ದು. ಕನ್ನಡ ಚಳವಳಿ ಚರಿತ್ರೆಯಲ್ಲಿ ಮೈಲಿಗಲ್ಲು ಎನ್ನಿಸಿಕೊಳ್ಳುವ ಆ ಪತ್ರಿಕೆಯೆ 'ಕನ್ನಡ ಯುವಜನ'. ಇದರಿಂದ ಚಳವಳಿಗೆ, ಚಳವಳಿಗಾರರಿಗೆ ಕನ್ನಡಕ್ಕಾಗಿ ಸಂಘಟಿತರಾಗಲು ಅನುಕೂಲಗಳಾದವು. ಅದರಲ್ಲೂ ಈ ಪತ್ರಿಕೆಯ ಸಂಪಾದಕತ್ವದ ಜವಾಬ್ದಾರಿಯನ್ನು ಹೊತ್ತವರು ಮ. ರಾಮಮೂರ್ತಿ. ಹೀಗಾಗಿ 'ಕನ್ನಡ'ವೆಂದರೆ 'ರಾಮಮೂರ್ತಿ' ಎನ್ನುವಂತೆ ಆಯಿತು.

ಸಮ್ಮೇಳನದಲ್ಲಿನ ಒಂದು ನಿರ್ಣಯದ ಪ್ರಕಾರ ರಾಮೋತ್ಸವದಂಥ ಕಾರ್ಯಕ್ರಮ ಗಳಲ್ಲಿ ಕನ್ನಡ ಕಲಾವಿದರಿಗೆ ಅವಕಾಶವನ್ನು ನೀಡುವುದು ಕಡ್ಡಾಯ. ಈ ನಿರ್ಣಯದ ಪ್ರತಿಯನ್ನು ಚಾಮರಾಜಪೇಟೆ, ಶೇಷಾದ್ರಿಪುರಂ ಮೊದಲಾದ ಕಡೆಗಳಲ್ಲಿದ್ದ ರಾಮೋತ್ಸವ ಸಮಿತಿಗಳಿಗೆ ಕಳುಹಿಸಿಕೊಡಲಾಗಿತ್ತು. ಆದರೆ ಈ ನಿರ್ಣಯಕ್ಕೆ ಯಾವುದೇ ಬಗೆಯ ಉತ್ತಮ ಪ್ರತಿಕ್ರಿಯೆ ವ್ಯಕ್ತ ಆಗಲಿಲ್ಲ. ಬದಲಾಗಿ ಚಾಮರಾಜಪೇಟೆಯ ರಾಮೋತ್ಸವ ಸಮಿತಿಯವರು ಕನ್ನಡ ಕಲಾವಿದರನ್ನು ಕರೆಸಲು ಒಪ್ಪಲಿಲ್ಲ. ಇದರಿಂದ ರಾಮಮೂರ್ತಿ ಮನೆಯಲ್ಲಿ ಕನ್ನಡ ಕಾರ್ಯಕರ್ತರು ಸಂಘಟಿತರಾಗಲು ಸಭೆಯನ್ನು ಕರೆಯಲಾಯಿತು. ಕೊನೆಗೆ ಕಬ್ಬನ್ ಪೇಟೆಯಲ್ಲಿನ 'ಬಡವರ ಬಳಗ'ದ ಸಭೆಯಲ್ಲಿ ರಾಮೋತ್ಸವದ ಕೊನೆಯ ದಿನ ಪ್ರತಿಭಟನೆಯನ್ನು ವ್ಯಕ್ತಪಡಿಸುವುದು ಎಂದು ನಿರ್ಣಯಿಸಲಾಯಿತು. ಆದರೆ ಅಂದು ಮದ್ರಾಸಿನಿಂದ ಬಂದಿದ್ದ ಎಂ.ಎಸ್. ಸುಬ್ಬಲಕ್ಷ್ಮಿಯವರ ಸಂಗೀತ ಕಚೇರಿಯಿದ್ದದ್ದು ಕಾಕತಾಳೀಯ. ರಾಮೋತ್ಸವ ಸಮಿತಿಯ ವಿರುದ್ಧ ಪ್ರತಿಭಟಿಸಲು ಹೊರಟಿದ್ದ ರಾಮಮೂರ್ತಿ, ಅ.ನ.ಕೃ ಹಾಗೂ ಪ್ರತಿಭಟನಕಾರರನ್ನು ತಮಿಳು ಸಂಗೀತಗಾರರ ವಿರುದ್ಧವೆಂದು ಅಂದಿನ ತಮಿಳು ಪತ್ರಿಕೆಗಳು ಬರೆದವು. ಕನ್ನಡಿಗರನ್ನು ಭಾಷಾ ಸಂಕುಚಿತರನ್ನಾಗಿಸುವ ಪ್ರಯತ್ನಗಳು ನಡೆದದ್ದು ಇಲ್ಲಿಂದಲೇ. ಆದರೆ ರಾಮಮೂರ್ತಿ ಅವರು ತಮ್ಮ 'ಕನ್ನಡ ಯುವಜನ' ಪತ್ರಿಕೆಯ ಮೂಲಕ 'ಗೋಮುಖ ವ್ಯಾಘ್ರ'ರನ್ನು ತರಾಟೆಗೆ ತೆಗೆದುಕೊಂಡು ಕನ್ನಡಿಗರು ಕಲಾಪ್ರೇಮಿಗಳೆಂದು ಬರೆದರು.

## ೯. ಕರ್ನಾಟಕ ಸಂಯುಕ್ತರಂಗ

ಕನ್ನಡ ಚಳವಳಿಯ ಮುನ್ನಡೆಗೆ ಅನೇಕ ಕನ್ನಡಪರವಾದ ಸಂಘ-ಸಂಸ್ಥೆಗಳು ಹುಟ್ಟಿಕೊಂಡವು. ಕನ್ನಡದ ವಾತಾವರಣವನ್ನು ನಿರ್ಮಿಸಲು ಹಾಗೂ ತಮಿಳು ಸಂಘಟನೆಗಳನ್ನು ಹತ್ತಿಕ್ಕಲು ಬೆಂಗಳೂರಿನಲ್ಲಿ ಈ ಸಂಘಗಳ ಸ್ಥಾಪನೆಗೆ ರಾಮಮೂರ್ತಿ, ಅ.ನ.ಕೃ ಅವರುಗಳು ಪ್ರೋತ್ಸಾಹಿಸಿದರು. ಈ ಸಂಘಟನೆಗಳು ನಾಡು, ನುಡಿ, ಸಾಹಿತ್ಯ, ಚರಿತ್ರೆ, ಸಂಸ್ಕೃತಿಗಳನ್ನು ಬಿಂಬಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಿ ಎಂಬುದು ಇವರಿಬ್ಬರ ಆಶಯವಾಗಿತ್ತು. ಆದರೆ ಇವು ಪ್ರತಿಭಟನೆಯನ್ನೇ ಪ್ರಧಾನವನ್ನಾಗಿಸಿ ಕೊಂಡಿದ್ದರಿಂದ ಸೂಕ್ತ ನಿರ್ದೇಶನಗಳನ್ನು ನೀಡುವ ಮಾತೃ ಸಂಸ್ಥೆಯ ಜರೂರು ಕಾಣಿಸಿಕೊಂಡಿತು. ಅದರ ಪರಿಣಾಮವೇ ೧೯೬೨ರಲ್ಲಿ ಹುಟ್ಟಿಕೊಂಡ 'ಕರ್ನಾಟಕ ಸಂಯುಕ್ತ ರಂಗ'. ಬೆಂಗಳೂರು ಮತ್ತು ನಾಡಿನ ಇತರೆ ಭಾಗಗಳಲ್ಲಿನ ಎಲ್ಲ ಕನ್ನಡ ಸಂಘ-ಸಂಸ್ಥೆಗಳನ್ನು 'ಸಂಯುಕ್ತ ರಂಗ' ದಡಿಗೆ ತರಲಾಯಿತು. ಈ ರಂಗಕ್ಕೆ ಅ.ನ.ಕೃ ಅಧ್ಯಕ್ಷರಾಗಿದ್ದರು. ಮ. ರಾಮಮೂರ್ತಿ ಇದರ ಪ್ರಧಾನ ಕಾರ್ಯದರ್ಶಿಗಳಾಗ ಬೇಕಾಯಿತು. ಇವರಿಬ್ಬರು ಪ್ರತಿದಿನವು ಬೆಂಗಳೂರಿನ ಬಡಾವಣೆಗಳಲ್ಲಿ ಕನ್ನಡಿಗರಲ್ಲಿ ಜಾಗೃತಿ ಮೂಡಿಸುವಂಥ ಭಾಷಣಗಳನ್ನು ಮಾಡಲಾರಂಭಿಸಿದರು. ಕನ್ನಡ ವಾತಾವರಣದ ನಿರ್ಮಿತಿಗೆ ಉತ್ಸಾಹಿ ತರುಣರು ಮುಂದಾಗದಿರಲಿಲ್ಲ.

ಬೆಂಗಳೂರಿನ ತಮಿಳರು ಈ ಸಂದರ್ಭದಲ್ಲಿ 'ದ್ರಾವಿಡ ಮುನ್ನೇತ್ರ ಕಳಗಂ' (ಡಿ.ಎಂ.ಕೆ) ಮೊದಲಾದ ರಾಜಕೀಯ ಪಕ್ಷಗಳಡಿಯಲ್ಲಿ ಒಂದುಗೂಡಲು ಆರಂಭಿಸಿದ್ದರು. ತಮಿಳು ಚಲನಚಿತ್ರಗಳಿಗೆ ಅದರಲ್ಲೂ ಎಂ.ಜಿ. ರಾಮಚಂದ್ರನ್ (ಎಂ.ಜಿ.ಆರ್) ನಟಿಸಿದ ಚಿತ್ರಗಳ ಬಿಡುಗಡೆಯ ಸಮಾರಂಭಗಳನ್ನು ಅದ್ದೂರಿಯಿಂದ ಸ್ವಾಗತ ಮಾಡಲು ಆರಂಭಿಸಿದರು. ಡಿ.ಎಂ.ಕೆ. ಪಕ್ಷದ ಕಪ್ಪು ಮತ್ತು ಕೆಂಪು ಬಣ್ಣದ ಬಾವುಟಗಳನ್ನು ತಮಿಳರು ತಮ್ಮ ಅಸ್ತಿತ್ವದ ಪ್ರತೀಕ, ಸಂಕೇತಗಳಾಗಿ ಬಳಸುವಂತೆ ಆಯಿತು. ಇದು ಕನ್ನಡ ಕಾರ್ಯಕರ್ತರನ್ನು ಕೆರಳಿಸದೆ ಬಿಟ್ಟಿರಲಿಲ್ಲ. ಕನ್ನಡ ಚಲನಚಿತ್ರಗಳಿಗೆ ಪ್ರೋತ್ಸಾಹ ದಾಯಕ ವಾತಾವರಣ ವನ್ನು ನಿರ್ಮಿಸುವಲ್ಲಿ ಕನ್ನಡಿಗರು ಚಳವಳಿಗಳನ್ನೇ ಮಾಡ ಬೇಕಾಯಿತು. ಕನ್ನಡ ಚಲನಚಿತ್ರಗಳ ಪ್ರದರ್ಶನಕ್ಕಾಗಿ ಹೋಟೆಲು ಹುಡುಗರು, ಬಸ್-ಆಟೋ ಚಾಲಕರು, ಕಾರ್ಮಿಕರು ಒತ್ತಾಯಗಳನ್ನು ತಂದರು. ಇವರುಗಳ ಮುಂದಾಳತ್ವ ವನ್ನು ವಹಿಸಿಕೊಳ್ಳುತ್ತಿದ್ದವರ ಪೈಕಿ ವಾಟಾಳ್ ನಾಗರಾಜರು ಒಬ್ಬರು. ಅಂದು ಜಿ.ವಿ. ಅಯ್ಯರ್, ರಾಜ ಕುಮಾರ್, ಬಾಲಕೃಷ್ಣ, ನರಸಿಂಹರಾಜು ಮೊದಲಾದವರು ಕನ್ನಡ ಚಲನಚಿತ್ರರಂಗವನ್ನು ಉಳಿಸಲು ಮುಂದಾಗಬೇಕಾಯಿತು. ಇದಕ್ಕೆ ಅ.ನ.ಕೃ., ರಾಮಮೂರ್ತಿ, ವಾಟಾಳ್ ಮೊದಲಾದ ಚಳವಳಿಕಾರರ ಬೆಂಬಲವು ಪೂರ್ಣಪ್ರಮಾಣ ದಲ್ಲಿ ದೊರೆಯಿತು. ಇಂಥ ಸನ್ನಿವೇಶದಲ್ಲಿ ಮ. ರಾಮಮೂರ್ತಿ ಅವರು ಬೆಂಗಳೂರಿನಲ್ಲಿ

ಸ್ವಾತಂತ್ರ್ಯ ಉತ್ಸವದ ರೀತಿಯಲ್ಲಿಯೇ ಕನ್ನಡ ರಾಜ್ಯೋತ್ಸವವನ್ನೂ ಆಚರಿಸಲು ಆಲೋಚಿಸಿದರು. ಇದರ ಪರಿಣಾಮವೇ ೧೯೭೩ರ ಮೊದಲ ಕನ್ನಡ ರಾಜ್ಯೋತ್ಸವ.

## ೧೦. ಮೊದಲ ಕನ್ನಡ ರಾಜ್ಯೋತ್ಸವ

ಈ ಹೊತ್ತಿನ ನವೆಂಬರ್ ಒಂದರ ಕನ್ನಡ ರಾಜ್ಯೋತ್ಸವದ ಆಚರಣೆಗೆ ನಾಂದಿ ಹಾಡಿದವರು ಚಳವಳಿಗಾರ ಮ. ರಾಮಮೂರ್ತಿ. ಇಂದು ನಾಡಿನಾದ್ಯಂತ ಆಚರಿಸುತ್ತಿರುವ ಈ ಉತ್ಸವ ಮೊದಲು ಆರಂಭಗೊಂಡಿದ್ದು ಬೆಂಗಳೂರಿನ ಸುಭಾಷ್ ನಗರದ (ಇಂದಿನ ಬಸ್ ನಿಲ್ದಾಣದ) ಮೈದಾನದಲ್ಲಿ. ನಗರದ ಎಲ್ಲ ಕನ್ನಡಪರ ಸಂಘಟನೆಗಳನ್ನು ಪೂರ್ವಭಾವಿ ಸಭೆಗೆ ಕರೆದ ರಾಮಮೂರ್ತಿ ಕಾರ್ಯಕ್ರಮದ ರೂಪುರೇಷೆಗಳನ್ನು ಸಿದ್ಧಪಡಿಸಿದ್ದರು. ತಾಯಿ ಭುವನೇಶ್ವರಿಯ ಮೆರವಣಿಗೆಯೊಂದಿಗೆ ಆರಂಭಗೊಂಡ ಕಾರ್ಯಕ್ರಮ ಜೈಕಾರಗಳನ್ನು ಕೂಗುವುದರೊಂದಿಗೆ ಉತ್ಸಾಹ ಮೂಡಿಸಿತ್ತು. ಲಕ್ಷಾಂತರ ಕನ್ನಡಿಗರು ಒಂದೆಡೆ ಸೇರಿ ರಾಜ್ಯೋತ್ಸವವನ್ನು ಆಚರಿಸಿದ್ದು ಗಮನಾರ್ಹ ಸಂಗತಿ. ರಾಮಮೂರ್ತಿ ಅವರಿಗೆ ಕೆಲವು ಗಣ್ಯರು ಈ ಉತ್ಸವಕ್ಕಾಗಿ ತಮ್ಮ ಸಹಕಾರವನ್ನು ನೀಡಿದ್ದರು. ಅಂಥವರಲ್ಲಿ ಶ್ರೀಮತಿ ಬೇಗಂ ಸಹ ಒಬ್ಬರು. ಇವರು ಎಂ.ಜಿ. ರಸ್ತೆಯಲ್ಲಿದ್ದ 'ಲಿಬರ್ಟಿ' ಚಿತ್ರಮಂದಿರದ ಮಾಲಿಕೆ. ಒಂದು ಸಾವಿರ ರೂಪಾಯಿ ನಗದು ಹಾಗೂ ಮೆರವಣಿಗೆಗಾಗಿ ತಮ್ಮ ತೆರೆದ ಕಾರೊಂದನ್ನು ಬೇಗಂ ನೀಡಿ ಪ್ರೋತ್ಸಾಹಿಸಿದ್ದರು. ಎಂ.ಪಿ.ಎಲ್.ಶಾಸ್ತ್ರಿ ಅವರಿಂದ ರಾಜ್ಯೋತ್ಸವ ಭಾಷಣ, ವಿವಿಧ ಕಲಾ ತಂಡಗಳಿಂದ ಮನರಂಜನಾ ಕಾರ್ಯಕ್ರಮಗಳನ್ನು ರಾಮಮೂರ್ತಿ ಆಯೋಜಿಸಿದ್ದರು. ಕನ್ನಡ ಕಾರ್ಯಕರ್ತರ ಸಹಕಾರದ ಜೊತೆಗೆ ಈ ಉತ್ಸವವನ್ನು ನೆನಪಿನಲ್ಲಿ ಉಳಿಯುವಂತೆ ಮಾಡುವುದು ರಾಮಮೂರ್ತಿ ಅವರ ಪ್ರಧಾನ ಆಶಯವಾಗಿತ್ತು. ಏಕೆಂದರೆ ಆ ಮೂಲಕ ನಾಡಿನ ಇತರೆಡೆಗಳಲ್ಲಿ ಇದೇ ರೀತಿಯ ರಾಜ್ಯೋತ್ಸವಗಳು ನಡೆಯಲಿ ಎಂಬ ಕನಸು ಅವರದು. ಆ ಕನಸು ಕ್ರಮೇಣ ನನಸಾಗದೇ ಉಳಿಯಲಿಲ್ಲ.

ಇಂಥ ಉತ್ಸವಗಳ ಆಚರಣೆಗೆ, ನಿರ್ವಹಣೆಗೆ ಉತ್ಸಾಹ ಬಹಳ ಪ್ರಧಾನವಾದುದು. ಉತ್ಸಾಹದ ಜೊತೆಗೆ ಕನ್ನಡದ ಮೇಲಿನ ಅಪಾರವಾದ ಪ್ರೀತಿಯಿದ್ದ ರಾಮಮೂರ್ತಿ ಈ ರಾಜ್ಯೋತ್ಸವವನ್ನು ಯಶಸ್ವಿಗೊಳಿಸಲು ತೊಂದರೆಯಾಗಲಿಲ್ಲ. ಆದರೆ ಉತ್ಸವವೆಲ್ಲ ಮುಗಿದ ಮೇಲೆ ಛಾಯಾಚಿತ್ರಗಳನ್ನು ತೆಗೆದವರಿಗೆ, ಲಾರಿಗಳ ಮಾಲಿಕರಿಗೆ, ಚಪ್ಪರದವರಿಗೆ, ದೀಪಗಳವರಿಗೆ, ಸ್ತಬ್ಧ ಚಿತ್ರಗಳನ್ನು ರಚಿಸಿದವರಿಗೆ-ಮೊದಲಾದವರಿಗೆ ಹಣ ಪಾವತಿಸಲು ಸಾಧ್ಯವಾಗದೆ ಹೋಯಿತು. ಆದರೂ ಎದೆಗುಂದದೆ ಅವರೆಲ್ಲರಿಗೂ ಸಮಜಾಯಿಷಿ ಹೇಳಿ ಬಗೆಹರಿಸಿದ್ದು ರಾಮಮೂರ್ತಿ ಅವರ ವಿಶೇಷತೆ. ಈ ಸಂದರ್ಭದಲ್ಲಿ ಅವರು ರಾಜ್ಯೋತ್ಸವಕ್ಕೆ ಬಂದಿದ್ದ ಪ್ರತಿಯೊಬ್ಬ ಕನ್ನಡಿಗ ತಲಾ ಒಂದು ರೂಪಾಯಿ

ಕಾಣಿಕೆ ನೀಡಿದ್ದರೂ ತಾವು ಸಾಲಗಾರರಾಗುವುದನ್ನು ತಪ್ಪಿಸಬಹುದಿತ್ತು ಎಂಬ ಅಳಲನ್ನು ತೋಡಿಕೊಂಡದ್ದೂ ಉಂಟು. ಕನ್ನಡಕ್ಕಾಗಿ ತನು-ಮನ-ಧನಗಳನ್ನು ಧಾರೆಯೆರೆದಿದ್ದ ರಾಮಮೂರ್ತಿ ಅವರಿಗೆ ಇತರರು ಹಾಗೆಯೇ ನಡೆದುಕೊಳ್ಳುವುದು ಅನಿವಾರ್ಯ ಅನ್ನಿಸಿತ್ತು. ಆದರೆ ವಾಸ್ತವವಾಗಿ ಮುಂದೆ ಬಂದವರು ತೀರ ವಿರಳ.

## ೧೧. ಕನ್ನಡ ಚಲನಚಿತ್ರರಂಗ ಹಾಗೂ ಮ. ರಾಮಮೂರ್ತಿ

೧೯೬೦ರ ದಶಕದಲ್ಲಿ ಕನ್ನಡ ಚಲನಚಿತ್ರರಂಗದ ಸ್ಥಿತಿಗತಿಗಳು ಅವಮಾನಕರವಾದ, ಹೀನಾಯವಾದ ಹಂತವನ್ನು ತಲುಪಿದ್ದವು. ಇದಕ್ಕೆ ಕನ್ನಡೇತರರ ಪ್ರಾಬಲ್ಯದ ಜೊತೆಗೆ ನಾಡಿನ ಪರಿಸ್ಥಿತಿಗಳೂ ಕಾರಣ ಆಗಿದ್ದವು. ನಮ್ಮಲ್ಲಿ ಚಲನಚಿತ್ರಗಳ ನಿರ್ಮಾಣಕ್ಕೆ ಬೇಕಾದ ಅನುಕೂಲಗಳು ಇರಲಿಲ್ಲ. ಬದಲಾಗಿ ಬೇರೆ ರಾಜ್ಯಗಳಿಗೆ ಹೋಗಿ ತಾಂತ್ರಿಕವಾದ ಸವಲತ್ತುಗಳ ಉಪಯೋಗ ಪಡೆಯಬೇಕಿತ್ತು. ನಮ್ಮಲ್ಲಿ ಒಳ್ಳೆಯ ಸಾಹಿತಿ, ಕಲಾವಿದರು, ತಾಂತ್ರಿಕ ತಜ್ಞರು, ನಿರ್ಮಾಪಕರು, ನಿರ್ದೇಶಕರುಗಳು ಇದ್ದರಾದರೂ, ಇವರೆಲ್ಲ ಬೇರೆ ಭಾಷೆಗಳಿಗೆ ವಲಸೆ ಹೋಗಿ ಅಪಾರವಾದ ಹಣ-ಖ್ಯಾತಿಗಳನ್ನು ಗಳಿಸಿದ್ದೇ ಹೆಚ್ಚು. ಇದಕ್ಕೆ ನಮ್ಮಲ್ಲಿ ಒಳ್ಳೆಯ 'ಸ್ಟುಡಿಯೋ'ಗಳು ಇಲ್ಲದೇ ಇದ್ದದು ಮತ್ತೊಂದು ಕಾರಣ. ಕನ್ನಡದ ನಿರ್ಮಾಪಕರು ಮದರಾಸು, ಸೇಲಂ, ಕೊಯಂಬತ್ತೂರು, ಮುಂಬಯಿ, ಕೊಲ್ಹಾಪುರ, ಪುಣೆಗಳಿಗೆ ಸ್ಟುಡಿಯೋಗಳನ್ನರಸಿ ಹೋಗುತ್ತಿದ್ದರು. ಅಲ್ಲಿ ಎಲ್ಲ ಬಗೆಯ ಅವಮಾನ, ಅವ್ಯವಸ್ಥೆಗಳನ್ನು ಅನುಭವಿಸಿ ಚಲನಚಿತ್ರವನ್ನು ಪೂರ್ಣಗೊಳಿಸಿಕೊಂಡು ಬರುವುದು ದೊಡ್ಡ ಸಾಹಸವೇ ಆಗಿತ್ತು. ಪೂರ್ಣಗೊಂಡ ಕನ್ನಡ ಚಲನಚಿತ್ರವನ್ನು ನಾಡಿಗೆ ವಾಪಸ್ಸು ಬಂದು 'ಬಿಡುಗಡೆ'ಗೊಳಿಸುವುದು ಸುಲಭ ಸಾಧ್ಯವಾಗಿರಲಿಲ್ಲ. ಏಕೆಂದರೆ ನಮ್ಮಲ್ಲಿನ ಥಿಯೇಟರುಗಳ ಮಾಲಿಕರು ಕನ್ನಡೇತರ ಭಾಷೆಗಳ ಚಲನಚಿತ್ರಗಳಿಗೆ ಮೊದಲ ಆದ್ಯತೆ ನೀಡುತ್ತಿದ್ದುದೇ ಹೆಚ್ಚು. ಇಲ್ಲಿ ತಮಿಳು, ತೆಲುಗು, ಹಿಂದಿ, ಮಲಯಾಳ, ಇಂಗ್ಲಿಷ್ ಚಲನಚಿತ್ರಗಳಿಗೆ ಬೇಡಿಕೆಯಿದ್ದಷ್ಟು ಕನ್ನಡ ಚಲನಚಿತ್ರಗಳಿಗೆ ಇರಲಿಲ್ಲ. ಕನ್ನಡಿಗರ ನಿರಭಿಮಾನದ ಧೋರಣೆಗಳಿಂದ 'ಡಬ್ಬಿಂಗ್' ಹಾವಳಿಯೂ ನೆಲೆಯೂರಿತು. ಇತರೆ ಭಾಷೆಗಳಲ್ಲಿನ ಚಿತ್ರಗಳಿಗೆ ಕನ್ನಡದ ಸಂವಾದವನ್ನು 'ಡಬ್' ಮಾಡಿ ಕನ್ನಡತನದ ಸೊಗಡಿಲ್ಲದಂತೆ ಮಾಡಲಾಗಿತ್ತು. ಅಪರೂಪಕ್ಕೆ ಬಿಡುಗಡೆ ಆಗುತ್ತಿದ್ದ ಕನ್ನಡದ ಚಿತ್ರಗಳಿಗೆ ಥಿಯೇಟರುಗಳು ದೊರೆಯದೆ ಪರದಾಡಿ ನಗರದಿಂದ ಹೊರತಾದ ತಾಲ್ಲೂಕು ಪ್ರದೇಶಗಳಲ್ಲಿ ಬಿಡುಗಡೆಗೊಳಿಸುವುದು ಅನಿವಾರ್ಯ ಆಗುತ್ತಿತ್ತು. ನಗರದ ಜನನಿಬಿಡ ಕೆಂಪೇಗೌಡ ರಸ್ತೆ, ಗಾಂಧಿನಗರ (ಇಂದಿನ ಮೆಜೆಸ್ಟಿಕ್)ದ ಸುತ್ತಮುತ್ತಣ ಚಲನಚಿತ್ರ ಮಂದಿರಗಳು ಕನ್ನಡೇತರ ಚಿತ್ರಗಳ ಪ್ರದರ್ಶನಕ್ಕೆ ಮಾತ್ರ ಮೀಸಲು. ಒಂದು ವೇಳೆ ಇಲ್ಲಿ ಬಿಡುಗಡೆಯಾದರೂ ಒಂದೇ ವಾರದೊಳಗೆ ಆ ಚಿತ್ರವನ್ನು ತೆಗೆದುಹಾಕಲಾಗುತ್ತಿತ್ತು. ಇಂಥ ಸಂದಿಗ್ಧ ಪರಿಸರದಲ್ಲಿ ಕನ್ನಡ ಚಲನಚಿತ್ರಗಳನ್ನು

ತಯಾರಿಸಲು ಯಾವ ನಿರ್ಮಾಪಕರೂ ಬಂಡವಾಳ ಹೂಡುತ್ತಿರಲಿಲ್ಲ. ಇದಕ್ಕೆ ಸರಕಾರದಿಂದಲೂ ಪ್ರೋತ್ಸಾಹ ದೊರೆತಿರಲಿಲ್ಲ. ಇಂಥ ಸನ್ನಿವೇಶದಲ್ಲಿ ಚಳವಳಿಯ ಮುಂಚೂಣಿಯಲ್ಲಿದ್ದ ಕನ್ನಡದ ಕಾರ್ಯಕರ್ತರು ಚಲನಚಿತ್ರರಂಗವನ್ನು ಪರಿಗಣಿಸಿದರು. ಅವರುಗಳಲ್ಲಿ ಮ. ರಾಮಮೂರ್ತಿ ಅವರ ತೊಡಗಿಸಿಕೊಳ್ಳುವಿಕೆ ದಾಖಲಾರ್ಹ ವಾದುದು.

ಮ. ರಾಮಮೂರ್ತಿ ಅವರು (ಅ.ನ.ಕೃ ಅವರನ್ನೊಳಗೊಂಡಂತೆ) ಕನ್ನಡ ಚಲನಚಿತ್ರ ಗಳ ಅಭಿಮಾನಿಗಳನ್ನು ಹುಟ್ಟುಹಾಕುವಲ್ಲಿ ಅನೇಕ ಪ್ರಯತ್ನಗಳನ್ನು ಮಾಡಿದರು. ನಮ್ಮ ಕಲಾವಿದರುಗಳಿಗೆ, ಸಾಹಿತಿಗಳಿಗೆ, ನಿರ್ಮಾಪಕರುಗಳಿಗೆ ಭರವಸೆಯ ವಾತಾವರಣ ವನ್ನು ನಿರ್ಮಿಸಿದ್ದು ಗಮನಾರ್ಹ. ಈ ವೇಳೆಯಲ್ಲಿಯೇ ವಾಟಾಳ್ ನಾಗರಾಜರಂಥ ಯುವಕರು ಚಳವಳಿಗೆ ಧುಮುಕಿದ್ದು. 'ಕನ್ನಡ ಯುವಜನ ಸಭಾ', 'ಸಂಯುಕ್ತರಂಗ'ದ ವೇದಿಕೆಗಳಲ್ಲೂ ನಮ್ಮ ಚಲನಚಿತ್ರಗಳಿಗೆ ಪ್ರೋತ್ಸಾಹಿಸುವ ಠರಾವುಗಳನ್ನು ಮಂಡಿಸಿ ರಾಮಮೂರ್ತಿ ಕಾರ್ಯಶೀಲರಾದರು. ವಾಟಾಳ್ ಮೊದಲಾದವರು ಹೋಟೆಲು, ಸಣ್ಣ-ಪುಟ್ಟ ಕೈಗಾರಿಕೆಗಳಲ್ಲಿನ ಹುಡುಗರನ್ನು ಒಂದುಗೂಡಿಸಿ ಕನ್ನಡೇತರ ಚಲನಚಿತ್ರಗಳನ್ನು ಪ್ರದರ್ಶಿಸುತ್ತಿದ್ದ ಚಿತ್ರಮಂದಿರಗಳ ಮುಂದೆ ಪ್ರದರ್ಶನ-ಮೆರವಣಿಗೆಗಳನ್ನು ಮಾಡಿದ್ದು ಉಂಟು. ಇದಕ್ಕೆ ಮ. ರಾಮಮೂರ್ತಿ ಅವರ ಸಂಪೂರ್ಣ ಬೆಂಬಲವೂ ಇತ್ತು.

ಕನ್ನಡ ಚಲನಚಿತ್ರಗಳಿಗೆ ಭರವಸೆಯ ವಾತಾವರಣ ಮೂಡಿಸಲು ಕನ್ನಡ ಚಳವಳಿಗಾರರು ಶ್ರಮಿಸಿದರು. ಇದಕ್ಕೆ ಬೆಂಬಲವಾಗಿ 'ಕನ್ನಡ ಚಲನಚಿತ್ರ ಕಲಾವಿದರ ಸಂಘ'ವೇ ಹುಟ್ಟಿಕೊಂಡಿತು. ಮೇರು ನಟ ರಾಜಕುಮಾರ್, ಬಾಲಕೃಷ್ಣ ನರಸಿಂಹರಾಜು, ಜಿ.ವಿ. ಅಯ್ಯರ್ ಅವರನ್ನೊಳಗೊಂಡ ಈ ಸಂಘ ತಾನೇ ಬಂಡವಾಳ ಹೂಡಿ ಚಲನಚಿತ್ರಗಳನ್ನು ನಿರ್ಮಾಣ ಮಾಡಿದ್ದೂ ಇದೆ. ನಮ್ಮಲ್ಲಿಯೇ ಸ್ಟುಡಿಯೋಗಳನ್ನು ತೆರೆಯಲು ಪ್ರೋತ್ಸಾಹವು ದೊರೆಯಿತು. ಈ ನಿಟ್ಟಿನಲ್ಲಿ ಹುಟ್ಟಿಕೊಂಡಿದ್ದೇ ಚಾಮುಂಡೇಶ್ವರಿ, ಕರ್ನಾಟಕ, ಅಭಿಮಾನಿ ಮೊದಲಾದ ಸ್ಟುಡಿಯೋಗಳು. ರಾಮಮೂರ್ತಿ ಅವರು ರಾಜ್ಯೋತ್ಸವದ ಸಂದರ್ಭಗಳಲ್ಲಿ ಎಲ್ಲೆಡೆ ಕನ್ನಡ ಚಲನಚಿತ್ರಗಳನ್ನು ಪ್ರದರ್ಶಿಸಲು ಕಡ್ಡಾಯಪಡಿಸಿದರು.

ತಮಿಳುನಾಡಿನಲ್ಲಿ ಡಿ.ಎಂ.ಕೆ. ಪಕ್ಷವು ರಾಜಕೀಯವಾಗಿ ಬಲಿಷ್ಠವಾಗಲು ಚಲನಚಿತ್ರ ವನ್ನು ಅದರಲ್ಲೂ ಎಂ.ಜಿ. ರಾಮಚಂದ್ರ (ಎಂ.ಜಿ.ಆರ್) ಅವರನ್ನು ಬಳಸಿಕೊಂಡಿತ್ತು. ಎಂ. ಕರುಣಾನಿಧಿಯವರು ಸಹ ಸ್ವತಃ ಚಿತ್ರಸಾಹಿತ್ಯವನ್ನು ರಚಿಸುತ್ತಿದ್ದುದು ಉಂಟು. ಇಂಥ ವಾತಾವರಣ ನಮ್ಮಲ್ಲಿ ಇರಲಿಲ್ಲ. ಬದಲಾಗಿ ಒಳ್ಳೆಯ ಚಿತ್ರ ಸಾಹಿತಿಗಳು, ಕಲಾವಿದರು ಹೆಚ್ಚೆಚ್ಚು ತೊಡಗಿಸಿಕೊಳ್ಳುವ ವಾತಾವರಣ ಮೂಡಿಬಂದಿತು. ಈ ಸಂದರ್ಭದಲ್ಲಿ ರಾಮಮೂರ್ತಿ ಹಾಗೂ ಚಳವಳಿಗಾರರ ದೆಸೆಯಿಂದ ಒಳ್ಳೆಯ ಕನ್ನಡ ಚಿತ್ರಗಳು ತಯಾರಾಗತೊಡಗಿದವು. ಕಣಗಲ್ ಪ್ರಭಾಕರ್ ಶಾಸ್ತ್ರಿ, ನಾಗೇಂದ್ರರಾವ್,

ಬಿ.ಆರ್. ಪಂತುಲು, ಹುಣಸೂರು ಕೃಷ್ಣಮೂರ್ತಿ, ಟಿ.ಜಿ. ಲಿಂಗಪ್ಪ, ಎಸ್.ಕೆ. ಕರೀಂಖಾನ್, ಕು.ರಾ. ಸೀತಾರಾಮಶಾಸ್ತ್ರಿ, ಜಿ.ವಿ. ಅಯ್ಯರ್, ಪುಟ್ಟಣ್ಣ ಮೊದಲಾದವರು ಕ್ರಿಯಾಶೀಲರಾದದ್ದು ಈ ಸನ್ನಿವೇಶದಲ್ಲಿಯೆ.

ಮ. ರಾಮಮೂರ್ತಿ, ಅ.ನ.ಕೃ, ವಾಟಾಳ್ ಮೊದಲಾದವರ ಚಳವಳಿ ಪ್ರಯತ್ನಗಳಿಂದ ಕನ್ನಡ ಚಲನಚಿತ್ರರಂಗ ಪಕ್ವಗೊಂಡಂತೆಲ್ಲಾ ತಮಿಳರ ಉಪಟಳವೂ ಆರಂಭಗೊಂಡಿತು. ಅಲ್ಪಸಂಖ್ಯಾತ ಕನ್ನಡಿಗರಿದ್ದ ಕಡೆಗಳಲ್ಲಿ ತಮಿಳರದೇ ಅಟ್ಟಹಾಸವಾಗಿತ್ತು. ಎಂ.ಜಿ.ಆರ್., ಶಿವಾಜಿ ಗಣೇಶನ್ ಮೊದಲಾದವರ ತಮಿಳು ಚಿತ್ರಗಳಿಗೆ ಬೆಂಗಳೂರಿನಲ್ಲೂ 'ಸ್ಟಾರ್'(ಬಿದಿರಿನ ನಕ್ಷತ್ರ)ಗಳನ್ನು, ಹೂಮಾಲೆಗಳನ್ನು ಹಾಕಿ ಕನ್ನಡಿಗರನ್ನು ಕೆರಳಿಸುವ, ಹಿಂಸಿಸುವ ಯತ್ನಗಳು ಆರಂಭ ಆದವು. ಈ ಸನ್ನಿವೇಶದಲ್ಲಿ (೧೯೬೪) ಹುಟ್ಟಿಕೊಂಡದ್ದೇ 'ಕಾಂಚಿ ತಲೈವನ್' ತಮಿಳು ಚಲನಚಿತ್ರದ ಪ್ರತಿಭಟನ ಚಳವಳಿ.

ಬಾದಾಮಿ ಚಾಲುಕ್ಯರ ದೊರೆ ಇಮ್ಮಡಿ ಪುಲಕೇಶಿ. ಈತನಿಗೂ ಕಂಚಿಯ ಪಲ್ಲವರ ದೊರೆ ಮೊದಲನೆಯ ನರಸಿಂಹವರ್ಮನಿಗೂ ನಡೆದ ಯುದ್ಧದ ಕಥೆಯೇ 'ಕಾಂಚಿ ತಲೈವನ್' ಎಂಬ ತಮಿಳು ಚಲನಚಿತ್ರ. ಇದರಲ್ಲಿ ಪುಲಕೇಶಿಯನ್ನು ತಮಿಳು ದೊರೆ ಸೋಲಿಸುತ್ತಾನೆ. ಅಲ್ಲದೆ ಕನ್ನಡಿಗರ ಸಂಕೇತದ ಬಾವುಟವನ್ನು ಕಾಲಿನಲ್ಲಿ ತುಳಿಯುವ ದೃಶ್ಯಗಳನ್ನು ಚಿತ್ರೀಕರಿಸಲಾಗಿತ್ತು. ಚರಿತ್ರೆಯಲ್ಲಿನ ಇಂಥ ಸೂಕ್ಷ್ಮತೆಗಳು ಹಾಗೂ ವೈಯಕ್ತಿಕ ನೆಲೆಗಳಲ್ಲಿ ಪ್ರತಿಬಿಂಬಿತವಾದವು. ಬೆಂಗಳೂರಿನ ತಮಿಳರು ಇದರಿಂದ ಕನ್ನಡಿಗರನ್ನು ಗೇಲಿಮಾಡುವಂತಾಯಿತು. ಇದರಿಂದ ಕುಪಿತರಾದ ರಾಮಮೂರ್ತಿ ಅವರ ಕಾರ್ಯಕರ್ತರು ('ಸಂಯುಕ್ತರಂಗ' ದವರು) 'ನ್ಯೂಸಿಟಿ' ಚಿತ್ರಮಂದಿರಕ್ಕೆ ಕಲ್ಲು ತೂರಿ ಭಗ್ನಗೊಳಿಸಿದರು. ಶಾಂತ ರೀತಿಯಲ್ಲಿ ಪ್ರತಿಭಟಿಸಲು ಕೇಳಿಕೊಂಡದ್ದು ಪ್ರಯೋಜನಕ್ಕೆ ಬರಲಿಲ್ಲ. ಪರಿಸ್ಥಿತಿ ವಿಕೋಪಕ್ಕೆ ಹೋದಾಗ ಮ. ರಾಮಮೂರ್ತಿ, ಅ.ನ.ಕೃ ಅವರನ್ನೊಳಗೊಂಡಂತೆ ಇತಿಹಾಸ ತಜ್ಞರು, ವಿದ್ವಾಂಸರು ಚಿತ್ರದಲ್ಲಿನ ಕೆಲವು ಭಾಗಗಳನ್ನು ಕತ್ತರಿಸಲು ಸಲಹೆಯಿತ್ತರು. ಆದರೆ ಈ ಚಿತ್ರ 'ಮಿನರ್ವ' ಚಿತ್ರಮಂದಿರದಲ್ಲಿ ಮರುಪ್ರದರ್ಶನಗೊಂಡಾಗ ತಮಿಳರ ಹಾಗೂ ಕನ್ನಡಿಗರ ಮಧ್ಯೆ ಹಿಂಸೆಗಳು ಮತ್ತೆ ಆರಂಭವಾದವು. ಇದಕ್ಕೆ ಕಾರಣ ಆಕ್ಷೇಪಾರ್ಹ ಭಾಗಗಳಲ್ಲಿ ಕೆಲವು ದೃಶ್ಯಗಳನ್ನು ಹಾಗೆಯೇ ಪ್ರದರ್ಶಿಸಿದ್ದು. ಚಲನಚಿತ್ರ ಮಂದಿರವು ಚಳವಳಿಗಾರರಿಂದ ಸಾಕಷ್ಟು ಧ್ವಂಸಗೊಂಡಿತು. ಇಂಥ ಉದ್ವೇಗದ ಚಳವಳಿ ಪ್ರಕ್ರಿಯೆಗಳು ಅ.ನ.ಕೃ ಹಾಗೂ ಮ. ರಾಮಮೂರ್ತಿ ಅವರ ನಡುವೆ ತಾತ್ವಿಕ ಭಿನ್ನಾಭಿಪ್ರಾಯಗಳನ್ನು ಸೃಷ್ಟಿಸಿದವು. ಅ.ನ.ಕೃ ಕನ್ನಡ ಚಳವಳಿಯಿಂದ ಹಿಂದಕ್ಕೆ ಸರಿದದ್ದು ಈ ಘಟನೆಯಿಂದಲೇ. 'ಭಾವೋದ್ವೇಗದ ಅನಿವಾರ್ಯತೆ'ಯೆಂದು ಸಮರ್ಥಿಸಿಕೊಂಡ ಮ. ರಾಮಮೂರ್ತಿ ಅವರು ಅಲ್ಲಿಂದ ಮುಂದಕ್ಕೆ ಚಳವಳಿಯನ್ನು ಇನ್ನಷ್ಟು ಕ್ರಿಯಾತ್ಮಕವಾಗಿ ನಡೆಸಲು ಮುಂದಾದರು. ಆದರೆ ರಾಮಮೂರ್ತಿ ಅವರ ಆಶಯವೂ ಸಹ ಹಿಂಸಾತ್ಮಕ ಚಳವಳಿ ಸ್ವರೂಪದ್ದಲ್ಲ.

ಭದ್ರಾವತಿ, ಹಾಸನ ಮೊದಲಾದ ಕಡೆಗಳಲ್ಲೂ ಈ ಚಲನಚಿತ್ರವು ಪ್ರದರ್ಶನಗೊಂಡಂತೆಲ್ಲಾ ಪ್ರತಿಭಟನೆಗಳು ವ್ಯಕ್ತಗೊಂಡವು. ರಾಮಮೂರ್ತಿ ಅವರು, ಭದ್ರಾವತಿಯಲ್ಲಿ 'ಕಾಂಚಿ ತಲೈವನ್' ಚಲನಚಿತ್ರದ ಪ್ರದರ್ಶನವನ್ನು ತಡೆಯುವಂತೆ ಪೊಲೀಸರನ್ನು ಕೋರಿದರು. ಆದರೆ ಪ್ರಯೋಜನವಾಗಲಿಲ್ಲ. ಹೀಗಾಗಿ ಅವರೇ ಖುದ್ದಾಗಿ, ಕಾರ್ಯಕರ್ತರೊಂದಿಗೆ ತಡೆಯಲು ಹೋಗಿ ಬಂಧನಕ್ಕೆ ಒಳಗಾದರು. ಇಲ್ಲಿಂದ ಮುಂದಕ್ಕೆ ಅವರ ಮೇಲೆ ಪೊಲೀಸ್ ಮೊಕದ್ದಮೆಗಳು ದಾಖಲಾಗುತ್ತಾ ಹೋದವು. ವಂದೇಮಾತರಂ, ಭೃರ್ತಹರಿ ಮೊದಲಾದ ಚಲನಚಿತ್ರಗಳಲ್ಲಿಯೂ ಕನ್ನಡಿಗರನ್ನು ಕೆರಳಿಸುವ ಸನ್ನಿವೇಶಗಳಿದ್ದುದರಿಂದ ಮ. ರಾಮಮೂರ್ತಿ ಹಾಗೂ ಚಳವಳಿಗಾರರೂ ತೀವ್ರವಾಗಿ ಪ್ರತಿಕ್ರಿಯಿಸಿದ್ದುಂಟು.

## ೧೨. ಹಿರಿಯೂರಿನ ಬಾವುಟದ ಘಟನೆ

ಅಚ್ಚ ಕನ್ನಡದ ಪ್ರದೇಶ ಚಿತ್ರದುರ್ಗದ ಹಿರಿಯೂರು. ಇಲ್ಲಿ ಮಾರಿಕಣಿವೆ (ವೇದಾವತಿ) ಅಣೆಕಟ್ಟಿನ ಕೆಲಸ ಆರಂಭವಾದಾಗ ಅನೇಕ ತಮಿಳರು ಕೂಲಿ ಕೆಲಸಕ್ಕಾಗಿ ಬಂದವರು ಇಲ್ಲಿಯೇ ನೆಲೆಸುವಂತಾಗಿತ್ತು. ಜಮೀನು, ಮನೆ-ಮಠಗಳೊಂದಿಗೆ ನೆಲೆಸಿ ಕನ್ನಡಿಗರಿಗಿಂತ ಬಹುಸಂಖ್ಯಾತರಾಗಿದ್ದರು. ತಮಿಳರ ಡಿ.ಎಂ.ಕೆ. ಪಕ್ಷವನ್ನೇ ಇಲ್ಲಿನ ಪುರಸಭೆಗೂ ಆಯ್ಕೆ ಮಾಡಿದ್ದರು. ಈ ಪಕ್ಷದ ನಾಲ್ವರು ಸದಸ್ಯರು ಗೆದ್ದುಬಂದು ಊರಿನ ಮಧ್ಯದ ಸರ್ಕಲ್ಲಿನಲ್ಲಿ ಡಿ.ಎಂ.ಕೆ. ಬಾವುಟ ಹಾರಾಡುವಂತಾಗಿತ್ತು. ಇದನ್ನು ತೆಗೆಸಲು ಸ್ಥಳೀಯ ಕನ್ನಡಿಗರು ಅಂದಿನ ಮುಖ್ಯಮಂತ್ರಿ ಎಸ್. ನಿಜಲಿಂಗಪ್ಪ, ಗೃಹಮಂತ್ರಿ ಆರ್.ಎಂ. ಪಾಟೀಲರವರೆಗೂ ಅಹವಾಲನ್ನು ತೆಗೆದುಕೊಂಡು ಹೋಗಿದ್ದರು. ಆದರೆ ಪ್ರಯೋಜನಕ್ಕೆ ಬಂದಿರಲಿಲ್ಲ. ಕೊನೆಗೆ 'ಸಂಯುಕ್ತರಂಗ'ದ ಮ. ರಾಮಮೂರ್ತಿ ಅವರನ್ನು ಸ್ಥಳಕ್ಕೆ ಭಾಷಣಕ್ಕಾಗಿ ಆಹ್ವಾನಿಸಲಾಯಿತು. ಇದರೊಂದಿಗೆ ನಾಡಿಗೇರ ಕೃಷ್ಣರಾವ್, ಸ.ಕೃ.ಸಂಪಂಗಿ ಸತ್ಯನಾರಾಯಣ, ತ.ರಾ. ಸುಬ್ಬರಾವ್ ಹಿರಿಯೂರಿಗೆ ಬಂದಿಳಿದರು. ಆದರೆ ಇವರುಗಳನ್ನು ಆಹ್ವಾನಿಸಿದವರೇ ನಾಪತ್ತೆ ಆಗಿದ್ದರು. ಸ್ಥಳೀಯ ಕಾಂಗ್ರೆಸಿಗರು ತಮಿಳರ ಓಟುಗಳಿಗಾಗಿ ಡಿ.ಎಂ.ಕೆ. ಧ್ವಜದ ತಂಟೆಗೆ ಹೋಗಿರಲಿಲ್ಲ. ಇದನ್ನರಿತ ಮ. ರಾಮಮೂರ್ತಿ ಅವರು ಹಿರಿಯೂರಿನಲ್ಲಿ ಸಭೆಯನ್ನು ಕರೆದು ಸರ್ಕಲ್ಲಿನಲ್ಲಿದ್ದ ಡಿ.ಎಂ.ಕೆ. ಬಾವುಟವನ್ನು ತೆಗೆಯಲು ತಮ್ಮೊಡನೆ ಬರಲು ಕೇಳಿಕೊಂಡರು. ಆಯಾ ಪಕ್ಷದ ಬಾವುಟಗಳು ತಮ್ಮ ಸ್ವಂತ ಕಟ್ಟಡಗಳ ಮೇಲೆ ಮಾತ್ರ ಹಾರಾಡಬೇಕೆಂಬ ನಿಯಮವಿತ್ತು. ಇದನ್ನು ಮುರಿದಿದ್ದ ತಮಿಳರ ಆಕ್ರಮಣಕಾರಿ ಪ್ರವೃತ್ತಿ ರಾಮಮೂರ್ತಿ ಅವರನ್ನು ಕೆರಳಿಸಿತ್ತು. ಅಲ್ಲದೆ ತಮಿಳರ ಬಾವುಟವನ್ನು ಸರ್ಕಲ್ಲಿನ ಕಂಭದಿಂದ ಸ್ವತಃ ತಾವೇ ತೆಗೆದುಹಾಕಿ ಅಂದಿನ ಪರಿಸ್ಥಿತಿಗೆ ಬೇಸರಪಟ್ಟದ್ದು ಉಂಟು. ಬೆಂಗಳೂರಿನಿಂದ ತಾವೇ ಬಂದು ಬಾವುಟವನ್ನು ತೆಗೆಸಿದ್ದು ಸ್ಥಳೀಯ ಕನ್ನಡಿಗರ ಅಸಮರ್ಥತೆಯನ್ನು

ಎತ್ತಿತೋರಿಸಿತ್ತು. ಆದರೆ ಇಂಥ ಅಸಮರ್ಥತೆಯ ಪರಿಸರ ಬೆಂಗಳೂರಿನಲ್ಲೂ ಇತ್ತು. ಬಹುಸಂಖ್ಯಾತ ತಮಿಳರಿದ್ದ ಕಡೆಗಳಲ್ಲಿ ಕಪ್ಪು ಮತ್ತು ಕೆಂಪು ಬಣ್ಣದ ಡಿ.ಎಂ.ಕೆ ಪಕ್ಷದ ಬಾವುಟಗಳು ತಮಿಳರ ಸಂಕೇತವಾಗಿ ಹಾರಾಡುತ್ತಿದ್ದವು. ಈ ಬಾವುಟಗಳನ್ನು ತೆಗೆದು ಹಾಕಿಸಲು ರಾಮಮೂರ್ತಿ ಅವರು ಖುದ್ದಾಗಿ ತಾವೇ ಹೊರಡುತ್ತಿದ್ದುದು ಉಂಟು.

## ೧೩. ತಮಿಳರ ಹಲ್ಲೆಗಳು

ಕನ್ನಡ ಚಳವಳಿಗಾರರು ಸಂಘಟಿತರಾದಂತೆಲ್ಲಾ ತಮಿಳು ಸಂಘಟನೆಗಳು, ಡಿ.ಎಂ.ಕೆ. ಪಕ್ಷ, ಎಂ.ಜಿ.ಆರ್ ಸಂಘಟನೆಗಳು ತಮಿಳು ಭಾಷಿಕರನ್ನು ಒಂದುಗೂಡಿಸತೊಡಗಿದ್ದವು. ತಮಿಳರಿಗೆ ಬೆಂಗಳೂರಿನಲ್ಲಿ ಡಿ.ಎಂ.ಕೆ. ರಾಜಕೀಯ ಪಕ್ಷದ ಬೆಂಬಲ ಇತ್ತು. ಈ ಬೆಂಬಲದಿಂದಾಗಿ ನಗರದ ಕಾರ್ಖಾನೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದ ತಮಿಳು ಕಾರ್ಮಿಕರು ಭಯೋತ್ಪಾದಕ ಕೃತ್ಯಗಳನ್ನು ಕೈಗೊಳ್ಳಲು ಎಡೆ ಮಾಡಿಕೊಟ್ಟಿತು. ಅಲ್ಪಸಂಖ್ಯಾತ ಕನ್ನಡ ಕಾರ್ಮಿಕರ ಮೇಲೆ ಹಿಂಸಾತ್ಮಕ ಕೃತ್ಯಗಳು ಆರಂಭಗೊಂಡಿದ್ದವು. 'ಕನ್ನಡ ಸಂಘ'ಗಳಿಗೆ ಅಡೆ-ತಡೆಗಳನ್ನೊಡ್ಡಿ ಕಾರ್ಯಕರ್ತರ ಮೇಲೆ ಹಲ್ಲೆ ನಡೆಸುವುದು ದಿನನಿತ್ಯದ ಸುದ್ದಿಯಾಯಿತು. ಇದರ ಜೊತೆಗೆ 'ತಮಿಳರ ಮೇಲೆ ದೌರ್ಜನ್ಯ'ವೆಂದೂ ತಮಿಳು ದಿನಪತ್ರಿಕೆಗಳಲ್ಲಿ ತಾವೇ ಸುಳ್ಳು ವರದಿಗಳನ್ನು ಪ್ರಕಟಿಸುತ್ತಿದ್ದರು.

ಬೆಂಗಳೂರು ನಗರದ ಮೈಕೋ ಕಾರ್ಖಾನೆಯಲ್ಲಿದ್ದ ಬಹುಸಂಖ್ಯಾತ ತಮಿಳು ಕಾರ್ಮಿಕರು ಕನ್ನಡ ಕಾರ್ಮಿಕರನ್ನು ಸದೆ ಬಡಿಯುವ ಪ್ರವೃತ್ತಿಯನ್ನು ಬೆಳೆಸಿಕೊಂಡಿದ್ದರು. 'ಕನ್ನಡ ಸಂಘ'ಗಳನ್ನು ಕನ್ನಡಿಗರ ಪ್ರಾತಿನಿಧ್ಯಗಳನ್ನು ಮೆಟ್ಟಿ ಹಾಕುವುದು ಕಾರ್ಮಿಕ ಸಂಘಟನೆಗಳ ಆಶಯವೂ ಆಗಿತ್ತು. ಇದನ್ನು ಪ್ರತಿಭಟಿಸಲು ಮುಂದಾದ ಏಳು ಜನ ಕನ್ನಡಿಗರನ್ನು ಸಾಯುವಂತೆ ಹೊಡೆದದ್ದು ಗಂಭೀರ ಸ್ವರೂಪವನ್ನೇ ಪಡೆದುಕೊಂಡಿತು. ಈ ಕುರಿತು ಮ. ರಾಮಮೂರ್ತಿಯವರಲ್ಲಿ ಕನ್ನಡ ಕಾರ್ಮಿಕರು ಮೊರೆಯಿಟ್ಟರು. ಕಾರ್ಖಾನೆಯ ಆಡಳಿತ ವರ್ಗ, ಸರ್ಕಾರಗಳು ಮೌನ ತಾಳಿದ್ದು ಮ. ರಾಮಮೂರ್ತಿ ಅವರಿಗೆ ಸರಿ ಕಾಣಲಿಲ್ಲ. ಹೀಗಾಗಿ ಅವರು ಕನ್ನಡಿಗರ ಮೇಲೆ ಹಲ್ಲೆ ಮಾಡಿದವರನ್ನು 'ತಮಿಳು ಭಯೋತ್ಪಾದಕರು' ಎಂದು ಕರೆದು, ಈ 'ಗೂಂಡಾಗಿರಿ'ಯನ್ನು ಪ್ರತಿಭಟಿಸಿ ಒಂದು ಕಿರುಕೃತಿಯನ್ನು ಬರೆದು ಸಾರ್ವಜನಿಕರ ಗಮನ ಸೆಳೆದದ್ದು ಗಮನಾರ್ಹ ವಾದುದು. ಅವರು 'ಮೈಕೋ ಕನ್ನಡ ಕಾರ್ಮಿಕರ ದುರವಸ್ಥೆ' (ಪರಿವಿಡಿ ೨೨ನ್ನು ಗಮನಿಸಿ) ಎಂಬ ತಮ್ಮ ಲೇಖನದಲ್ಲಿ – "ನಮಗೆ ಯಾವ ಭಾಷೆಯ ಮೇಲೆ ದ್ವೇಷವಿಲ್ಲದಿದ್ದರೂ ಕನ್ನಡನಾಡಿನಲ್ಲಿ ಕನ್ನಡಿಗರ ಹಕ್ಕು ಬಾಧ್ಯತೆಗಳಿಗೆ ಧಕ್ಕೆ ಬರುವುದಕ್ಕೂ, ಕನ್ನಡ ಕಾರ್ಮಿಕರ ಮೇಲೆ ದೌರ್ಜನ್ಯ ನಡೆಯುವುದಕ್ಕೂ ಅವಕಾಶವಿರಬಾರದು. ಈಗ ಫ್ಯಾಕ್ಟರಿಗೆ ಹೋಗುವ ಕನ್ನಡ ಕಾರ್ಮಿಕರಿಗೆ ಹೊರಗಡೆಯೂ, ಫ್ಯಾಕ್ಟರಿಯ

ಒಳಗಡೆಯೂ ರಕ್ಷಣೆ ಸಿಗಬೇಕು. ಮುಂದೆ ಕನ್ನಡಿಗರಿಗೆ ಕೆಲಸ ಸಿಕ್ಕದಂತೆ ಪ್ರಯತ್ನ ನಡೆಯಬಾರದು. ಇದನ್ನು ನಮ್ಮ ಮಾನ್ಯ ಮಂತ್ರಿಗಳೂ, ಮಾನ್ಯ ಶಾಸಕರೂ, ಬೆಂಗಳೂರು ನಗರ ಪಿತೃಗಳೂ ಮತ್ತು ಮಹಾಜನಗಳೂ ಗಮನಿಸಿ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ವಿನಯದಿಂದ ಪ್ರಾರ್ಥಿಸುತ್ತೇನೆ." - ಎಂದು ಮನವಿ ಮಾಡಿಕೊಂಡಿದ್ದಾರೆ. ಇದು ಕೇವಲ ಮೈಕೋ ಕಾರ್ಖಾನೆಯ ಕನ್ನಡ ಕಾರ್ಮಿಕರಿಗೆ ಮಾತ್ರ ಸೀಮಿತವೆನ್ನಿಸುವುದಿಲ್ಲ. ಬದಲಾಗಿ ಐ.ಟಿ.ಐ., ಬಿ.ಇ.ಎಲ್., ಎಚ್.ಎ.ಎಲ್., ಎಚ್.ಎಂ.ಟಿ. ಮೊದಲಾದ ಕೇಂದ್ರ ಸರ್ಕಾರದ ಹಾಗೂ ಖಾಸಗಿ ಕಾರ್ಖಾನೆಗಳಲ್ಲಿನ ಕನ್ನಡಿಗರ ಮೇಲಿನ ಹಲ್ಲೆ-ಅತ್ಯಾಚಾರಗಳಿಗೆ ಸಾಕ್ಷಿ ಆಗಿತ್ತು. ಕೇಂದ್ರ ಸರ್ಕಾರದ ಉದ್ದಿಮೆಗಳಲ್ಲಿ ಸ್ಥಳೀಯ ಕನ್ನಡಿಗರಿಗೆ ಶೇಕಡ ಐವತ್ತರಷ್ಟು ಆದ್ಯತೆ ನೀಡಬೇಕೆಂಬ ನಿಯಮವೇ ಇದೆ. ಆದರೆ ಇದನ್ನು ಆಡಳಿತ ವರ್ಗಗಳು ಗಾಳಿಗೆ ತೂರಿದ್ದವು. ಇದನ್ನು ಮನವರಿಕೆ ಮಾಡಿಕೊಡಲು ಮ. ರಾಮಮೂರ್ತಿ ಅವರು ಕೈಗೊಂಡ ಚಳವಳಿ ಪ್ರಯತ್ನಗಳು ಅನೇಕ. ಈ ಹೊತ್ತಿನ ಬದಲಾಗುತ್ತಿರುವ ಪರಿಸ್ಥಿತಿಗಳಿಗೆ ಮ. ರಾಮಮೂರ್ತಿ ಅಂಥವರು ಹಾಕಿಕೊಟ್ಟ ಆರಂಭಿಕ ಪ್ರಯತ್ನಗಳೇ ಕಾರಣ.

ತಮಿಳರು ವಾಸಿಸುತ್ತಿದ್ದ ಬಡಾವಣೆಗಳು, ಕೊಳಚೆಗೇರಿಗಳಲ್ಲಿ ತಮಿಳರ ಸಂಕೇತವಾಗಿ ಡಿ.ಎಂ.ಕೆ. ಪಕ್ಷದ ಬಾವುಟಗಳು ಹಾರಾಡುತ್ತಿದ್ದವು. ಬೆಂಗಳೂರಿನ ಜೋಗುಪಾಳ್ಯ, ಕಾಕ್ಸ್‌ಟೌನ್, ಫ್ರೇಜರ್ ಟೌನ್, ನಾಗಪ್ಪ ಬ್ಲಾಕ್, ರಾಮಚಂದ್ರಪುರ, ಶ್ರೀರಾಮಪುರ, ಚಿನ್ನಪ್ಪ ಗಾರ್ಡನ್, ಬೆಂಗಳೂರಿನ ದಂಡು ಪ್ರದೇಶ ಮೊದಲಾದ ಕಡೆಗಳಲ್ಲಿ ಕಪ್ಪು ಮತ್ತು ಕೆಂಪು ಬಣ್ಣದ ತಮಿಳರ ಬಾವುಟಗಳು ಸಾಮಾನ್ಯವಾಗಿದ್ದವು. ಇಂಥ ಪ್ರದೇಶಗಳಲ್ಲಿ ಕನ್ನಡದಲ್ಲಿ ಮಾತನಾಡುವುದೇ ಅವಮಾನಕರ ಸಂಗತಿ. ಒಂದು ವೇಳೆ ಮಾತನಾಡಿದ್ದೇ ಆದರೆ ಹಲ್ಲೆಗೆ, ಅಪಮಾನಕ್ಕೆ ಒಳಗಾಗಬೇಕಿತ್ತು. ಇಂಥ ಕಡೆಗಳಿಗೂ ಮ. ರಾಮಮೂರ್ತಿ ಹೋಗಿ ಕನ್ನಡದಲ್ಲಿ ಭಾಷಣಗಳನ್ನು ಮಾಡುತ್ತಿದ್ದರು. ಆ ಮೂಲಕ ನಾಡು-ನುಡಿ-ಸಂಸ್ಕೃತಿಗಳ ಬಗ್ಗೆ ಅಭಿಮಾನ ಬೆಳೆಸಿಕೊಳ್ಳಲು ಹುರಿದುಂಬಿಸುತ್ತಿದ್ದರು. ಕನ್ನಡ ಕಾರ್ಯಕ್ರಮಗಳಿಗೆ, ಕನ್ನಡದಲ್ಲಿಯೇ ವ್ಯವಹರಿಸಲು ಪ್ರೋತ್ಸಾಹ ನೀಡಿದ್ದು ಗಮನಾರ್ಹ ವಾಗಿತ್ತು. ತಮಿಳರು ಹಾರಿಸುತ್ತಿದ್ದ ಬಾವುಟಗಳನ್ನು ತೆಗೆದು ಹಾಕಲು ಕನ್ನಡ ಚಳವಳಿಗಾರರು ಮುಂದಾದರು. ತಮಿಳರ ಬಾವುಟಗಳನ್ನು ಕಿತ್ತು ಹಾಕಿ 'ಕನ್ನಡ ಬಾವುಟ'ವೊಂದನ್ನು ನೆಡುವುದು ಕನ್ನಡ ಕಾರ್ಯಕರ್ತರಿಗೆ ಸುಲಭ ಸಾಧ್ಯವಾಗಿರಲಿಲ್ಲ. ಏಕೆಂದರೆ ಕನ್ನಡ-ಕನ್ನಡಿಗ-ಕರ್ನಾಟಕವನ್ನು ಪ್ರತಿನಿಧಿಸುವ ಒಂದೇ ಬಾವುಟ ನಮ್ಮಲ್ಲಿ ಇರಲಿಲ್ಲ. ಪ್ರಾತಿನಿಧಿಕವಾಗಿ ಇಂದು ಬಳಸುತ್ತಿರುವ ಹಳದಿ ಕೆಂಪು ಬಣ್ಣದ ಬಾವುಟವನ್ನು ಪರಿಚಯಿಸಿದವರು ಮ. ರಾಮಮೂರ್ತಿ ಅವರೆ. ಆದರೆ ಈ ಬಾವುಟಕ್ಕೆ ತನ್ನದೇ ಆದ ಚರಿತ್ರೆ ಇದೆ.

## ೧೪. ಕನ್ನಡ ಬಾವುಟ ಹಾಗೂ ಮ. ರಾಮಮೂರ್ತಿ

ಕನ್ನಡಿಗರಿಗೆ ಭುವನೇಶ್ವರಿ, ಕರ್ನಾಟಕ ಭೂಪಟ, ಗಂಡಭೇರುಂಡ ಮೊದಲಾದ ಸಂಕೇತಗಳು ಇದ್ದವಾದರೂ ಅಖಂಡ ನಾಡನ್ನು ಪ್ರತಿನಿಧಿಸುವ ಏಕರೂಪತೆಯ 'ಕನ್ನಡ ಬಾವುಟ'ವೆಂಬುದಿರಲಿಲ್ಲ. ಇದು ಕನ್ನಡ ಚಳವಳಿಗಾರರಿಗೆ ದೊಡ್ಡ ಕೊರತೆಯಾಗಿ ಕಾಡುತ್ತಿತ್ತು. ಅ.ನ.ಕೃ ಅವರು ಚಳವಳಿಯಿಂದ ಹಿಂದಕ್ಕೆ ಸರಿದ ಮೇಲೆ ಮ. ರಾಮಮೂರ್ತಿ ಅವರೊಂದಿಗೆ ವಾಟಾಳ್ ನಾಗರಾಜ್ ಅವರು ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು. ಆದರೆ 'ಕನ್ನಡ ಚಳವಳಿ'ಯಲ್ಲಿಯೂ ರಾಜಕಾರಣದ ಸ್ವಾರ್ಥ-ಸಂಕುಚಿತತೆಗಳು ನುಸುಳಿದ್ದವು. ಇದರ ಪರಿಣಾಮವಾಗಿ ಚಳವಳಿ ಬ್ರಾಹ್ಮಣ ಬ್ರಾಹ್ಮಣೇತರ ಗುಂಪುಗಳಾಗಿ ಒಡೆದಿತ್ತು. ಮ. ರಾಮಮೂರ್ತಿ, ನಾಡಿಗೇರ ಕೃಷ್ಣರಾವ್, ತ.ರಾ. ಸುಬ್ಬರಾವ್, ಬೆ.ನಿ. ಈಶ್ವರಪ್ಪ, ಕರ್ಲಮಂಗಲಂ ಶ್ರೀಕಂಠಯ್ಯ, ಭಾರತೀಂದ್ರ ಸ್ವಾಮೀಜಿ ಮೊದಲಾದವರು ಬ್ರಾಹ್ಮಣರ ಗುಂಪಿನಲ್ಲಿದ್ದರು. ಬ್ರಾಹ್ಮಣೇತರರ ನೇತಾರರಾಗಿ ವಾಟಾಳ್ ನಾಗರಾಜರು ಇನ್ನೊಂದು ಗುಂಪಿನಲ್ಲಿ ಗುರುತಿಸಿಕೊಳ್ಳುವಂತೆ ಆಗಿತ್ತು. ವಾಟಾಳರೊಂದಿಗೆ ಅ. ಸಂಜೀವಪ್ಪ, ಸ.ಕೃ. ಸಂಪಂಗಿ, ಜಿ. ನಾರಾಯಣಕುಮಾರ್, ಪ್ರಭಾಕರ ರೆಡ್ಡಿ ಕೆ. ಮೊದಲಾದವರಿದ್ದರು. ತಮಿಳರ ದೌರ್ಜನ್ಯಗಳನ್ನು, ಕನ್ನಡೇತರರ ಪ್ರಾಬಲ್ಯಗಳನ್ನು ಹತ್ತಿಕ್ಕಲು ಚಳವಳಿಯು ರಾಜಕಾರಣದ ಬಲವನ್ನು ಹೊಂದುವುದು ಅನಿವಾರ್ಯ ಆಯಿತು. ಅಲ್ಲದೆ ಚಳವಳಿಯನ್ನು ಕ್ರಿಯಾತ್ಮಕವಾಗಿ ನಡೆಸುವಲ್ಲಿ ವಾಟಾಳರಿಗೂ ರಾಮಮೂರ್ತಿ ಅವರಿಗೂ ತಾತ್ವಿಕವಾಗಿ ಭಿನ್ನಾಭಿಪ್ರಾಯಗಳು ಹುಟ್ಟಿಕೊಂಡಿದ್ದವು. ಇದರ ಪರಿಣಾಮವಾಗಿ ಎರಡು ಗುಂಪುಗಳಲ್ಲಿ ಚಳವಳಿಗಾರರು ಪಾಲಾಗಿದ್ದರು. ಆದರೆ ಎರಡೂ ಕಡೆಯವರಿಗೆ 'ಬಾವುಟ'ದ ಸಮಸ್ಯೆ ಒಂದೇ ಆಗಿತ್ತು.

'ಕರ್ನಾಟಕ ಸಂಯುಕ್ತರಂಗ'ದವರೊಂದಿಗೆ ಸಂಬಂಧ ಕಡಿದುಕೊಂಡಿದ್ದ ವಾಟಾಳರು ಪ್ರತ್ಯೇಕವಾಗಿಯೇ ರಾಜ್ಯೋತ್ಸವವನ್ನೂ ಆಚರಿಸುತ್ತಿದ್ದುದುಂಟು. 'ಬಾವುಟ'ದ ಏಕರೂಪತೆಯನ್ನು ಕಂಡುಕೊಳ್ಳಲು ಮ. ರಾಮಮೂರ್ತಿ, ವಾಟಾಳ್ ನಾಗರಾಜರು ಒಂದೇ ವೇದಿಕೆಗೆ ಬರುವುದು ಅನಿವಾರ್ಯವಾಗಿ ಕಂಡಿತು. ಚಳವಳಿ ಗಾರರು ಈ ಎರಡೂ ಬಣದವರನ್ನು, ನಾಡಿನ ವಿವಿಧ ಸಂಘಟನೆಗಳನ್ನು, ಸಾಹಿತಿ-ಕಲಾವಿದರನ್ನು ೧೯೬೬ರ 'ಅಖಿಲ ಕರ್ನಾಟಕ ಕನ್ನಡಿಗರ ಬೃಹತ್ ಸಮ್ಮೇಳನ' ದಡಿಯಲ್ಲಿ ಸೇರಿಸಿದರು. ಬೆಂಗಳೂರಿನ 'ಮೈಸೂರು ವಾಣಿಜ್ಯ ಭವನ'ದಲ್ಲಿ ನಡೆದ ಈ ಸಭೆಗೆ ಮ. ರಾಮಮೂರ್ತಿ ಅವರದೇ ಅಧ್ಯಕ್ಷತೆ. ವಾಟಾಳರಿಂದ ಉದ್ಘಾಟನೆಗೊಂಡ ಈ ಸಭೆಯಲ್ಲಿ ಕಾರ್ಯಕರ್ತರು ಹೊಸ ಕನ್ನಡದ ಬಾವುಟಕ್ಕಾಗಿ ಕಾತರತೆಯಿಂದ ನಿರೀಕ್ಷಿಸುವಂತೆ ಆಯಿತು. ಎಲ್ಲರ ಅಭಿಪ್ರಾಯಗಳ ಮೇರೆಗೆ ಎರಡು ಮೂಲೆಗಳನ್ನು ಹೊಂದಿದ್ದ ಹಳದಿ ಬಣ್ಣದ ಬಾವುಟವನ್ನು ಪರಿಚಯಿಸಲಾಯಿತು. ಈ ಬಾವುಟದ

ಮಧ್ಯೆ ಕರ್ನಾಟಕದ ಭೂಪಟವಿದ್ದು ಅದರಲ್ಲಿ ಬೆಳೆಯುತ್ತಿರುವ ಪೈರ(ತೆನೆಯ)ನ್ನು ಬಿಂಬಿಸುವ ಚಿತ್ರ ಇತ್ತು. ಈ ಬೆಳೆಯುತ್ತಿರುವ ಪೈರು ನಾಡಿಗೆ ಸೇರಬೇಕಿದ್ದ ಭೂಪ್ರದೇಶ ಗಳನ್ನು, ಅಭಿವೃದ್ಧಿಯನ್ನು ಸಂಕೇತಿಸುತ್ತದೆ ಎಂಬುದು ವಿದ್ವಾಂಸರ ಅಭಿಪ್ರಾಯ. ಈ ಸಭೆಯಲ್ಲಿ ನಿರ್ಣಯವಾದ ಬಾವುಟವನ್ನು ಎಲ್ಲ ಕಾರ್ಯಕರ್ತರು ಒಕ್ಕೊರಲಿನಿಂದ ಜಯಕಾರವನ್ನು ಕೂಗಿ, ಧ್ವಜಕ್ಕೆ ವಂದಿಸಿ ಒಪ್ಪಿಕೊಂಡರು.

ಆದರೆ ಈ ಕರ್ನಾಟಕ ನಕ್ಷೆಯಿರುವ ಬಾವುಟ ಅದೇ ವರುಷವೇ (೧೯೬೬ರ ಕೊನೆಗೆ) ಮ. ರಾಮಮೂರ್ತಿ ಅವರಿಂದಲೇ ಬದಲಾವಣೆಗೆ ಒಳಪಟ್ಟದ್ದು ಆಶ್ಚರ್ಯವನ್ನು ಮೂಡಿಸಿತು. ೧೯೬೬ರ ನವೆಂಬರ್ ೧ರ ರಾಜ್ಯೋತ್ಸವವನ್ನು ಒಂದೆ ವೇದಿಕೆಯಡಿಯಲ್ಲಿ (ಕೆಂಪಾಂಬುಧಿ ಕೆರೆಯ ಮೈದಾನ) ಆಚರಿಸಿದ್ದ ಕನ್ನಡ ಕಾರ್ಯಕರ್ತರಿಗೆ ಬಾವುಟ ಬದಲಾವಣೆಯ ವಿಚಾರ ರುಚಿಸಿರಲಿಲ್ಲ. ಕನ್ನಡೇತರರ ಮುಂದೆ ಒಗ್ಗಟ್ಟಿನ ಪ್ರಶ್ನೆಯಾಗಿ ಕಾಡಿತು. ಈ ಮಧ್ಯೆ ಮಹಾಜನ್ ಆಯೋಗದ ವಿರುದ್ಧ ಕನ್ನಡಿಗರು ನಾಡಿನ ಎಲ್ಲ ಕಡೆ ಪ್ರತಿರೋಧಗಳನ್ನು ವ್ಯಕ್ತ ಪಡಿಸುತ್ತಿದ್ದರು. ಕನ್ನಡ ಚಳವಳಿಯನ್ನು ರಾಜಕೀಯವಾಗಿ ಬಲಗೊಳಿಸುವ ನಿಟ್ಟಿನಲ್ಲಿ ಮ. ರಾಮಮೂರ್ತಿ ಹಾಗೂ ವಾಟಾಳರ ಮಧ್ಯೆ ಯಾವುದೇ ಭಿನ್ನಾಭಿಪ್ರಾಯವಿರಲಿಲ್ಲ. ಆದರೆ ರಾಜಕೀಯ ಪಕ್ಷವೊಂದನ್ನು ಒಟ್ಟಿಗೆ ಸೇರಿ ರಚಿಸಬೇಕೆ ಅಥವಾ ಪ್ರತ್ಯೇಕವಾಗಿ ರಚಿಸಿಕೊಳ್ಳಬೇಕೆ ಎಂಬ ವಿಚಾರದಲ್ಲಿ ಇಬ್ಬರಿಗೂ ಮಾತುಕತೆಗಳು ನಡೆದವು. ಮುಂದೆ ಬರಲಿದ್ದ ಚುನಾವಣೆಗಳಲ್ಲಿ (೧೯೬೭) ತಮ್ಮ ತಮ್ಮ ಪಕ್ಷಗಳನ್ನು ನಿರ್ಧರಿಸಿ ಬಾವುಟ ಅಥವಾ ಲಾಂಛನಗಳನ್ನು ಪರಿಚಯಿಸುವ ತುರ್ತು ಕಾಣಿಸಿ ಕೊಂಡಿತು. ಈ ತುರ್ತಿನ ಸನ್ನಿವೇಶದಲ್ಲಿ ವಾಟಾಳರು 'ಕನ್ನಡ ಚಳವಳಿ ಪಕ್ಷ'ವನ್ನು ರಚಿಸಿಯೇ ಬಿಟ್ಟರು. ಆದರೆ ಮ. ರಾಮಮೂರ್ತಿಯವರು ತಾತ್ವಿಕವಾಗಿ ವಾಟಾಳ ರೊಂದಿಗೆ ಭಿನ್ನಾಭಿಪ್ರಾಯವನ್ನು ವ್ಯಕ್ತಪಡಿಸಿ ಮತ್ತೆ ಪ್ರತ್ಯೇಕಗೊಂಡದ್ದುಂಟು. ಈ ಸಂದರ್ಭದಲ್ಲಿ ಹಿಂದಿನ ಕರ್ನಾಟಕದ ನಕಾಶೆಯಿದ್ದ ಬಾವುಟವನ್ನು ವಾಟಾಳರು ತಮ್ಮ 'ಕನ್ನಡ ಚಳವಳಿ ಪಕ್ಷ'ದೊಂದಿಗೆ ಸಂಕೇತಿಸಿದರು. ಹೀಗಾಗಿ ಮ. ರಾಮಮೂರ್ತಿ ಅವರಿಗೆ ಹೊಸ ಪಕ್ಷವನ್ನು ಹಾಗೂ ಬಾವುಟವನ್ನು ಹೊಂದುವ ಅನಿವಾರ್ಯತೆ ಕಂಡು ಬಂದಿತು. ಈ ಹಿನ್ನೆಲೆಯಲ್ಲಿ ಅವರು ಬೆಂಗಳೂರಿನ ಅರಳೇಪೇಟೆಯಲ್ಲಿ ಸಭೆಯೊಂದನ್ನು ಕರೆದರು. ಸಭೆಯ ಉಸ್ತುವಾರಿಯನ್ನು 'ಕರ್ನಾಟಕ ಮಿತ್ರಮಂಡಲಿ'ಯ ಬೆ.ನಿ. ಈಶ್ವರಪ್ಪ ಮೊದಲಾದವರು ವಹಿಸಿದ್ದರು. ನಾಲ್ಕು ಮೂಲೆಗಳನ್ನು ಹೊಂದಿದ್ದ ಹಳದಿ-ಕೆಂಪು ಬಣ್ಣಗಳ ಬಾವುಟವನ್ನು ಈ ಸಂದರ್ಭದಲ್ಲಿ ರಾಮಮೂರ್ತಿ ಅವರು ಪರಿಚಯಿಸಿದರು. ಅಲ್ಲದೆ ತಮ್ಮ ಹೊಸ 'ಕನ್ನಡ ಪಕ್ಷ'ದ ಸಂಕೇತವೂ ಈ ಬಾವುಟವೆಂದೇ ಸಾರಲಾಯಿತು. ನಕಾಶೆಯಿರದ ಈ ಬಾವುಟವು ಅಲ್ಲಿಂದ ಮುಂದಕ್ಕೆ ಕನ್ನಡ-ಕನ್ನಡಿಗ-ಕರ್ನಾಟಕಗಳನ್ನು ಪ್ರತಿನಿಧಿಸುವ ಎಲ್ಲ ಸಭೆ-ಸಮಾರಂಭ, ಚಳವಳಿಗಳಿಗೆ ಬಳಸುವಂತೆ ಆಗಬೇಕೆಂಬುದು ಅವರ ಅಭಿಮತ.

ಕನ್ನಡೇತರರ ಪ್ರಾಬಲ್ಯಗಳು ಬೆಂಗಳೂರಿನಲ್ಲಿ ತಮಿಳರನ್ನು ಮಾತ್ರ ಹೆಚ್ಚು ಬೆಳಕಿಗೆ ತರುವಂತೆ ಮಾಡಿದ್ದವು. ಆದರೆ ಗುಜರಾತಿ–ಮಾರವಾಡಿಗಳಂಥ ವ್ಯಾಪಾರ-ವಾಣಿಜ್ಯೋದ್ಯಮಿಗಳು ನಾಡಿನ ಆರ್ಥಿಕ ಪ್ರಾಬಲ್ಯವನ್ನು ತಮ್ಮ ಹಿಡಿತದಲ್ಲಿ ಇಟ್ಟುಕೊಂಡಿದ್ದುದು ಬೆಳಕಿಗೆ ಬರಲೇ ಇಲ್ಲ. ಡಿ.ಎಂ.ಕೆ. ಪಕ್ಷದವರ ಕಪ್ಪು-ಕೆಂಪು ಬಣ್ಣದ ಬಾವುಟಗಳಿಗೆ ಪ್ರತಿಯಾಗಿ ಕನ್ನಡದ ಬಾವುಟಗಳನ್ನು ಪ್ರದರ್ಶಿಸಬೇಕೆಂಬ ಧೋರಣೆ ಹಲವು ಚಳವಳಿಗಾರರಲ್ಲಿ ಮೂಡಿತ್ತು. ಆದರೆ ವಾಸ್ತವವಾಗಿ ಸಮಗ್ರ ನಾಡಿಗೆ ವ್ಯಾಪಿಸುವ ಚಳವಳಿ ಚಿಂತನೆಗಳು ವ್ಯಕ್ತ ಆಗುತ್ತಿರಲಿಲ್ಲ. ಅನೇಕ ವೇಳೆ ಈ ಚಳವಳಿಗಳು ಬೆಂಗಳೂರಿನ ತಮಿಳು-ಕನ್ನಡ ಭಾಷಿಕರ ವೈಯಕ್ತಿಕ ದ್ವೇಷ-ಅಸೂಯೆಗಳ ನೆಲೆಗಳಲ್ಲಿಯೇ ಮುಕ್ತಾಯಗೊಳ್ಳುತ್ತಿದ್ದವು. ಅಂಥದ್ದೇ ಅಸೂಯೆಯಿಂದ ಹೊರಟ ಚಿಂತನೆಗಳು ಕನ್ನಡ ಬಾವುಟದ ವಿಚಾರವನ್ನೂ ಆವರಿಸದೆ ಬಿಟ್ಟಿರಲಿಲ್ಲ. ಅದೇನೆಂದರೆ ಮ. ರಾಮಮೂರ್ತಿ ಅವರು ಮೇಲರ್ಧ ಹಳದಿ, ಕೆಳಗರ್ಧ ಕೆಂಪು ಬಣ್ಣದ ಬಾವುಟವನ್ನು ಪರಿಚಯಿಸಿದ್ದು, ತಮಿಳರ ಡಿ.ಎಂ.ಕೆ. ಪಕ್ಷದ ಕಪ್ಪು-ಕೆಂಪು ಬಣ್ಣದ ಬಾವುಟವನ್ನೇ ಹೋಲುತ್ತದೆ ಎಂಬ ಅನುಮಾನ-ಆತಂಕಗಳು. ಈ ಕುರಿತ ನಗರದ ಕನ್ನಡ ಸಂಘ-ಸಂಸ್ಥೆಗಳು ಅಧಿಕೃತವಾಗಿ ಕನ್ನಡಿಗರು ಯಾವ ಬಾವುಟವನ್ನು ಒಪ್ಪಿಕೊಳ್ಳಬೇಕು ಎಂಬ ಜಿಜ್ಞಾಸೆಗೆ ಒಳಗಾದವು. ಏಕೆಂದರೆ ೧೯೬೮ರವರೆಗೂ ವಾಟಾಳರ ಕರ್ನಾಟಕದ ನಕಾಶೆಯಿದ್ದ ಬಾವುಟವು ಸಹ ಕನ್ನಡಿಗರ ಸಂಕೇತವಾಗಿ ಪ್ರತಿನಿಧಿಸಲ್ಪಡುತ್ತಿದ್ದುದರಿಂದ. ಮ. ರಾಮಮೂರ್ತಿ ಅವರು ನಿಧನರಾದ (೨೫.೧೨.೧೯೬೭) ಮೇಲಂತು ಈ ಬಗ್ಗೆ ಅನೇಕ ಚಳವಳಿಗಾರರಲ್ಲಿ, ಸಂಘಟನೆಗಳಲ್ಲಿ ಗೊಂದಲಗಳು ಕಾಣಿಸಿಕೊಂಡವು.

೧೯೬೮ರ ಏಪ್ರಿಲ್-ಮೇ ವೇಳೆಗೆ ಈ ಕುರಿತ ಗೊಂದಲಗಳು ಅಂತಿಮ ರೂಪ ಪಡೆದುಕೊಂಡು ಡಿಸೆಂಬರ್‌ನಲ್ಲಿ (ಮ. ರಾಮಮೂರ್ತಿ ಅವರ ಮೊದಲ ಪುಣ್ಯತಿಥಿಯ ವೇಳೆಗೆ) ಹಳದಿ-ಕೆಂಪು ಬಾವುಟವನ್ನೇ ಅಧಿಕೃತವೆಂದು ಕನ್ನಡಿಗರು ಮಾನ್ಯ ಮಾಡಿದರು. ಮ. ರಾಮಮೂರ್ತಿ ಅವರಿಂದ ಪರಿಚಿತವಾದ ಈ ಬಾವುಟವೇ ಎಲ್ಲ ಕನ್ನಡಪರ ಕಾರ್ಯಕ್ರಮಗಳಿಗೂ ಅಧಿಕೃತವಾಗಿ ಬಳಕೆಗೆ ಬಂದಿತು. ಹಳದಿ-ಕೆಂಪು ಬಣ್ಣಗಳನ್ನು ಶಾಂತಿ ಸಹನೆಯ, ಕ್ರಾಂತಿಯ ಸಂಕೇತವೆಂದೂ, ಅರಿಸಿನ-ಕುಂಕುಮ ಬಣ್ಣಗಳು ತಾಯಿ ಭುವನೇಶ್ವರಿಯ ಮುತ್ತೈದೆತನದ ಪ್ರತೀಕವೆಂದು ಚಳವಳಿಗಾರರು ವ್ಯಾಖ್ಯಾನಿಸುತ್ತಾರೆ. ಒಟ್ಟಿನಲ್ಲಿ ಇಂದು ನಾಡಿನಾದ್ಯಂತ ಹಾರಾಡುತ್ತಿರುವ ಕನ್ನಡ ಬಾವುಟ ಮ. ರಾಮಮೂರ್ತಿ ಅವರ ನೆನಪಿನ ಸಂಕೇತವೆಂತಲೂ ಕರೆಯಲು ಅಡ್ಡಿಯಿಲ್ಲ.

## ೧೫. ಗಡಿ ವಿಚಾರಗಳು

ನಾಡು ೧೯೫೬ರಲ್ಲಿ ಏಕೀಕೃತಗೊಂಡದ್ದು ಅಪರಿಪೂರ್ಣವಾಗಿತ್ತು ಎಂಬುದು ಮ. ರಾಮಮೂರ್ತಿ ಅವರ ವಾದ. ಬಹಳ ಮುಖ್ಯವಾದ ಕನ್ನಡದ ಪ್ರದೇಶಗಳು

ನಮಗೆ ಸೇರಿರಲಿಲ್ಲ. ಕಾಸರಗೋಡು, ಹೊಸೂರು, ಡೆಂಕಣೀಕೋಟೆ (ತಾಳವಾಡಿ), ಆಲೂರು, ಆದವಾಣಿ (ಆಧೋನಿ), ರಾಯದುರ್ಗ, ಸೊಲ್ಲಾಪುರ, ಅಕ್ಕಲಕೋಟೆ, ಜತ್ ಮೊದಲಾದವು ಕೈಬಿಟ್ಟು ಹೋದವು. ಇವು ನೆರೆಯ ಕೇರಳ, ತಮಿಳನಾಡು, ಆಂಧ್ರ, ಮಹಾರಾಷ್ಟ್ರ ರಾಜ್ಯಗಳಿಂದ ತಮಗೆ ಸೇರಲೇಬೇಕಾದದ್ದು. ಈ ಬಗ್ಗೆ ರಾಮಮೂರ್ತಿ ಅವರಿಗೆ ಯಾವುದೇ ಗೊಂದಲಗಳಿರಲಿಲ್ಲ. ಆದರೆ ಈಗಾಗಲೇ ಕರ್ನಾಟಕದಲ್ಲಿದ್ದ ಬೆಳಗಾವಿಯ ಬಗ್ಗೆ ಮರಾಠಿಗರು ಸೊಲ್ಲೆತ್ತುದ್ದುದರ ಬಗ್ಗೆ ತೀವ್ರವಾದ ತಕರಾರು ಇತ್ತು. ಈ ಕುರಿತು ಕನ್ನಡ ಸಂಘಟನೆಗಳು ಕೇಂದ್ರದ ವಿರುದ್ಧ ಧ್ವನಿ ಎತ್ತುವುದು ಅನಿವಾರ್ಯ ಎಂಬುದು ಇವರ ವಾದ. ಏಕೆಂದರೆ ಈ ವೇಳೆಗಾಗಲೇ (೧೯೬೭) ಆಂಧ್ರದ ತೆಲುಗರು, ತಮಿಳರು (ಹಿಂದಿ ವಿರುದ್ಧ), ಮರಾಠಿಗರು ತಮ್ಮ ಭಾಷಿಕ ಪ್ರೀತಿ ಆಕ್ರೋಶಗಳನ್ನು ಕೇಂದ್ರ ಸರ್ಕಾರಕ್ಕೆ ಮನವರಿಕೆ ಮಾಡಿಕೊಟ್ಟಿದ್ದರು. ಕೇಂದ್ರದಲ್ಲಿನ ಪ್ರಧಾನಿಗಳು (ನೆಹರು, ಲಾಲ್ ಬಹದ್ದೂರ್ ಶಾಸ್ತ್ರಿ) ಇವರ ಭಾಷಿಕ ಆಕ್ರಮಣಕಾರಿ ಪ್ರವೃತ್ತಿಗಳಿಗೆ ದಂಗಾದದ್ದು ಉಂಟು. ಆದರೆ ನಮ್ಮ ನಾಡಿನ ಮುಖ್ಯಮಂತ್ರಿಗಳಾಗಲಿ, ಕನ್ನಡದ ಜನತೆಯಾಗಲಿ ಇಂಥ ಬಿಸಿಯನ್ನು ಮುಟ್ಟಿಸಿರಲಿಲ್ಲ. ಈ ಬಗ್ಗೆ ಆಕ್ರಮಣಕಾರಿ ಪ್ರವೃತ್ತಿಯಿಂದ ಅಲ್ಲದಿದ್ದರೂ ಸಾತ್ವಿಕವಾದ ಭಾಷಾಪ್ರೇಮವನ್ನು, ಅಭಿಮಾನದ ಒತ್ತಡಗಳನ್ನು ಪ್ರದರ್ಶಿಸುವುದು ಕನ್ನಡಿಗರಿಗೆ ತುರ್ತಿನ ಸಂಗತಿ ಎಂಬುದು ರಾಮಮೂರ್ತಿ ಅವರ ನಿಲುವಾಗಿತ್ತು. ಏಕೆಂದರೆ ಬೆಳಗಾವಿ ವಿಚಾರದಲ್ಲಿ ಮಹಾಜನ್ ಆಯೋಗದ ಮೇಲೆ ಮರಾಠಿಗರ ಒತ್ತಡಗಳು ಪ್ರಬಲವಾಗಿದ್ದವು. ಕೇಂದ್ರದಲ್ಲಿನ ರಕ್ಷಣಾಮಂತ್ರಿಯಾಗಿದ್ದ ಯಶವಂತರಾವ್ ಚವ್ಹಾಣರ ಲಾಬಿ ತೀವ್ರವಾಗಿತ್ತು. ಅಲ್ಲದೆ ಮುಂಬಯಿಯಲ್ಲಿ 'ಶಿವ ಸೇನೆ'ಯಂಥ ಸಂಘಟನೆಗಳು ಕನ್ನಡಿಗರ ಆಸ್ತಿ-ಪಾಸ್ತಿ, ಪ್ರಾಣ-ಮಾನಗಳಿಗೆ ಆತಂಕವನ್ನು ಹುಟ್ಟಿಸಿದ್ದವು.

ಮ. ರಾಮಮೂರ್ತಿ ಅವರು ಕರ್ನಾಟಕ ಮಿತ್ರ ಮಂಡಳಿ, ಕನ್ನಡ ಜ್ಯೋತಿ ಸಂಘ, ಕನ್ನಡ ಯುವಜನ ಸಭಾ, ಸಂಯುಕ್ತರಂಗ ಮೊದಲಾದ ಸಂಘಟನೆಗಳ ಸದಸ್ಯರು ಗಡಿ ವಿಚಾರಗಳನ್ನು ಕುರಿತಂತೆ ಬೆಂಬಲವಾಗಿ ಇದ್ದವರು. ಏಕೆಂದರೆ ಅದು ಮರಾಠಿಗರ ಆಕ್ರಮಣಕಾರಿ ನಿಲುವುಗಳು ಕೇವಲ ಕನ್ನಡಿಗರಿಗೆ ಮಾತ್ರ ಮಾರಕವಾಗಿರಲಿಲ್ಲ. ನೆರೆಯ 'ಗೋವಾ'ದ ಜನರನ್ನು ಸಹ ಆತಂಕಗೊಳಿಸಿದ್ದವು. ಅಲ್ಲಿ 'ಗೋವಾ ರಕ್ಷಣಾ ಚಳವಳಿ'ಯೇ ಹುಟ್ಟಿಕೊಂಡಿತ್ತು. ಇದರಲ್ಲಿ ಅನೇಕ ಕನ್ನಡಿಗರು ಗೋವಾ ಮರಾಠಿಗರ ಸ್ವತ್ತಾಗದಿರಲು ತೀವ್ರವಾಗಿ ಪ್ರತಿಕ್ರಿಯಿಸತೊಡಗಿದ್ದರು. ಈ ಚಳವಳಿಗೆ ಮ. ರಾಮಮೂರ್ತಿ ಅವರು ಬೆಂಬಲವಾಗಿ ನಿಂತು, ಗೋವಾ ಮಹಾರಾಷ್ಟ್ರದ ಮರಾಠಿಗರ ವಾದಕ್ಕಿಂತ ಅದು ಕನ್ನಡದ ಪ್ರದೇಶವೇ ಎಂಬುದಕ್ಕೆ ಚಾರಿತ್ರಿಕ ದಾಖಲೆಗಳ ಮೂಲಕ ರುಜುವಾತುಪಡಿಸಿದ್ದುಂಟು. ಗೋವಾ ರಾಜ್ಯವು ಕನ್ನಡಿಗರಿಗೆ ಸೇರಬೇಕಿದ್ದ ಪ್ರದೇಶವೆಂಬುದಕ್ಕೆ 'ಕನ್ನಡಿಗರ ನ್ಯಾಯ' - (ಪರಿವಿಡಿ ೨೦ನ್ನು ಗಮನಿಸಿ) ಎಂಬ ಕೃತಿಯನ್ನು ಹೊರಡಿಸಿ ಹಂಚಿದ್ದೂ ಇದೆ.

ಅಶೋಕನ ಕಾಲದಿಂದಲೂ ಗೋವಾ ಕುಂತಳರಾಜ್ಯ (ಕರ್ನಾಟಕ)ಕ್ಕೆ ಸೇರಿದ್ದ ಪ್ರದೇಶ. ಆಗ (ಕ್ರಿ.ಶ. ೨೩೨ಕ್ಕಿಂತಲೂ ಹಿಂದಿನಿಂದ) 'ಮಹಾರಾಷ್ಟ್ರ'ವೆಂಬುದು ಇರಲಿಲ್ಲ. ಮಯೂರವರ್ಮ, ಬಹಮನಿ ಸುಲ್ತಾನರು, ವಿಜಯನಗರದ ಅರಸರು, ಇಕ್ಕೆರಿ ರಾಜ ಮನೆತನದ ಸ್ವಾದಿ ಅರಸರು ಹೀಗೆ ಕಾಲಾನುಕ್ರಮದಲ್ಲಿ ಗೋವಾವನ್ನು ಕನ್ನಡಿಗರೆ ಆಳಿದ್ದರು. ಪೋರ್ಚುಗೀಸರು ಗೋವಾವನ್ನು ವಶಪಡಿಸಿಕೊಳ್ಳುವವರೆಗೆ ಅದು ಕನ್ನಡ ಪ್ರದೇಶವೇ ಆಗಿತ್ತು. ಇಲ್ಲಿ ಮಹಾರಾಷ್ಟ್ರಿಗರ ವಾದ ಹುರುಳಿಲ್ಲದ್ದು ಎಂಬುದನ್ನು ಸಾಬೀತುಪಡಿಸಿದರು. ಮ. ರಾಮಮೂರ್ತಿ ಅವರು ಗೋವಾ ಕುರಿತಂತೆ -

"ಕನ್ನಡದ ಜನರ ಕೂಗು ದೆಹಲಿಯಲ್ಲಿರುವ ಕೇಂದ್ರದ ನಾಯಕರಿಗೆ ಮುಟ್ಟುವಂತಾಗಬೆಕು ಕನ್ನಡದ ಹತ್ತೊಂಬತ್ತು ಜಿಲ್ಲೆಯ ಜನ 'ಗೋವಾ ನಮಗೆ ಬೇಕು' ಎಂದು ಏಕಕಂಠದಿಂದ ಕೂಗಬೇಕು. ಎರಡೂವರೆ ಕೋಟಿ ಕನ್ನಡ ಜನತೆ ಬೃಹತ್ ಕಂಠದಿಂದ ಕಿವಿ ಮುಚ್ಚಿಕೊಂಡಿರುವ ಕೇಂದ್ರದ ನಾಯಕರ ಕಿವಿಗಳಿಗೆ ಕೇಳುವಂತೆ ತನ್ನ ನ್ಯಾಯವನ್ನು ಕೂಗಿ ಹೇಳಬೇಕು. ಏಳು ಸಾಮ್ರಾಜ್ಯಗಳನ್ನು ಕಟ್ಟಿದ ವೀರ ಕನ್ನಡಿಗರು ತಮ್ಮದಾದ ಗೋವಾವನ್ನು ಉಳಿಸಿಕೊಳ್ಳಲು ಎದ್ದು ನಿಂತರೆ ಜಗತ್ತಿನ ಯಾವ ಶಕ್ತಿಯೂ ಅವರನ್ನು ತಡೆಯಲಾರದು" - ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರು. ಆದರೆ ಇಂದು ಗೋವಾ ಪ್ರತ್ಯೇಕ ರಾಜ್ಯವಾಗಿಯೇ ಗುರುತಿಸಿಕೊಂಡಿದೆ. ಇಲ್ಲಿ ಮ. ರಾಮಮೂರ್ತಿ ಅವರು ಗೋವಾ ರಾಜ್ಯ ಕನ್ನಡಿಗರಿಗೆ ಹೇಗೆ ಸಾಂಸ್ಕೃತಿಕ ಸಂಬಂಧವನ್ನು ಬೆಸೆದಿತ್ತು ಎಂಬ ವಿಚಾರವನ್ನು ಹೇಳುವ ತಿರುಳು ಪ್ರಧಾನವಾಗುತ್ತದೆ. ಇನ್ನಿತರ ಕನ್ನಡ ಪ್ರದೇಶಗಳು ನಾಡಿಗೆ ಆದಷ್ಟು ಬೇಗ ಸೇರಿಸಿಕೊಳ್ಳಬೇಕು ಎಂಬ ಅವರ ತುರ್ತನ್ನು ಗ್ರಹಿಸುವುದು ಮುಖ್ಯ. ಕನ್ನಡ-ಕನ್ನಡಿಗ-ಕರ್ನಾಟಕದ ಸಮಸ್ಯೆಗಳ ಪರಿಹಾರಕ್ಕೆ ರಾಜಕಾರಣದ ಬಲ ಮುಖ್ಯವೆಂದು ಕನ್ನಡಿಗರಿಗೆ ಮನವರಿಕೆ ಮಾಡಿಕೊಡುವ ಚಿಂತನೆ ಅವರದಾಗಿತ್ತು.

## ೧೬. 'ಕನ್ನಡ ಪಕ್ಷ'ದ ನೇತಾರ

ಕನ್ನಡಿಗರ ಮೇಲೆ ಹಲ್ಲೆ ನಡೆಸುವ ಪ್ರವೃತ್ತಿಗಳು ಮಿತಿಮೀರಿದಾಗ ಮ. ರಾಮಮೂರ್ತಿ ಹಾಗೂ ಇತರೆ ಚಳವಳಿ ನಾಯಕರಿಗೆ ಆತಂಕವಾಗದೆ ಇರಲಿಲ್ಲ. ಮಹಾರಾಷ್ಟ್ರದಲ್ಲಿ 'ಶಿವಸೇನೆ', ಕೇರಳದಲ್ಲಿ 'ಗೋಪಾಲ ಸೇನೆ', ತಮಿಳುನಾಡಿನಲ್ಲಿ 'ದ್ರಾವಿಡ ಮುನ್ನೇತ್ರ ಕಳಗಂ' ಮೊದಲಾದವು ಹುಟ್ಟಿಕೊಂಡಿದ್ದವು. ಇವರ ಬೆಂಬಲಗಳಿಂದಾಗಿ ಬೆಂಗಳೂರಿನಲ್ಲಿ 'ತಮಿಳು ಸೇನೆ'ಯೇ ಹುಟ್ಟಿಕೊಂಡಿತ್ತು. ಬೆಳಗಾವಿಯಲ್ಲಿ ಮರಾಠಿಗರ 'ಮಹಾರಾಷ್ಟ್ರ ಏಕೀಕರಣ ಸಮಿತಿ' (ಎಂ.ಇ.ಎಸ್) ಇತರೆಡೆ ಡಿ.ಎಂ.ಕೆ.ಪಕ್ಷಗಳು ರಾಜಕಾರಣದ ಶಕ್ತಿಯನ್ನು ಪಡೆದುಕೊಂಡಿದ್ದವು. ಸ್ಥಳೀಯ ಹಾಗೂ ವಿಧಾನಸಭಾ ಚುನಾವಣೆಗಳಲ್ಲಿ ಕನ್ನಡೇತರರ ಈ ಪಕ್ಷಗಳು ಆಯ್ಕೆ ಆಗಿ ಬರುವಷ್ಟರ ಮಟ್ಟಿಗೆ ಕನ್ನಡಿಗರು ನಿರಭಿಮಾನಿ

ಗಳಾಗಿದ್ದರು. ನಮ್ಮಲ್ಲಿದ್ದ ಆಡಳಿತ ಹಾಗೂ ವಿರೋಧ ಪಕ್ಷಗಳವರು ಕನ್ನಡೇತರರ ಬೆಂಬಲವಾಗಿ ನಿಂತದ್ದು ಆಶ್ಚರ್ಯ ಹುಟ್ಟಿಸಿತ್ತು. ಇವರಿಗೆ ಗೆದ್ದು ಬರಲು ಭಾಷೆ-ನಾಡಿಗಿಂತ ಅವರ ಓಟುಗಳೇ ಮುಖ್ಯ ಆಗಿದ್ದವು. ಕನ್ನಡದ ಕೆಲಸಗಳಿಗೆ, ಸಮಸ್ಯೆಗಳಿಗೆ ರಾಷ್ಟ್ರೀಯ ಮಟ್ಟದ ರಾಜಕೀಯ ಪಕ್ಷಗಳು ಮುಂದೆ ಬರಲೇ ಇಲ್ಲ. ಕನ್ನಡಿಗರಿಗೆ ಪಕ್ಷಗಳಿದ್ದಿದ್ದರೆ ನಮ್ಮ ಸಮಸ್ಯೆಗಳ ಪರಿಹಾರಕ್ಕೆ ಆಡಳಿತಾತ್ಮಕ ಶಕ್ತಿ ಬರುತ್ತಿತ್ತು. ಸ್ಥಳೀಯ ಕಾರ್ಪೋರೇಷನ್, ವಿಧಾನಸಭೆ, ಲೋಕಸಭೆಗಳಲ್ಲಿ ಕನ್ನಡದ ಅಭ್ಯರ್ಥಿಗಳು ನಾಡಿನ ಪ್ರಾದೇಶಿಕ ಪಕ್ಷವೊಂದರಿಂದ ಆಯ್ಕೆ ಆಗುವುದು ಮ. ರಾಮಮೂರ್ತಿ ಅವರಿಗೆ ಅನಿವಾರ್ಯ ಅನ್ನಿಸಿತ್ತು. ಈ ನಿಟ್ಟಿನಲ್ಲಿ ವಾಟಾಳ್ ನಾಗರಾಜರು ಸಹ ಕ್ರಿಯಾಶೀಲ ರಾದರು. ಆದರೆ ಇವರಿಬ್ಬರ ತಾತ್ವಿಕ ಭಿನ್ನಾಭಿಪ್ರಾಯಗಳಿಂದಾಗಿ ಮ. ರಾಮಮೂರ್ತಿ ಅವರೆ ಖುದ್ದಾಗಿ 'ಕನ್ನಡ ಪಕ್ಷ' ಎಂಬ ಪ್ರಾದೇಶಿಕ ರಾಜಕೀಯ ಪಕ್ಷವನ್ನು (೧೯೬೬) ಕಟ್ಟಿದರು. ೧೯೬೬ ಹಾಗೂ ೧೯೬೭ರ ಚುನಾವಣೆಗಳಲ್ಲಿ 'ಕನ್ನಡ ಪಕ್ಷ'ದ ಅಭ್ಯರ್ಥಿಗಳು ಕನ್ನಡಿಗರಿಂದ ಮತ ಯಾಚಿಸಿದ್ದು ಪ್ರಯೋಜನಕ್ಕೆ ಬರಲಿಲ್ಲ. ಕನ್ನಡಿಗರ ಎಂದಿನ ನಿರಭಿಮಾನ, ನಿರುತ್ಸಾಹಗಳು ಮ. ರಾಮಮೂರ್ತಿ ಅವರನ್ನು ಅಸಮಧಾನಗೊಳಿಸಿದ್ದವು. ಪ್ರಾದೇಶಿಕ ಪಕ್ಷವೊಂದನ್ನು ಕಟ್ಟಿ ಗಟ್ಟಿಗೊಳಿಸುವ ಅವರ ಆಶಯ ನಿರೀಕ್ಷಿತ ಗುರಿಯನ್ನು ಮುಟ್ಟಲೇ ಇಲ್ಲ. 'ಕನ್ನಡ ಪಕ್ಷ'ಕ್ಕೆ ಆರ್ಥಿಕ ಬೆಂಬಲವಾಗಲಿ, ಪ್ರಚಾರವಾಗಲಿ ದೊರೆಯಲಿಲ್ಲ.

## ೧೭. ಮ. ರಾಮಮೂರ್ತಿ ಅವರ ಆಕಸ್ಮಿಕ ಸಾವು

'ಕನ್ನಡ'ದ ಕೆಲಸಗಳಿಗಾಗಿ ಟೊಂಕಕಟ್ಟಿ ನಡೆದ ರಾಮಮೂರ್ತಿ ಅವರು ಕನ್ನಡಿಗ ರಿಂದ, ಕನ್ನಡ ಚಳವಳಿಯಿಂದ ಹಿಂದಕ್ಕೆ ಸರಿಯುವ ಹಂತವನ್ನು ತಲುಪಿದ್ದು ೧೯೬೭ರ ವೇಳೆಗೆ. ಕಾರ್ಯಕರ್ತರ ಮೇಲೆ ನಡೆದ ಹಲ್ಲೆಗಳಿಗೆ ಪ್ರತಿಯಾಗಿ ಕನ್ನಡಿಗರು ಹಲ್ಲೆ ಮಾಡಿದ ಮೊಕದ್ದಮೆಗಳಿಗೆ, ಚಳವಳಿಗೆ ಪ್ರೇರೇಪಿತರೆಂಬ ಆಪಾದನೆಗಳಿಗೆ ಆರೋಪಿ ಯಾಗಿ ಪೊಲೀಸ್ ದಾಖಲೆಗಳು ಸೃಷ್ಟಿ ಆದವು. ಚಳವಳಿಯ ಕಾರ್ಯಕರ್ತರನ್ನು ಪೊಲೀಸರು ಬಂಧಿಸಿದರೆ ಮಧ್ಯರಾತ್ರಿಯಾದರೂ ಅವರನ್ನು ಜಾಮೀನುಕೊಟ್ಟು ಬಿಡುಗಡೆಗೊಳಿಸುವ ಉತ್ಸಾಹ ಅವರಲ್ಲಿ ಇತ್ತು. ಉನ್ನತ ಪೊಲೀಸ್ ಅಧಿಕಾರಿಗಳಾಗಿದ್ದ ಕಮೀಷನರ್ ಚಾಂಡಿ, ವಿಜಯದೇವರಾಜ ಅರಸ್, ಡಿ.ಐ.ಜಿ. ಮುಂಡಕೂರ್ ಮೊದಲಾದವರು ಮ. ರಾಮಮೂರ್ತಿ ಅವರ 'ಕನ್ನಡ'ದ ಅಭಿಮಾನಕ್ಕೆ ಬೆರಗಾಗಿದ್ದರು. ಆದರೆ ೧೯೬೭ರ ವೇಳೆಗೆ ರಾಮಮೂರ್ತಿ ಅವರು ಕೋರ್ಟಿನ ಮೇಟ್ಟಿಲು ಹತ್ತುವುದು ಸಾಮಾನ್ಯವಾಗಿತ್ತು. ಇತರರಿಗೆ ಜಾಮೀನು ಕೊಟ್ಟದ್ದು ಹಾಗೂ ಸ್ವತಃ ತಮ್ಮ ಮೇಲಿನ ಕೇಸುಗಳು ಹೆಚ್ಚಾಗಿದ್ದವು. ಕನ್ನಡ ಚಳವಳಿಯಲ್ಲಿಯೇ ನಿರತರಾಗಿದ್ದ ಇವರಿಗೆ ಮನೆಯ ಜವಾಬ್ದಾರಿಗಳನ್ನು ಹೊರುವುದು ಆರ್ಥಿಕವಾಗಿ ದುಸ್ತರವಾಯಿತು. ಕ್ರಮೇಣ

ಚಳವಳಿಯಿಂದ ಹಿಂದಕ್ಕೆ ಸರಿಯಲು ಆಲೋಚಿಸಿದರು. ತಮ್ಮ ಮನೆತನಕ್ಕೆ ಸೇರಿದ ಭೂಮಿಯಲ್ಲಿ ವ್ಯವಸಾಯ, ಟೊಮ್ಯಾಟೋ ಬೆಳೆ, ಕೋಳಿ ಸಾಕಾಣಿಕೆ ಇತ್ಯಾದಿಗಳನ್ನು ನಡೆಸುವುದರ ಮೂಲಕ ಜೀವನ ಸಾಗಿಸುವಂತಾಯಿತು. ಬೆಂಗಳೂರಿನ ಕಗ್ಗಲಿಪುರದ ಬಳಿ (ತಲಘಟ್ಟಪುರದಲ್ಲಿ) ಯಿದ್ದ ತಮ್ಮ ಜಮೀನಿಗೆ ನೀರಾವರಿ ಸೌಲಭ್ಯವಿರಲಿಲ್ಲ. ಆದ್ದರಿಂದ ಅಲ್ಲಿ ಬಾವಿಯನ್ನು ತೆಗೆಸಲು ಆರಂಭಿಸಿದ್ದರು. ೧೯೬೭ರ ಡಿಸೆಂಬರ್ ೨೫ರಂದು ಎಂದಿನಂತೆ ರಾಮಮೂರ್ತಿ ಅವರು ತಲಘಟ್ಟಪುರದ ಕಡೆಗೆ ಹೊರಡಲಿದ್ದರು. ದಿನಕರ ಮತ್ತು ಮಂಜು ಎಂಬ ತಮ್ಮ ಇಬ್ಬರು ಮಕ್ಕಳು ತಾವೂ ಬರುವುದಾಗಿ ಹಠವಿಡಿದಿದ್ದರಿಂದ ಅವರುಗಳೊಂದಿಗೆ ಹೊರಡಬೇಕಾಯಿತು. ಸಂಜೆ ೫ರ ವೇಳೆಗೆ ಬಾವಿಯಲ್ಲಿ ನೀರು ಬರಲಾರಂಭಿಸಿದ್ದು ಹುಡುಗರಿಗೂ ಕುತೂಹಲ ಹುಟ್ಟಿಸಿತು. ಅದನ್ನು ನೋಡಲು ತಂದೆಯೊಂದಿಗೆ ಬಾವಿಯೊಳಕ್ಕೆ ಇಳಿದರು. ಇಬ್ಬರು ಕೂಲಿ ಆಳುಗಳು ಇನ್ನೂ ನೀರು ಬರಲು ಮಣ್ಣನ್ನು ತೋಡುತ್ತಿದ್ದಂತೆಯೇ ದಡ ಕುಸಿಯಿತು. ರಾಮಮೂರ್ತಿ, ಇಬ್ಬರು ಮಕ್ಕಳು ಹಾಗೂ ಕೂಲಿ ಆಳುಗಳು ಮಣ್ಣಿನಲ್ಲಿ ಹುದುಗಿ ಹೋದರು. ಈ ಆಕಸ್ಮಿಕ ಘಟನೆಯು ರಾಮಮೂರ್ತಿ ಅವರ ಸೋದರ ಲಕ್ಷ್ಮಿನಾರಾಯಣ, ಅ.ನ.ಕೃ ಹಾಗೂ ಇತರೆ ಸ್ನೇಹಿತರನ್ನು ಸ್ಥಳಕ್ಕೆ ಧಾವಿಸುವಂತೆ ಮಾಡಿತ್ತು. ದುಃಖಿತಪ್ತ ಜನರನ್ನು ನಿಯಂತ್ರಿಸಿ ಮಧ್ಯರಾತ್ರಿಯ ವೇಳೆಗೆ ಪೊಲೀಸರು ದೇಹಗಳನ್ನು ಹೊರತೆಗೆದರು. 'ಕನ್ನಡ' ಎಂಬ ಮೂರು ಅಕ್ಷರಗಳಿಗಾಗಿ ತಮ್ಮನ್ನೇ ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದ ಮ. ರಾಮಮೂರ್ತಿ ಅವರ ಪಾರ್ಥಿವ ಶರೀರವನ್ನು ನೋಡಲು ಅಸಂಖ್ಯಾತ ಕನ್ನಡ ಕಾರ್ಯಕರ್ತರ ದಂಡೇ ನೆರೆಯಿತು. ಬೆಂಗಳೂರಿನಲ್ಲಿ ಅವರ ಶರೀರವನ್ನು ಮೆರವಣಿಗೆ ಮಾಡುವುದರೊಂದಿಗೆ ಚಳವಳಿಯ ನೇತಾರನಿಗೆ ಅಂತಿಮ ನಮನ ಸಲ್ಲಿಸಲಾಯಿತು. ರಾಮಮೂರ್ತಿಯವರ ನೇತೃತ್ವದಲ್ಲಿದ್ದ 'ಕನ್ನಡ ಪಕ್ಷ', ಚಳವಳಿ ವಿಚಾರಗಳು ತ.ರಾ. ಸುಬ್ಬರಾವ್ ಅವರ ಮುಂದಾಳತ್ವದಲ್ಲಿ ಯೋಜಿತವಾದವು. ಆದರೆ ಕನ್ನಡಿಗರ 'ಧೀರ ಸೇನಾನಿ' ಅನ್ನಿಸಿದ್ದ ಮ. ರಾಮಮೂರ್ತಿ ಅವರ ಚಳವಳಿಯ ಛಾಪು ಎಂದಿಗೂ ಮೂಡಿ ಬರಲೇ ಇಲ್ಲ.

## ೧೮. ಮ. ರಾಮಮೂರ್ತಿ ಅವರ ಸಾಹಿತ್ಯ ಚಿಂತನೆ

ಪ್ರಸ್ತುತ ಕೃತಿಯ ಆರಂಭದಲ್ಲಿ ಹೇಳಿದ ಹಾಗೆ ಮ. ರಾಮಮೂರ್ತಿ ಅವರು ಮೊದಲು ಪತ್ರಿಕೋದ್ಯಮ, ಅನಂತರ ಪತ್ತೇದಾರಿ ಕಾದಂಬರಿ ಕ್ಷೇತ್ರಕ್ಕೆ ಕಾಲಿರಿಸಿದವರು. ಸುಮಾರು ೧೫೦ಕ್ಕೂ ಹೆಚ್ಚಿನ ಕೃತಿಗಳು ಇವರಿಂದ ರಚಿತವಾಗಿವೆ. ಇವುಗಳಲ್ಲಿ ಬಹುಪಾಲು ಕೃತಿಗಳು ಇಂದು ಅಲಭ್ಯ. ಕನ್ನಡಿಗರಿಗೆ ಓದುವ ಗೀಳನ್ನು ಹಚ್ಚುವ ಪ್ರಧಾನ ಆಶಯವೊಂದೇ ರಾಮಮೂರ್ತಿ ಅವರಿಗೆ ಇದ್ದುದ್ದು. ಕನ್ನಡೇತರರ ಮಧ್ಯೆ ಕನ್ನಡವನ್ನು ಓದುವ ಹವ್ಯಾಸದ ಮೂಲಕ ನೆಲೆಗೊಳಿಸುವ ಪ್ರಯತ್ನ ಅವರದಾಗಿತ್ತು.

ಮೂಲತಃ ಪತ್ರಕರ್ತರಾಗಿದ್ದ ಮ. ರಾಮಮೂರ್ತಿ ಅವರು ಸರಳವಾದ, ಅಷ್ಟೇ ಮೊನಚಾದ ಭಾಷೆಯನ್ನು ಬಳಸುವ ಧಾಟಿ ರೂಢಿಸಿಕೊಂಡಿದ್ದವರು. ಈ ಥರದ ಶೈಲಿ ಸಮಾಜದಲ್ಲಿ ಜನರನ್ನು ಚಳವಳಿಗೆ ಪ್ರೇರೇಪಿಸುವ, ಚಿಂತನೆ ನಡೆಸುವ ಮಟ್ಟಕ್ಕೆ ಕೊಂಡೊಯ್ಯುತ್ತದೆ ಎಂಬುದು ಅವರ ನಂಬಿಕೆ. ತಾವು ವಿದ್ವಾಂಸರಿಗಾಗಿ ಬರೆಯುತ್ತಿಲ್ಲ ಎಂಬುದರ ಬಗ್ಗೆ ಅವರಿಗೆ ಅರಿವಿತ್ತು. ಬದಲಾಗಿ ಹೋಟೆಲ್, ಸಿನಿಮಾ, ಬಸ್, ರಿಕ್ಷಾಗಳಲ್ಲಿ ಕೆಲಸ ಮಾಡುವ ನೌಕರರಿಗೆ, ಜನಸಾಮಾನ್ಯರಿಗೆ ಕಡಿಮೆ ಬೆಲೆಯಲ್ಲಿ ಬರೆದು ಮನರಂಜನೆ ನೀಡುವುದು ಅವರ ಉದ್ದೇಶ.

ಸಣ್ಣಕತೆಗಳನ್ನು ಬರೆಯುವುದರೊಂದಿಗೆ ಮ. ರಾಮಮೂರ್ತಿ ಅವರು ತಮ್ಮ ಸಾಹಿತ್ಯ ಕೃಷಿ ಆರಂಭಿಸಿದ್ದರು. 'ನಾರಾಯಣರಾಯನ ಭೂತ' ಎಂಬ ತಮ್ಮ ಮೊದಲ ಪತ್ತೇದಾರಿ ಕತೆಯ ಮೂಲಕ ಕನ್ನಡ ಓದುಗರಲ್ಲಿ ಕುತೂಹಲಗಳನ್ನು ಕೆರಳಿಸಿದ್ದರು. ಡಾಕ್ಟರ್ ಒಬ್ಬರು ವೈದ್ಯ ವಿದ್ಯಾರ್ಥಿಯ ದೇಹವನ್ನು ಪ್ರವೇಶಮಾಡಿ ನಡೆಸುವ ಸಂಗತಿಗಳ ಸುತ್ತಣ ಕತೆ ಇದಾಗಿತ್ತು. ನಾಡಿನಲ್ಲಿ ಬಹಳ ಬೇಗ ಚರ್ಚೆಗೆ ಕಾರಣವಾದ ಕತೆಯೇ 'ನಾರಾಯಣರಾಯನ ಭೂತ'. ಅಂತೆಯೇ 'ರಜಾಕಾರ್ ಗುಪ್ತಚಾರ್' ಎಂಬುದು ಇವರ ಮೊದಲ ಹಾಗೂ ಕನ್ನಡದ ಮೊದಲ ಸ್ಪೈ ಗುಪ್ತಚಾರ್ ಕಾದಂಬರಿ (ಪರಿವಿಡಿ ೨೩ನ್ನು ಗಮನಿಸಿ). ಹೈದರಾಬಾದ್ ಕರ್ನಾಟಕದಲ್ಲಿ ರಜಾಕಾರರ ಹಾವಳಿ ತೀವ್ರ ಸ್ವರೂಪದಲ್ಲಿತ್ತು. ರಜಾಕಾರರ ನಾಯಕ ಖಾಸಿಂ ರಜ್ವಿ ಎಂಬುವವನು. ಇವರ ಸುತ್ತಣ ಹೆಣೆದ ಈ ಕಾದಂಬರಿ ಎಷ್ಟು ನೈಜವಾಗಿತ್ತು ಅಂದರೆ ಮ. ರಾಮಮೂರ್ತಿಗೂ ಇವನಿಗೂ ಸಂಬಂಧವಿದೆ ಅನ್ನುವಷ್ಟರಮಟ್ಟಿಗೆ. ಇಂಥ ಅಭೂತಪೂರ್ವ ಸೃಷ್ಟಿ ರಾಮಮೂರ್ತಿ ಅವರಿಂದ ಆಗಿವೆ. ಇವರ ಕನ್ನಡದ ಪರಿಸರವನ್ನೇ ಹೊಂದಿಕೊಂಡಂತೆ ಬರೆದ ಮೊದಲ ಪತ್ತೇದಾರಿ ಕಾದಂಬರಿ 'ಕಾಲುವೆ ಮನೆ'. ಇದು ನಂಜನಗೂಡಿನ ಕಲ್ಲಹಳ್ಳಿ ಸುತ್ತಣ ಹೆಣೆದದ್ದು.

ತಂದೆ ವೀರಕೇಸರಿ ಸೀತಾರಾಮಶಾಸ್ತ್ರಿಗಳಂತೆ ರಾಮಮೂರ್ತಿ ಅವರು ಸಹ ಚಾರಿತ್ರಿಕ ಕಾದಂಬರಿಗಳ ರಚನೆಯಲ್ಲಿ ಸಿದ್ಧಹಸ್ತರು. ಅವುಗಳಲ್ಲಿ ರಾಜದಂಡ, ವಿಪ್ಲವ, ಇಬ್ಬರು ರಾಣಿಯರು, ಇತರರಿಗೆ ಸೀಮೆ ಮೊದಲಾದವು ಪ್ರಮುಖವಾದವು. ಪಾಳೆಯಗಾರ ಶಿವಪ್ಪನಾಯಕ ಹಾಗೂ ರೈತ ಬಂಡಾಯಗಳ ಕಥಾವಸ್ತುವನ್ನು ಪಡೆದ ಕೃತಿಯೇ 'ರಾಜದಂಡ'. ಅಂತೆಯೇ ಮೊದಲ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಂಬಂಧಿಸಿದ್ದು 'ವಿಪ್ಲವ'. ಮ. ರಾಮಮೂರ್ತಿ ಅವರು ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಸಾಹಿತ್ಯ ಸೃಷ್ಟಿ ಮಾಡಿದವರು. ಅವರ 'ಚಿತ್ರಶಾಕುಂತಲಾ' ಎಂಬುದು ಭಾಮಿನಿ ಷಟ್ಪದಿಯಲ್ಲಿ ಬರೆದಿರುವ ಮಹಾ(ಗೀತ)ಕಾವ್ಯ. ಇವರು ಅಂದು ಬರೆದ ಕತೆ-ಕಾದಂಬರಿಗಳಲ್ಲಿ ಕೆಲವನ್ನಾದರೂ ಒಂದೆಡೆ ತರುವ ಪ್ರಯತ್ನ ಇಂದು ಆಗಬೇಕಿದೆ.

ಕನ್ನಡದಲ್ಲಿ ನಾಮಫಲಕಗಳ ರಚನೆ, ಬೆಂಗಳೂರು ಮಹಾನಗರ ಪಾಲಿಕೆ ಕನ್ನಡಮಯವಾದದ್ದು, ಕನ್ನಡದ ಪತ್ರಿಕೋದ್ಯಮ ಜನಪ್ರಿಯತೆ ಪಡೆದದ್ದು, ಪುಸ್ತಕೋದ್ಯಮ ಬೆಳೆದದ್ದು, ಕಾರ್ಖಾನೆಗಳಲ್ಲಿ ಕನ್ನಡಿಗರಿಗೆ ಆದ್ಯತೆ, ಗೌರವಗಳು ದೊರೆಯುವಂತೆ ಆದದ್ದು, ಕನ್ನಡ ರಂಗಭೂಮಿ-ಚಲನಚಿತ್ರೋದ್ಯಮ ಒಂದು ನೆಲೆಯನ್ನು ಕಂಡು ಕೊಂಡದ್ದು, ಕಲಾವಿದರನ್ನು ಗೌರವಿಸಿ ಪುರಸ್ಕರಿಸುವ ಧಾಟಿ ಬೆಳೆದದ್ದು, ವ್ಯವಹಾರಿಕ ಭಾಷೆ ಕನ್ನಡವೇ ಆಗಿದ್ದು-ಹೀಗೆ ಒಂದಲ್ಲಾ ಒಂದು 'ಕನ್ನಡ'ದ ಕೆಲಸಗಳು ಚಳವಳಿ ಮೂಲಕ ಪರಿಹಾರಗಳನ್ನು ಕಂಡುಕೊಂಡದ್ದು ಮ. ರಾಮಮೂರ್ತಿ ಅವರ ಪ್ರಯತ್ನ ಗಳಿಂದಲೇ. ಇಂದಿಗೂ ಅನೇಕ ಸಮಸ್ಯೆಗಳು ಅವರು ಹಾಕಿಕೊಟ್ಟ ಚಳವಳಿ ಹಾದಿಯ ಮೂಲಕ ಪರಿಹಾರಗಳನ್ನು ಕಂಡುಕೊಳ್ಳುವಲ್ಲಿ ಹಾಗೆಯೇ ಮುಂದುವರೆದಿವೆ.

ಅಧಿಕೃತ ಧ್ವಜವೇ ಇಲ್ಲದಿದ್ದ ಕನ್ನಡಿಗರಿಗೆ ಹಳದಿ-ಕೆಂಪು ಬಣ್ಣದ ಬಾವುಟವನ್ನು ನೀಡಿದ, ರಾಜ್ಯೋತ್ಸವ ಆಚರಣೆಯನ್ನು ಸರ್ಕಾರವೇ 'ನಾಡಹಬ್ಬ'ವನ್ನಾಗಿ ಆಚರಿಸು ವಂತೆ ಮಾಡಿದ ಕೀರ್ತಿ ಮ. ರಾಮಮೂರ್ತಿ ಅವರಿಗೆ ಸಲ್ಲುತ್ತದೆ. ಅವರು ರೂಪಿಸಿದ ಚಳವಳಿ ಮಾರ್ಗಗಳನ್ನರಸಿ ನಡೆಯುತ್ತಿರುವ ಅನೇಕ ಕನ್ನಡಪರ ಸಂಘಟನೆಗಳು ಈ ಹೊತ್ತಿಗೂ ನಾಡಿನಾದ್ಯಂತ ಹರಡಿವೆ. ಅದರಲ್ಲೂ 'ವೀರ ಸೇನಾನಿ ಮ. ರಾಮಮೂರ್ತಿ ಕನ್ನಡ ಬಳಗ' (ಬೆಂಗಳೂರು) ಎಂಬ ಹೆಸರಿನಲ್ಲಿಯೇ ಒಂದು ಸಂಘವಿದೆ.

— o —

## ೧೯. ಮ. ರಾಮಮೂರ್ತಿ ಅವರ ಕೃತಿಗಳು

೧. ರಜಾಕಾರ್ ಗುಪ್ತಾಚಾರ
೨. ವಿಪ್ಲವ-೧೮೫೭
೩. ಇಬ್ಬರು ರಾಣಿಯರು
೪. ರಾಜದಂಡ
೫. ಚಿತ್ರಲೇಖ
೬. ಕಾಲುವೆ ಮನೆ
೭. ಯಾರವನು?
೮. ವಿಷಕನ್ಯೆ
೯. ಅಮೃತಮಯಿ
೧೦. ಪ್ರೇಮ ಕಣ್ಣು ಬಿಟ್ಟಾಗ
೧೧. ಬಯಕೆ ಈಡೇರಲಿಲ್ಲ
೧೨. ರಾಜ ರಹಸ್ಯ
೧೩. ಮರೆಯಾಗಿದ್ದ ವಜ್ರಗಳು
೧೪. ಏಕಾಕಿನಿ
೧೫. ಎರಡು ಚೂರಿಗಳು
೧೬. ಸಾಗರಿ
೧೭. ಅಕಳಂಕಿಣಿ
೧೮. ಎಳೆ ವಯಸ್ಸಿನ ಹೆಂಡತಿ
೧೯. ಕಡೆಯ ಮಾತು
೨೦. ಬೆರಳಿಲ್ಲದ ಕೈ
೨೧. ವೈಯ್ಯಾಳಿ ಕಾವಲ್
೨೨. ಒಡೆದ ಬಳೆ

೨೩. ಆ ಸುಂದರಿಯರು
೨೪. ಕಡಲ ತೀರದ ಸೋದರಿಯರು
೨೫. ತಪ್ಪಿ ಹೋಗಿದ್ದ ಪ್ರಿಯತಮ
೨೬. ಚೂರಿ ಹಿಡಿದ ದಸ್ಯು ಕನ್ಯೆ
೨೭. ವಿಚಿತ್ರವಾದ ಭಾವಚಿತ್ರ
೨೮. ಕೈ ಕೊಟ್ಟ ಪ್ರೇಮಪತ್ರ
೨೯. ಹೇಳಿದ ಕತೆ
೩೦. ಅಪರಾಧಿಯ ಆತ್ಮಕಥೆ
೩೧. ಜೀವನ ಸ್ವಪ್ನ
೩೨. ಮಂಜಿನ ಗೊಂಬೆ
೩೩. ಅವನ ಪ್ರೇಯಸಿ
೩೪. ಅದೃಷ್ಟದ ಮಚ್ಚೆ
೩೫. ಅಶ್ಲೀಲ ಪತ್ರಗಳು
೩೬. ಜಾರುವ ಸೆರಗು
೩೭. ಹೊರಮನೆ ಹುಡುಗಿ
೩೮. ತಾಯಿ ಸತ್ತ ಮಗಳು
೩೯. ಕಡೆಯ ಮಾತು
೪೦. ಜುಲೇಖಾ
೪೧. ಮತ್ತೆ ಜುಲೇಖಾ
೪೨. ಪುನಃ ಜುಲೇಖಾ
೪೩. ಒಡೆದ ಕನ್ನಡಿ
೪೪. ಕಣ್ಮರೆಯಾದ ಮಡದಿ
೪೫. ಸುಂದರ ಸ್ವಪ್ನ
೪೬. ಅವಳೇಕೆ ಬಂದಿದ್ದಳು
೪೭. ಹಳೆಯ ಸ್ನೇಹಿತರು
೪೮. ಸಿದ್ದಿನ ಗವಿ
೪೯. ಸತ್ತವಳ ಕತೆ
೫೦. ಬರೆದ ಕಾಗದ
೫೧. ಮಾಲ್‌ಕೌಂಸ್
೫೨. ಅವನು ಸಾಯಬೇಕು
೫೩. ಅವಳ ಡೈರಿ

೫೪. ಲಕುಮಿಯ ಹೆಣ
೫೫. ಪಾಕಿಸ್ತಾನದ ರಹಸ್ಯ ಪತ್ರ
೫೬. ಪಾಕಿಸ್ತಾನ್ ಗೂಢಚಾರ

- ಇತ್ಯಾದಿ

(ಮ. ರಾಮಮೂರ್ತಿ ಅವರ ಮೇಲ್ಕಂಡ ಕಾದಂಬರಿಗಳ ಪಟ್ಟಿ ಅಪೂರ್ಣವಾಗಿದೆ. ಸಾಕಷ್ಟು ಅಧ್ಯಯನ ನಡೆಸಿದ ನಂತರ ೫೬ ಕೃತಿಗಳ ಶೀರ್ಷಿಕೆಗಳು ಮಾತ್ರ ದೊರೆತಿವೆ. ಆದರೆ ಅವರು ೧೫೦ಕ್ಕೂ ಹೆಚ್ಚಿನ ಪತ್ತೆದಾರಿ ಕಾದಂಬರಿಗಳನ್ನು ರಚಿಸಿದ್ದರು.)

— o —

# ೨೦. 'ಕನ್ನಡಿಗರ ನ್ಯಾಯ'

"ಗೋವಾಗೆ ಪ್ರತ್ಯೇಕವಾದ ವ್ಯಕ್ತಿತ್ವ ಮತ್ತು ಚರಿತ್ರೆಯಿದೆ. ಆ ವ್ಯಕ್ತಿತ್ವವನ್ನು ನಾಶಮಾಡುವುದು ಸರಿಯಲ್ಲ. ಅದರಿಂದ ಅದನ್ನು ಉಳಿಸಿಕೊಂಡೇ ಬರಬೇಕೆಂದು ತೀರ್ಮಾನ ಮಾಡಿದ್ದೇವೆ. ಕಾಲಪ್ರವಾಹದಲ್ಲಿ ಅದು ಬದಲಾವಣೆಯಾಗಬಹುದು. ಆದರೆ ಅದು ಹಂತ ಹಂತವಾಗಿ ಆಗಲಿ. ಮತ್ತು ಗೋವನ್ನರಿಂದಲೇ ಆಗಲಿ. ಭಾರತದಲ್ಲಿ ಗೋವಾವನ್ನು ಪ್ರತ್ಯೇಕವಾಗಿ ಉಳಿಸಿಕೊಂಡು ಬರಲು ತೀರ್ಮಾನ ಮಾಡಿದ್ದೇವೆ. ಮತ್ತು ಅದಕ್ಕೆ ಬದ್ಧರಾಗಿದ್ದೇವೆ. ಅದರ ವಿರೋಧವಾಗಿ ಮಾಡುವ ಚಳುವಳಿ ಪ್ರಯೋಜನ ವಿಲ್ಲ. ಅದನ್ನು ಭಾರತದ ಯಾವ ಪ್ರಾಂತಕ್ಕೂ ಸೇರಿಸಲು ನಾವು ಇಚ್ಛಿಸುವುದಿಲ್ಲ."

ಇವು ನಾವು ಹೇಳಿದ ಮಾತುಗಳಲ್ಲ. ಭಾರತದ ಮಹಾನಾಯಕರಾಗಿದ್ದ ಪಂಡಿತ ಜವಹರಲಾಲ ನೆಹರೂರವರು ಹೇಳಿದ ಮಾತುಗಳು.

ಗೋವಾ ಹತ್ತು ವರ್ಷಗಳ ಕಾಲ ಪ್ರತ್ಯೇಕವಾಗಿರಬೇಕೆಂದೂ, ಅನಂತರ ಗೋವನ್ನರು ಯಾವ ಪ್ರಾಂತಕ್ಕೆ ಸೇರಲು ಅಪೇಕ್ಷಿಸುತ್ತಾರೆಯೋ ಆ ಪ್ರಾಂತಕ್ಕೆ ಸೇರಬಹುದೆಂದೂ ಭಾರತ ಕಾಂಗ್ರೆಸ್ಸಿನ ಕೇಂದ್ರ ಪಾರ್ಲಿಮೆಂಟರಿ ಬೋರ್ಡು ತೀರ್ಮಾನ ಮಾಡಿತು. ಈ ತೀರ್ಮಾನವಾದುದು ೧೯೬೪ನೇ ಏಪ್ರಲ್ ೭ನೇ ತಾರೀಖಿನ ದಿನ.

ಅಷ್ಟೇ ಅಲ್ಲ, ವಿಮೋಚನೆಯಾದ ನಂತರ ಗೋವಾಗೆ ಪ್ರಥಮ ಸಂದರ್ಶನವಿತ್ತಾಗ ಜವಹರರು ಇದೇ ಭರವಸೆಯನ್ನು ಗೋವಾದ ಜನತೆಗೆ ಇತ್ತಿದ್ದರು. ಲೋಕಸಭೆ ಮತ್ತು ರಾಜ್ಯಸಭೆಗಳಲ್ಲಿ ಮೇಲಿಂದ ಮೇಲೆ ಈ ವಿಷಯವನ್ನು ಒತ್ತಿ ಹೇಳಿದ್ದರು.

ಭೌಗೋಳಿಕವಾಗಿ, ಚಾರಿತ್ರಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಗೋವೆ ಕನ್ನಡ ನಾಡಿಗೆ ಸೇರಬೇಕಾದ್ದೆಂದು ಜವಹರರು ಮನಗಂಡಿದ್ದರು. ಗೋವಾ ವಿಮೋಚನೆ ಯಾದೊಡನೆಯೇ ಕನ್ನಡಿಗರಾದ ತುಮಕೂರಿನ ಶ್ರೀ ಶಿವಶಂಕರರನ್ನು ಗೋವಾದ ಲೆಫ್ಟಿನೆಂಟ್ ಗವರ್ನರ್ ಆಗಿ ನೇಮಕ ಮಾಡಿದರು. ಮುಖ್ಯ ಕಾರ್ಯದರ್ಶಿಯಾಗಿ ಕನ್ನಡಿಗರೆ ಆದ ಶ್ರೀ ಫರ್ನಾಂಡಿಸ್‌ರನ್ನು ಗೊತ್ತು ಮಾಡಿದರು. ಆಡಳಿತದ ಅಧಿಕಾರಿ ಮತ್ತು ಸಿಬ್ಬಂದಿ ವರ್ಗಕ್ಕೆ ಮುಕ್ಕಾಲರಷ್ಟು ಮಂದಿಯನ್ನು ಕನ್ನಡನಾಡಿನಿಂದಲೇ ತೆಗೆದುಕೊಂಡಿದ್ದರು.

ಈ ರೀತಿಯಾಗಿ ಒಮ್ಮೆ ತೀರ್ಮಾನವಾದ ವಿಷಯವನ್ನು ಮತ್ತೆ ಎತ್ತಬೇಕೇಕೆ? ಈ ವರ್ಷಾಂತ್ಯದೊಳಗಾಗಿ ಗೋವೆಯಲ್ಲಿ ಪುನಃ ಚುನಾವಣೆಗಳನ್ನು ನಡೆಸಬೇಕೇಕೆ? ಗೋವಾ ಹತ್ತು ವರ್ಷಗಳು ಸ್ವಾತಂತ್ರ್ಯವಾಗಿರಬೇಕೇ ಅಥವಾ ಈಗಲೇ ಮಹಾರಾಷ್ಟ್ರದಲ್ಲಿ ವಿಲೀನವಾಗಬೇಕೆ ಎಂಬುದನ್ನು ಆ ಚುನಾವಣೆಗಳಿಂದ ತೀರ್ಮಾನ ಮಾಡಬೇಕೆನ್ನುವುದೇಕೆ? ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿಗಳು ಹಟದಿಂದ ಮಹಾರಾಷ್ಟ್ರದವರ ಪಕ್ಷವನ್ನು ವಹಿಸಿರುವುದೇಕೆ?

ಮೇಲೆ ಉದಹರಿಸಿರುವ ಜವಹರರ ವಾಕ್ಯಗಳನ್ನು ಗಮನಿಸಿದರೆ "ಗೋವಾದ ಪ್ರತ್ಯೇಕತೆಯನ್ನು ವಿರೋಧಿಸುವ ಚಳುವಳಿ ಓಪ್ರಯೋಜನವಿಲ್ಲ" ಎಂದು ಹೇಳಿರುವುದನ್ನು ನೋಡಬಹುದು. ಅವರ ಮಾತುಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ತಾವು ತೆಗೆದುಕೊಂಡಿರುವ ನಿಲುವಿಗೆ ವಿರೋಧವಿದೆಯೆಂದೂ, ಅವು ಗೋವಾವನ್ನು ಕಬಳಿಸಲು ಯತ್ನಿಸುತ್ತಿವೆ ಎಂಬುದೂ ಜವಹರಲಾಲರಿಗೆ ಗೊತ್ತಿದ್ದಿತೆಂಬುದನ್ನು ಮನಗಾಣಬಹುದು.

ಅದರಿಂದಲೇ ಅವರು ವಿರೋಧ ಮಾಡುವ ಚಳುವಳಿಯಿಂದ ಪ್ರಯೋಜನವಿಲ್ಲವೆಂದು ಹೇಳಿದರು. ೧೯೬೩ನೇ ವರ್ಷದ ಕಡೆಯ ದಿನಗಳಲ್ಲಿ ಜವಹರರು ಹಾಸಿಗೆ ಹಿಡಿದು ಮಲಗಿದರು. ಅವರ ಕಡೆಗಾಲವು ಸನ್ನಿಹಿತವಾಯಿತೆಂಬುದು ಅವರ ಸಮೀಪವರ್ತಿಗಳಿಗೆ ಗೊತ್ತಿದ್ದಿತು.

ಮಾರನೆಯ ವರ್ಷ ಎಂದರೆ ೧೯೬೪ನೇ ಮೇ ೨೭ರಂದು ಅವರು ಅಮರತ್ವವನ್ನು ಪಡೆದರು.

ಹೀಗಿದ್ದರೂ ೧೯೬೪ನೇ ಏಪ್ರಲ್ ೭ರಂದು ಎಂದರೆ ಅವರು ಮೃತರಾಗುವುದಕ್ಕೆ ೫೦ ದಿನಗಳ ಮೊದಲು ಹತ್ತು ವರ್ಷಗಳ ಕಾಲ ಗೋವಾ ಪ್ರತ್ಯೇಕವಾಗಿರಬೇಕೆಂದು ಕೇಂದ್ರ ಪಾರ್ಲಿಮೆಂಟರಿ ಬೋರ್ಡ್ ನಿರ್ಣಯ ಮಾಡಿತೆಂದರೆ ಗೋವಾ ಬಗ್ಗೆ ಮಹಾರಾಷ್ಟ್ರರು ನಡೆಸುತ್ತಿರುವ ಪಿತೂರಿಗೆ ಜವಹರರ ವಿರೋಧ ಎಷ್ಟಿದ್ದಿತೆಂಬುದು ವ್ಯಕ್ತವಾಗುತ್ತದೆ.

ಆದರೆ ವಿರೋಧ ಶಕ್ತಿಗಳು ಜವಹರರು ಎಣಿಸಿದ್ದಕ್ಕಿಂತಲೂ ಬಲವಾಗಿದ್ದವು. ಜವಹರರು ಆರೋಗ್ಯವಾಗಿರುವವರೆವಿಗೆ ವಿಧಿಯಿಲ್ಲದೇ ಅವು ಸುಮ್ಮನಿದ್ದವು. ಅವರು ಮರಣಶಯ್ಯೆಯಲ್ಲಿ, ಸಾವು ಬದುಕುಗಳ ಹೋರಾಟದಲ್ಲಿದ್ದಾಗ ತಮ್ಮ ಜಾಲಗಳನ್ನು ಬೀಸಿದವು. ಅವರ ಮರಣಾನಂತರ ಬೃಹದಾಕಾರ ತಾಳಿ ನಿಂತವು. ಈಗ ಕಬಂಧನಂತೆ ಕೈಚಾಚಿ ಗೋವಾವನ್ನು ನುಂಗಲು ಹಾತೊರೆಯುತ್ತಿವೆ.

ಈ ಶಕ್ತಿಗಳೇ ಮಹಾರಾಷ್ಟ್ರದ ಆಕ್ರಮಣವಾದಿಗಳು. ಅವರುಗಳ ಚಾಲಕರು ಭಾರತದ ರಕ್ಷಣಾಮಂತ್ರಿ ಶ್ರೀ ಯಶವಂತರಾವ್ ಚವಾಣರು.

ಹತ್ತು ವರ್ಷಗಳ ಕಾಲ ಗೋವಾವನ್ನು ಪ್ರತ್ಯೇಕವಾಗಿಡಬೇಕೆಂದು ಪಾರ್ಲಿಮೆಂಟರಿ ಬೋರ್ಡು ತೀರ್ಮಾನ ಮಾಡಿದ ಸಭೆಯಲ್ಲಿ ಶ್ರೀ ಚವಾಣರು ಭಾಗವಹಿಸಲಿಲ್ಲ.

ಆಮೇಲೆ ಶ್ರೀ ಚವಾಣರು ಗೋವೆಯ ಭವಿಷ್ಯವು ಗೋವನ್ನರ ಇಷ್ಟಕ್ಕೆ ಅನುಸಾರ ವಾಗಿಯಾಗಲೀ, ಭಾರತದ ಹಿತಕ್ಕೆ ಅನುಸಾರವಾಗಿಯಾಗಲೀ ತೀರ್ಮಾನವಾಗಲಿಲ್ಲ ವೆಂದು ಹೇಳಿಕೆಯನ್ನಿತ್ತರು.

ಶ್ರೀ ಬಂದೋಡ್ಕರರ ಮಹರಾಷ್ಟ್ರವಾದಿ ಗೋಮಾಂತಕ ಪಕ್ಷಕ್ಕೆ ಚುನಾವಣೆಗಳಲ್ಲಿ ಪ್ರತ್ಯಕ್ಷವಾಗಿ ಸಹಾಯ ಮಾಡಿದರು. ಆದರೆ ಕಾಂಗ್ರೆಸ್ಸಿನ ಶಿಸ್ತು ಅವರನ್ನು ಏನೂ ಮಾಡಲಾಗಲಿಲ್ಲ.

ಶ್ರೀ ಚವಾಣರ ಪ್ರಯತ್ನಗಳು ಅಲ್ಲಿಗೇ ನಿಲ್ಲಲಿಲ್ಲ. ನೆಹರೂರವರು ಮರಣ ಹೊಂದಿದ ಎರಡು ತಿಂಗಳುಗಳ ಒಳಗಾಗಿ ಪಾರ್ಲಿಮೆಂಟರಿ ಬೋರ್ಡು ಪುನಃ ಸಮಾವೇಶವಾಗಿ ನೆಹರೂರವರ ನಿರ್ಧಾರಕ್ಕೆ ತಿಲಾಂಜಲಿಯನ್ನೀಯುವಂತೆ ಮಾಡಿದರು. ಜುಲೈ ೧೩ನೆಯ ತಾರೀಖು ಪಾರ್ಲಿಮೆಂಟರಿ ಬೋರ್ಡ್ ಸಮಾವೇಶವಾಗಿ ಗೋವಾ ಭವಿಷ್ಯವನ್ನು ಪುನರಾಲೋಚನೆ ಮಾಡಿ ಆ ಬಗ್ಗೆ ಸಂಬಂಧಪಟ್ಟ ಕಾರ್ಯಾಚರಣೆಯನ್ನು ಕೈಗೊಳ್ಳಲು ಶ್ರೀ ಲಾಲ್ ಬಹದೂರ್ ಶಾಸ್ತ್ರಿಗಳಿಗೆ ಅಧಿಕಾರವನ್ನು ಕೊಟ್ಟಿತು.

ಇದೆಲ್ಲವನ್ನೂ ನೋಡಿದರೆ ಭಾರತದ ಗಡಿಗಳನ್ನು ರಕ್ಷಿಸುವುದಕ್ಕಿಂತ ಮಹಾರಾಷ್ಟ್ರದ ಗಡಿಗಳನ್ನು ಬೆಳೆಸುವುದೇ ರಕ್ಷಣಾಮಂತ್ರಿ ಚವಾಣರಿಗೆ ಮುಖ್ಯವಾದ ಕೆಲಸವಾಗಿದೆ ಎಂದು ಕಾಣುತ್ತದೆ.

ಗೋವಾದಲ್ಲಿ ಅಧಿಕಾರಕ್ಕೆ ಬಂದ ಶ್ರೀ ಬಂದೋಡ್ಕರ್ ಸರ್ಕಾರವು ಗೋವಾ ಮಹಾರಾಷ್ಟ್ರಕ್ಕೆ ಸೇರಬೇಕೆಂಬ ನಿರ್ಣಯವನ್ನು ತನ್ನ ವಿಧಾನಸಭೆಯಲ್ಲಿ ಕೇವಲ ಅಲ್ಪಬಹುಮತದಿಂದ ಪಾಸು ಮಾಡಿಸಿಕೊಂಡಿತು. ಹಾಗೆಯೇ ಶ್ರೀ ವಿ.ಪಿ. ನಾಯಕ್‌ರ ಸರ್ಕಾರವು ತನ್ನ ವಿಧಾನಸಭೆಯಲ್ಲಿ ಮಹಾರಾಷ್ಟ್ರ ಗೋವಾವನ್ನು ಸೇರಿಸಿಕೊಳ್ಳಬೇಕೆಂಬ ನಿರ್ಣಯವನ್ನು ಪಾಸು ಮಾಡಿಸಿಕೊಂಡಿತು.

ಇದಿಷ್ಟರಿಂದಲೇ ಶ್ರೀ ಚವಾಣರು ಗೋವಾವನ್ನು ಮಹಾರಾಷ್ಟ್ರದಲ್ಲಿ ವಿಲೀನಮಾಡಿ ಕೈಚಪ್ಪಾಳೆ ಹೊಡೆದುಬಿಡುತ್ತಿದ್ದರು.

ಆದರೆ ಬಂದೋಡ್ಕರರ ಸರ್ಕಾರ ಕೇಂದ್ರ ಮತ್ತು ಮಹಾರಾಷ್ಟ್ರಗಳ ಸಹಾಯದಿಂದ ನಿಂತಿದೆಯೇ ಹೊರತು ಅದಕ್ಕೆ ತನ್ನ ಕಾಲ ಮೇಲೆ ತಾನು ನಿಲ್ಲುವ ಶಕ್ತಿಯಿಲ್ಲವೆಂಬುದನ್ನು ಅವರು ಬಲ್ಲರು.

ಗೋವಾ ವಿಧಾನಸಭೆಯಲ್ಲಿರುವುದು ೩೩ ಸ್ಥಾನಗಳು. ಅದರಲ್ಲಿ ಗೋನ್ನರಿಂದ ಚುನಾಯಿತರಾಗುವವರು ೩೦ ಮಂದಿ. ಕೇಂದ್ರದಿಂದ ನಾಮಕರಣ ಮಾಡಲ್ಪಡುವವರು ೩ ಮಂದಿ. ಚುನಾಯಿತರಾದವರಲ್ಲಿ ಬಂದೋಡ್ಕರರ ಪಾರ್ಟಿಗಿರುವುದು ೧೪ ಸ್ಥಾನಗಳು. ಮಹಾರಾಷ್ಟ್ರ ವಿಲೀನ ವಿರೋಧಿ ಯುನೈಟೆಡ್ ಗೋರ್ವ ಪಾರ್ಟಿಗಿರುವುದು ೧೨ ಸ್ಥಾನಗಳು. ಸಮತಾವಾದಿ ಪಾರ್ಟಿಗೆ ೨ ಸ್ಥಾನಗಳೂ, ಕಾಂಗ್ರೆಸ್ ಮತ್ತು ಸ್ವತಂತ್ರರಿಗೆ ಒಂದೊಂದು ಸ್ಥಾನಗಳೂ ಇವೆ.

ಈ ಸ್ಥಿತಿಯಲ್ಲಿ ಸ್ವತಂತ್ರಮನೋಭಾವದ ಮೂರು ಮಂದಿಯನ್ನು ಕೇಂದ್ರ ಸರ್ಕಾರವು ನಾಮಕರಣ ಮಾಡಿದರೆ ಬಂದೋಡ್ಕರ್ ಸರ್ಕಾರ ಒಂದೇ ಕ್ಷಣದಲ್ಲಿ ಹಾರಿಹೋಗುತ್ತದೆ. ಮಹಾರಾಷ್ಟ್ರ ಸರ್ಕಾರ ಮತ್ತು ಮಹಾರಾಷ್ಟ್ರದ ಹಣವಿಲ್ಲವೆಂದಾದರೆ ಇರುವ ಬೆಂಬಲವನ್ನೂ ಕಳೆದುಕೊಂಡು ಬಂದೋಡ್ಕರ್ ಸರ್ಕಾರ ಕ್ಷಣದಲ್ಲಿ ದಿವಾಳಿಯಾಗುತ್ತದೆ.

ಕಳೆದ ವರ್ಷ ಗೋವಾದಲ್ಲಿ ನಡೆದ ಚುನಾವಣೆಗಳು ಗೋವಾದ ಪ್ರಜಾಸಂಖ್ಯೆಯಲ್ಲಿ ಕೇವಲ ಶೇಕಡ ೩೫ರಷ್ಟು ಮಂದಿ ಮಹಾರಾಷ್ಟ್ರ ವಿಲೀನವಾದಿಗಳೆಂದೂ, ಶೇಕಡ ೬೫ರಷ್ಟು ಮಂದಿ ವಿಲೀನ ವಿರೋಧವಾದಿಗಳೆಂದೂ ಸಾಬೀತುಮಾಡಿತು.

ಅದರಿಂದ ಇಂತಹ ಅಲ್ಪವೂ, ಸಂದೇಹಕರವೂ ಆದ ಬಹುಮತದಿಂದ ಗೋವಾವನ್ನು ಮಹಾರಾಷ್ಟ್ರಕ್ಕೆ ಸೇರಿಸುವ ಧೈರ್ಯ ಶ್ರೀ ಚವಾಣರಿಗೆ ಇಲ್ಲದೇ ಹೋಯಿತು.

ಅದೂ ಅಲ್ಲದೆ ೧೯೬೪ನೇ ಡಿಸೆಂಬರ್ ೧೭ ರಂದು ಯುನೈಟೆಡ್ ಗೋವಾನ್ನರು ಬೃಹತ್ ಸಭೆಯನ್ನು ಸೇರಿಸಿ "ಗೋವವನ್ನು ಮಹಾರಾಷ್ಟ್ರಕ್ಕೆ ಸೇರಿಸುವ ಚಾವಣೀ ಪ್ರಯತ್ನ ಗಳನ್ನು ಗೋವಾದ ಜನಗಳಾದ ನಾವು ವಿರೋಧಿಸುತ್ತೇವೆ. ನಾವು ಜನಮತ ಗಣನೆಯಿಂದ ತೀರ್ಮಾನಿಸುವವರೆವಿಗೆ ಯಾವ ಪ್ರಾಂತಕ್ಕೂ ನಮ್ಮನ್ನು ಬಲಾತ್ಕಾರವಾಗಿ ಸೇರಿಸಕೂಡದು. ಗೋವಾದ ಈ ನ್ಯಾಯಕ್ಕಾಗಿ ಕಡೆಯವರೆವಿಗೆ ಹೋರಾಡಲು ನಾವು ಒಗ್ಗಟ್ಟಾಗಿ ನಿಲ್ಲುತ್ತೇವೆ. ಅಲ್ಲದೇ ಹಾಗೆ ತೀರ್ಮಾನಿಸಿದ್ದೇವೆ. ನಮ್ಮನ್ನು ಸೇರಿಸಲು ಯಾವ ಪ್ರಾಂತದೊಡನೆಯೂ ನಮಗೆ ನಿರ್ಣೀತ ಭಾಷಾಬಾಂಧವ್ಯವಿಲ್ಲ" ಎಂದು ನಿರ್ಣಯ ಮಾಡಿದರು.

ಈ ಬೃಹತ್ ಪ್ರಜಾಭಿಪ್ರಾಯವನ್ನು ಎದುರಿಸುವುದಕ್ಕೆ ಶ್ರೀ ಚವಾಣರಿಗೆ ಧೈರ್ಯವಾಗಲಿಲ್ಲ.

ಶ್ರೀ ಚವಾಣರೂ, ಮಹಾರಾಷ್ಟ್ರವೂ ಬೆಂಬಲವಿತ್ತು ಸ್ಥಾಪಿಸಿದ ಮಹಾರಾಷ್ಟ್ರವಾದೀ ಗೋಮಾಂತಕ ಪಕ್ಷದಿಂದಾಗಲೀ, ಅವರ ಕೈಗೊಂಬೆಯಾದ ಶ್ರೀ ಬಂದೋಡ್ಕರರ ಮೂಲಕವಾಗಿಯಾಗಲೀ ೧೯೬೪ನೇ ಮೇ ತಿಂಗಳಲ್ಲಿ ನಡೆದ ಚುನಾವಣೆಗಳಿಂದ ಗೋವಾವನ್ನು ಮಹಾರಾಷ್ಟ್ರಕ್ಕೆ ಸೇರಿಸಲಾಗಲಿಲ್ಲ.

ಅದರಿಂದ ಬೇರೊಂದು ವಿಧವಾಗಿ ಪ್ರಯತ್ನವನ್ನು ಮಾಡತೊಡಗಿದರು. ಬಂದೋಡ್ಕರ್ ಸರ್ಕಾರವು ಅಧಿಕಾರಕ್ಕೆ ಬರುತ್ತಲೇ ಗೋವಾದಲ್ಲಿ ಕೆಲಸಕ್ಕಿದ್ದ ಕನ್ನಡಿಗರನ್ನೆಲ್ಲಾ ಹಿಂದಕ್ಕೆ ಕಳಿಸಿ, ಆ ಸ್ಥಾನಗಳಿಗೆ ಮಹಾರಾಷ್ಟ್ರರನ್ನು ತಂದಿಟ್ಟರು. ಶೇಕಡ ೯೮ರಷ್ಟು ಮಂದಿಯ ಮಾತೃಭಾಷೆಯಾದ ಕೊಂಕಣಿಯನ್ನು ಕಡೆಗಣಿಸಿದರು. ಕೊಂಕಣಿ ಜನರ ಮೇಲೆ ಮರಾಠಿಯನ್ನು ಹೇರಲು ನೂರಾರು ಮರಾಠಿ ಶಾಲೆಗಳನ್ನು ತೆರೆದರು. ಸಾವಿರಾರು ಮಂದಿ ಮರಾಠಿ ಮಾಸ್ತರುಗಳನ್ನು ಗೋವಾಗೆ ಪೂನಾ ಕಡೆಯಿಂದ ಆಮದು ಮಾಡಿಕೊಂಡರು.

ನಾಳೆ ಗೋವಾದಲ್ಲಿ ಚುನಾವಣೆಗಳಾದರೆ ಚುನಾವಣಾಧಿಕಾರಿಗಳಾಗುವವರು ಈ ಮರಾಠಿ ಮಾಸ್ತರುಗಳೇ.

ಇದಿಷ್ಟು ಸಿದ್ಧತೆಗಳನ್ನು ಮಾಡಿಕೊಂಡು ಶ್ರೀ ಚವಾಣರು ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿಗಳಿಂದ ಈ ವರ್ಷದ ಕಡೆಯೊಳಗಾಗಿ ಗೋವಾದಲ್ಲಿ ಸಾರ್ವತ್ರಿಕ ಚುನಾವಣೆಗಳು ನಡೆಯಬೇಕೆಂದು ಹೇಳಿಸಿದರು.

ಗೋವೆಯು ತಕ್ಷಣ ಮಹಾರಾಷ್ಟ್ರಕ್ಕೆ ಸೇರಬೇಕೇ ಅಥವಾ ಹತ್ತು ವರ್ಷಗಳ ನಂತರ ಸೇರಬೇಕೆ ಎಂಬ ಸೂತ್ರದ ಮೇಲೆ ಈ ಚುನಾವಣೆಗಳು ನಡೆಯುತ್ತವೆಂದು ಶ್ರೀ ಬಂದೋಡ್ಕರರು ವ್ಯಾಖ್ಯಾನ ಮಾಡಿದಾಗ ಪ್ರಧಾನಿಗಳು ಅದನ್ನು ಇಲ್ಲವೆನ್ನಲಿಲ್ಲ.

ಈಗ ಗೋವಾ ಪ್ರಶ್ನೆಯನ್ನು ಮಹಾರಾಷ್ಟ್ರರು ಪ್ರಮುಖವಾಗಿ ಎತ್ತಿದರೂ ಸಹ ಕಾರವಾರ ಮತ್ತು ಬೆಳಗಾವಿ ಜಿಲ್ಲೆಗಳು ತಮಗೆ ಸೇರಬೇಕೆಂದು ಕೇಳುತ್ತಿದ್ದಾರೆ. ಈಚೆಗೆ ಮಹಾರಾಷ್ಟ್ರದ ಮುಖ್ಯ ಪಟ್ಟಣಗಳಲ್ಲಿ ಒಂದಾದ ನಾಗಪುರದಲ್ಲಿ ಮಾತನಾಡುತ್ತಾ ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿಗಳು "ಮಹಾರಾಷ್ಟ್ರದ ಗಡಿ ವಿವಾದಗಳೆಲ್ಲವನ್ನೂ ಇನ್ನು ಆರು ತಿಂಗಳುಗಳಲ್ಲಿ ಬಗೆಹರಿಸುತ್ತೇನೆ" ಎಂದು ಆಶ್ವಾಸನೆ ಕೊಟ್ಟಿದ್ದಾರೆ.

ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿಗಳಿಂದ ಗೋವಾದ ಚುನಾವಣಾ ಘೋಷಣೆ, ಶ್ರೀ ಬಂದೋಡ್ಕರರಿಂದ ಅದರ ವ್ಯಾಖ್ಯಾನಗಳು ಬಂದನಂತರ ಮೈಸೂರು ಮಂತ್ರಿಗಳು ವಿಧಿಯಿಲ್ಲದೆ ಜಾಗ್ರತರಾಗಬೇಕಾಯಿತು. ತಮ್ಮನ್ನು ಸಮಾಲೋಚನೆಗೆ ಸಹ ಕರೆಯದೇ ಕೇಂದ್ರದ ನಾಯಕರು ಎಕ್ಸ್‌ಪಾರ್ಟೆ ಡಿಗ್ರಿ ಕೊಟ್ಟಿದ್ದಕ್ಕಾಗಿ ಪೇಚಾಡಿಕೊಂಡರು. ಕೇಂದ್ರದ ನಾಯಕರು ಈ ಸಂಬಂಧದಲ್ಲಿ ತಮ್ಮ ನೀತಿಯನ್ನು ಬದಲಾಯಿಸಿಕೊಳ್ಳದಿದ್ದರೆ ತಾವು ಮಂತ್ರಿ ಪದವಿಗಳಿಗೆ ರಾಜೀನಾಮೆಯನ್ನು ಸಹ ಕೊಡಬೇಕಾಗಿ ಬರಬಹುದೆಂದು ಹೇಳಿದರು. ಈ ವಿಷಯವನ್ನು ಕೇಂದ್ರದ ನಾಯಕರೊಡನೆ ಮಾತಾಡಿಕೊಂಡು ಬರಲು ಶ್ರೀ ರಾಮಕೃಷ್ಣ ಹೆಗ್ಗಡೆಯವರನ್ನು ದೆಹಲಿಗೆ ಕಳಿಸಿದರು.

ಆದರೆ ಅದರಿಂದ ಆದದ್ದೇನು?

ಗೋವಾದ ಬಗ್ಗೆ ಕಟ್ಟಕಡೆಯ ತೀರ್ಮಾನವನ್ನು ಬೆಂಗಳೂರು ಎ.ಐ.ಸಿ.ಸಿ.ಯು ಮೊದಲು ತೆಗೆದುಕೊಳ್ಳುವುದಾಗಿ ಹೇಳಲಾಯಿತು. ಅದಕ್ಕೆ ಗೋವಾ ಕಾಂಗ್ರೆಸ್ ಅಧ್ಯಕ್ಷರನ್ನೂ, ಮೈಸೂರು ಮುಖ್ಯಮಂತ್ರಿಗಳನ್ನೂ ಕರೆಯುವುದಾಗಿ ಹೇಳಲಾಯಿತು. ಅನಂತರ ಎ.ಐ.ಸಿ.ಸಿ.ಯ ಕಡೆಯ ದಿನ ಪಾರ್ಲಿಮೆಂಟರಿ ಬೋರ್ಡ್‌ನ ಸಮಾವೇಶವಾಗುವುದೆಂದು ವರ್ತಮಾನವು ಬಂದಿತು.

ಬೆಂಗಳೂರಿನಲ್ಲಿ ಕನ್ನಡಿಗರು ತೋರಿದ ಪ್ರಚಂಡ ಪ್ರತಿಭಟನೆಯನ್ನು ನೋಡಿದ ಕೇಂದ್ರದ ನಾಯಕರಿಗೆ ಬೆಂಗಳೂರಿನಲ್ಲಿ ಮಹಾರಾಷ್ಟ್ರ ಪರವಾದ ನಿರ್ಣಯವನ್ನು ತೆಗೆದುಕೊಳ್ಳಲು ಧೈರ್ಯವಿಲ್ಲದೇ ಹೋಯಿತು. ಶ್ರೀ ಚವಾಣರು ಸಹ ಅದಕ್ಕೆ ಒತ್ತಾಯ ಮಾಡಲಿಲ್ಲವೆಂದು ತೋರುತ್ತದೆ, ಬೆಂಗಳೂರಿನಲ್ಲಿ ನಿರ್ಣಯವನ್ನು ತೆಗೆದುಕೊಂಡರೇನು?

ದೆಹಲಿಯಲ್ಲಿ ತೆಗೆದುಕೊಂಡರೇನು? ಶ್ರೀ ಚವಾಣರಿಗೆ ಬೇಕಾದುದು ಗೋವಾ ಮಹಾರಾಷ್ಟ್ರಕ್ಕೆ ಸೇರುವುದು, ಅದಾದರಾಯಿತು.

ಅಂತೂ ಗೋವಾ ಬಗ್ಗೆ ಯಾವ ತೀರ್ಮಾನವೂ ಬೆಂಗಳೂರಿನಲ್ಲಿ ಆಗಲಿಲ್ಲ. ಆ ತೀರ್ಮಾನವು ದೆಹಲಿಯಲ್ಲಿ ಆಗುವುದೆಂದು ಹೇಳಿ ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿಗಳು ಕೈಯಾಡಿಸಿ ಹೊರಟುಬಿಟ್ಟರು. ಹೋಗುತ್ತಾ ಗೋವೆಯ ಭವಿಷ್ಯವು ಚುನಾವಣೆಯಿಂದಲೇ ಇತ್ಯರ್ಥವಾಗಬೇಕೆಂದೂ, ಅದಕ್ಕೆ ಮೈಸೂರಿನ ಮುಖ್ಯಮಂತ್ರಿಗಳೂ ಒಪ್ಪಿದ್ದಾರೆಂದು ಹೇಳಿ ಹೋದರು.

ಅಲ್ಲಿಗೆ ದೆಹಲಿಯಲ್ಲಿ ಏನು ತೀರ್ಮಾನವಾಗುತ್ತದೆ ಎಂಬುದರ ವಿಷಯದಲ್ಲಿ ಸ್ವಲ್ಪವೂ ಸಂದೇಹ ಉಳಿಯಲಿಲ್ಲ. ಮೊದಲ ತೀರ್ಮಾನದಂತೆ ಗೋವೆಯಲ್ಲಿ ಚುನಾವಣೆಗಳು ಆಗಿಯೇ ಆಗುತ್ತವೆ. ಅದು ಈ ವರ್ಷಾಂತ್ಯದೊಳಗಲ್ಲವೆಂದೂ ಹೇಳಿಲ್ಲ.

ಹಾಗಿರುವಾಗ ಗೋವೆಯ ಬಗ್ಗೆ ಕೇಂದ್ರದ ನಾಯಕರು ತಾಳಿದ್ದ ನಿಲುವಿನಲ್ಲಿ ಏನು ಬದಲಾವಣೆಯಾದ ಹಾಗಾಯಿತು? ಇದಕ್ಕೆ ಮೈಸೂರಿನ ಮಂತ್ರಿಗಳ ಪ್ರತಿಕ್ರಿಯೆಯೇನು?

ಶ್ರೀ ಚವಾಣರ ತಾಳಕ್ಕೆ ತಕ್ಕ ಹಾಗೆ ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿಗಳು ಕುಣಿಯುತ್ತಾರೇಕೆ? ಕೇಂದ್ರದ ರಾಜಕೀಯ ಪ್ರಾಂತಗಳ ರಾಜಕೀಯಕ್ಕೆ ಯಾವ ವಿಧವಾಗಿಯೂ ಭಿನ್ನ ವಾಗಿಲ್ಲ. ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿಗಳು ಅಧಿಕಾರದಲ್ಲಿರಬೇಕಾದರೆ ಶ್ರೀ ಕಾಮರಾಜರ ಬೆಂಬಲಬೇಕು. ಅವರ ಬೆಂಬಲ ಸಿಕ್ಕಬೇಕಾದರೆ ಅವರಿಗೆ ಕಾಂಗ್ರೆಸ್ಸಿನ ಅಧ್ಯಕ್ಷ ಪದವಿ ಕೊಡಬೇಕು. ಹಾಗೆ ಅವರನ್ನು ಅಧ್ಯಕ್ಷ ಪದವಿಗೆ ಏರಿಸಬೇಕಾದ್ದರಿಂದ ಹೈದರಾಬಾದ್ ನಿರ್ಣಯವನ್ನು ಬದಲಾಯಿಸಬೇಕಾಯಿತು. ಆ ನಿರ್ಣಯವನ್ನು ಬದಲಾಯಿಸಲು ಶ್ರೀ ಶಾಸ್ತ್ರಿಗಳಿಗೆ ಮಹಾರಾಷ್ಟ್ರದ ಬೆಂಬಲ ಬೇಕಾಯಿತು.

ಹೀಗೆ ತಮ್ಮ ಅಧಿಕಾರವನ್ನು ಉಳಿಸಿಕೊಳ್ಳಲು ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿಗಳು ಶ್ರೀ ಚವಾಣರ ಕೈಗೊಂಬೆಯಾಗಿ ಕರ್ನಾಟಕದ ನ್ಯಾಯವಾದ ಹಕ್ಕು ಬಾಧ್ಯತೆಗಳನ್ನು ನಿರ್ಲಕ್ಷಿಸುತ್ತಾರೆ.

ಸ್ಥಳೀಯ ನಾಯಕಪಟ್ಟದಲ್ಲಿರುವ ಮೈಸೂರಿನ ಮಂತ್ರಿಗಳು ತಮ್ಮ ಪದವಿಗಳನ್ನು ಉಳಿಸಿಕೊಳ್ಳುವುದರಲ್ಲಿ, ಅದಕ್ಕಾಗಿ ಕೇಂದ್ರದ ನಾಯಕರ ಮತ್ತು ಮಂತ್ರಿಗಳ ಸಹಾಯವನ್ನು ಪಡೆಯುವುದರಲ್ಲಿ ಮಗ್ನರಾಗಿದ್ದಾರೆಯೇ ವಿನಾ ಕನ್ನಡ ನಾಡಿನ ಹಕ್ಕು ಬಾಧ್ಯತೆಗಳಿಗಾಗಿ ಹೋರಾಡಲು ಆಸಕ್ತರಾಗಿಲ್ಲ.

ಹಿಂದೆಯೂ ಹೀಗೆಯೇ ಆಯಿತು.

ಕಾಸರಗೋಡನ್ನು ಕೇರಳಕ್ಕೆ ಸೇರಿಸಿದಾಗ ಮೈಸೂರಿನ ಮಂತ್ರಿಗಳು ಪ್ರತಿರೋಧವನ್ನು ಸೂಚಿಸಲಿಲ್ಲ. ಬಳ್ಳಾರಿ ಜಿಲ್ಲೆಯ ಆದವಾನಿ, ಆಲೂರು, ರಾಯದುರ್ಗಗಳು ಆಂಧ್ರಕ್ಕೆ ಸೇರಲು ಮೈಸೂರಿನ ನಾಯಕರು ಒಪ್ಪಿದ್ದರೆಂದು ಶ್ರೀ ನೀಲಂ ಸಂಜೀವರೆಡ್ಡಿಯವರು

ಮದರಾಸ್‌ನಲ್ಲಿ ಘಂಟಾಘೋಷವಾಗಿ ಹೇಳಿದರು. ಮದರಾಸ್ ವಿಧಾನಸಭೆಗೆ ನೀಲಗಿರಿ ಜಿಲ್ಲೆಯಿಂದ ಕನ್ನಡಿಗರು ಪ್ರಚಂಡ ಬಹುಮತದಿಂದ ಆರಿಸಿ ಬಂದರೂ ಆ ಜಿಲ್ಲೆ ಕನ್ನಡನಾಡಿಗೆ ಉಳಿಯಲಿಲ್ಲ.

ಗೋವಾ ಸುತ್ತಲೂ ಕನ್ನಡ ನಾಡಿನಿಂದ ಆವರಿಸಲ್ಪಟ್ಟಿದೆ. ಅಲ್ಲಿನವರ ನಿತ್ಯಬಳಕೆಯ ವಸ್ತುಗಳು ಕನ್ನಡ ನಾಡಿನಿಂದ ಹೋಗುತ್ತವೆ. ಗೋವಾ ಬಂದರಿನಿಂದ ಸಾಗುವ ಬಹುತೇಕ ಸರಕು ಕನ್ನಡ ನಾಡಿನದು. ಅಲ್ಲಿನ ಕಾರ್ಮಿಕರು ಕನ್ನಡಿಗರು. ಕನ್ನಡಿಗರು ಅಲ್ಲಿ ಸಾಕಷ್ಟು ಬಂಡವಾಳ ಹಾಕಿ ಉದ್ದಿಮೆಗಳನ್ನು ನಡೆಸುತ್ತಿದ್ದಾರೆ.

ಇಷ್ಟಿದ್ದರೂ ಪೋರ್ಚುಗೀಸರಿಂದ ಗೋವಾ ವಿಮೋಚನೆ ಹೊಂದಿದ ಮೇಲೆ, ಅಲ್ಲಿ ಕನ್ನಡಿಗರಾದ ಅಧಿಕಾರಿಗಳಿದ್ದಾಗ ಮೈಸೂರು ಮಂತ್ರಿಗಳು ಏನು ಮಾಡಿದರು? ಮಹಾರಾಷ್ಟ್ರರು ಅಲ್ಲಿ ಮರಾಠಿ ಶಾಲೆಗಳನ್ನು ತೆರೆದಂತೆ ಗೋವೆಯಲ್ಲಿ ನಮ್ಮ ಮಂತ್ರಿಗಳು ಕನ್ನಡ ಶಾಲೆಗಳನ್ನು ತೆರೆದರೇ? ಕನ್ನಡ ಶಾಲೆಗಳನ್ನು ತೆರೆಯುವವರಿಗೆ ಸಹಾಯ ಮಾಡಿದರೆ? ಗೋವೆಯ ವಿದ್ಯಾರ್ಥಿಗಳಿಗೆ ಕನ್ನಡ ಶಾಲಾ ಕಾಲೇಜುಗಳಲ್ಲಿ ಸ್ಥಾನಗಳನ್ನು ಕೊಟ್ಟರೆ? ಮಹಾರಾಷ್ಟ್ರ ವಿಲೀನ ವಿರೋಧಿಗಳಾದ ಶೇಕಡ ೬೫ರಷ್ಟು ಜನರನ್ನು ಸಂಘಟಿಸಿದರೆ?

ಹಾಗೇನೂ ಮಾಡಲಿಲ್ಲ.

ಈಗಲಾದರೂ ಗೋವಾ ಕನ್ನಡ ನಾಡಿನದು, ಕನ್ನಡ ನಾಡಿಗೇ ಸೇರಬೇಕು ಎಂದು ಬಾಯಿ ಬಿಟ್ಟು ಹೇಳುತ್ತಾರೆಯೇ? ಯುನೈಟೆಡ್ ಗೋವನ್ನರು ಪಡೆಯ ಬಹುದಾದ ಜಯವನ್ನು ನೆಚ್ಚಿ ಕುಳಿತರೆ ಗೋವಾ ಕನ್ನಡ ನಾಡಿಗೆ ಸೇರುತ್ತದೆಯೇ? ಕೇಂದ್ರದ ನಾಯಕರು ಹೇಳುವುದಕ್ಕೆ "ಜೀಯಾ-ಹಸಾದ" ಎನ್ನುತ್ತಿದ್ದರೆ ಕನ್ನಡ ನಾಡಿನ ಹಿತರಕ್ಷಣೆಯಾದೀತೇ? ಶ್ರೀ ಕೆ.ಎಲ್. ರಾಯರ ಸರ್ಟಿಫಿಕೇಟುಗಳಿಗೆ ಆಸೆಪಟ್ಟರೆ, ಶ್ರೀ ನೀಲಂ ಸಂಜೀವರೆಡ್ಡಿಯವರ ಶಿಫಾರಸುಗಳನ್ನು ಅಪೇಕ್ಷಿಸಿದರೆ, ಶ್ರೀ ಕಾಮರಾಜರ ಷಹಬಾಸ್‌ಗಿರಿಗೆ ಬೇಗರೆದರೆ ಕನ್ನಡ ನಾಡಿಗಾಗಿ ಹೋರಾಡಲು ಸಾಧ್ಯವಾಗುತ್ತದೆಯೇ?

ಎ.ಐ.ಸಿ.ಸಿ ಮುಗಿಸಿಕೊಂಡು ಬೆಂಗಳೂರಿನಿಂದ ಹಿಂದಿರುಗಿ ಹೋಗುತ್ತಾ ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿಗಳು "ಚುನಾವಣೆಯಿಂದಲೇ ಗೋವಾ ಭವಿಷ್ಯ ಇತ್ಯರ್ಥವಾಗ ಬೇಕೆನ್ನುವು ದಕ್ಕೆ ಮೈಸೂರಿನ ಮುಖ್ಯಮಂತ್ರಿಗಳ ಒಪ್ಪಿಗೆಯಿದೆ" ಎಂದು ಹೇಳಿ, ತಮ್ಮ ಪುಂಗಿಯನ್ನೇ ಊದಿದಾಗ ನಮ್ಮ ಮುಖ್ಯಮಂತ್ರಿಗಳು "ನಾನು ಅದಕ್ಕೆ ಒಪ್ಪಿಕೊಂಡಿಲ್ಲ" ಎಂದು ಗಟ್ಟಿಯಾಗಿ ಹೇಳಬೇಡವೆ?

ಹಾಗೆ ಹೇಳಿದ್ದರೆ ನಮ್ಮ ಮುಖ್ಯಮಂತ್ರಿಗಳನ್ನು ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿಗಳು ಬರ್ತರಫ್ ಮಾಡುತ್ತಿದ್ದರೆ?

ಇಂದು ಗೋವನ್ನರ ಸ್ಥಿತಿಯಾದರೂ ಏನಾಗಿದೆ ಎಂಬುದು ಗಮನಾರ್ಹವಾಗಿದೆ.

ಪೋರ್ಚುಗೀಸರು ಆಳುತ್ತಿದ್ದಾಗ "ಪೋರ್ಚುಗಲ್ ನಮ್ಮ ಮಾತೃಭೂಮಿ" "ಪೋರ್ಚುಗೀಸ್ ನಮ್ಮ ಮಾತೃಭಾಷೆ" "ವಾಸಗೋಡಗಾಮಾ, ಆಲ್‌ಬೂಕರ್ಕ್ ನಮ್ಮ ರಾಷ್ಟ್ರವೀರರು" ಎಂದು ಗೋವನ್ನರಿಂದ ಹೇಳಿಸುತ್ತಿದ್ದರು. "ನಿಮ್ಮ ಸಂಸ್ಕೃತಿ ಪೋರ್ಚುಗೀಸ್. ನಿಮ್ಮನ್ನು ಸುಸಂಸ್ಕೃತರಾಗಿ ಮಾಡುವವರು ಪೋರ್ಚುಗೀಸರು. ಗೋವಾ ಸ್ವಾತಂತ್ರ ಹೋರಾಟಗಾರರು ದೇಶದ್ರೋಹಿಗಳು" ಎಂದು ಹೇಳಿಕೊಡುತ್ತಿದ್ದರು. ಅದೇ ಇಂದು ಮಹಾರಾಷ್ಟ್ರರು "ಮಹಾರಾಷ್ಟ್ರವು ನಮ್ಮ ಮಾತೃಭೂಮಿ. ಮರಾಠಿಯು ನಮ್ಮ ಮಾತೃಭಾಷೆ. ಶಿವಾಜೀ ಮತ್ತು ಬಾಜೀರಾಯ ನಮ್ಮ ರಾಷ್ಟ್ರವೀರರು" ಎಂದು ಗೋವನ್ನರಿಂದ ಹೇಳಿಸಲು ಪ್ರಯ್ನಿಸುತ್ತಿಲ್ಲವೇ? "ನಿಮ್ಮ ಸಂಸ್ಕೃತಿ ಮಹಾರಾಷ್ಟ್ರ. ನಿಮ್ಮನ್ನು ಸುಸಂಸ್ಕೃತರಾಗಿ ಮಾಡುವವರು ಮರಾಠರು. ಮಹಾರಾಷ್ಟ್ರ ವಿಲೀನ ವಿರೋಧಿಗಳು ದೇಶದ್ರೋಹಿಗಳು" ಎಂದು ಗೋವನ್ನರಿಗೆ ಹೇಳಿಕೊಡಲು ಪ್ರಯತ್ನಿಸುತ್ತಿಲ್ಲವೇ?

ದಾಸ್ಯಕ್ಕೆ ಹೆಸರು ಬದಲಾಯಿಸಿದ ಮಾತ್ರದಿಂದ ಆದ ಸ್ವತಂತ್ರವಾಗುತ್ತದೆಯೇ?

ಹೀಗೆ ಕನ್ನಡ ನಾಡಿನ ಹಿತವು ಕೇಂದ್ರದ ನಾಯಕರಿಂದ ನಿರ್ಲಕ್ಷಿಸಲ್ಪಟ್ಟಿದೆ. ದಾಕ್ಷಿಣ್ಯ ಬದ್ಧರಾದ ಮೈಸೂರಿನ ಮಂತ್ರಿಗಳು ನಿಸ್ಸಹಾಯಕರಾಗಿದ್ದಾರೆ.

ಇದನ್ನು ನೋಡಿಕೊಂಡು ಜನತೆ ಸುಮ್ಮನಿರುವುದೆಂತು?

ಹತ್ತು ವರ್ಷಗಳ ಕಾಲ ಗೋವಾ ಸ್ವತಂತ್ರವಾಗಿರಬೇಕೆಂದೂ, ಅನಂತರ ಮಹಾರಾಷ್ಟ್ರಕ್ಕೆ ಸೇರುವುದು ಅಥವಾ ಕನ್ನಡ ನಾಡಿಗೆ ಸೇರುವುದು ಗೋವನ್ನರ ಇಷ್ಟವೆಂದೂ ಹೇಳುವುದು ಒಪ್ಪುವುದಕ್ಕಾಗದ ಮಾತು. ಗೋವಾ ಕನ್ನಡನಾಡಿಗೇ ಸೇರಬೇಕು. ಇಂದಲ್ಲ, ಪೋರ್ಚುಗೀಸರ ಬಂಧನದಿಂದ ವಿಮೋಚನೆಗೊಂಡಾಗಲೇ ಅದು ಕನ್ನಡನಾಡಿಗೆ ಸೇರಬೇಕಾಗಿತ್ತು.

ಪಂಡಿತ ಜವಹರಲಾಲರ ಮೇಲೆ ಕನ್ನಡ ಜನತೆಗೆ ಗೌರವ ವಿಶ್ವಾಸಗಳಿವೆ. ಅವರು ಗೋವಾ ಹತ್ತು ವರ್ಷ ಸ್ವತಂತ್ರರಾಗಿರಬೇಕೆಂದು ಹೇಳಿದರಲ್ಲ ಎಂದು ಕನ್ನಡ ಜನತೆ ಸುಮ್ಮನೆ ಇದ್ದಿತೇ ವಿನಾ ಅದು ಕನ್ನಡಿಗರ ದೌರ್ಬಲ್ಯವಲ್ಲವೆಂದು ಮಹಾರಾಷ್ಟ್ರರಾಗಲೀ, ಕೇಂದ್ರದವರಾಗಲೀ ತಿಳಿದುಕೊಳ್ಳದೇ ಇರಲಿ.

೮೦ ಮೈಲಿಗಳ ಉದ್ದವಿರುವ ಗೋವಾ ಕನ್ನಡನಾಡಿನ ಮಧ್ಯದಲ್ಲಿದೆ. ೧೪೦೦ ಚದರ ಮೈಲಿಗಳ ವಿಸ್ತೀರ್ಣವಿರುವ ಗೋವಾದ ಒಂದೊಂದು ಅಂಗುಲದ ಭೂಮಿಯೂ ಕನ್ನಡ ನಾಡಿನಲ್ಲಿ ಅಂತರ್ಗತವಾಗಿದೆ. ಎಲ್ಲಿಯೋ ಒಂದು ಕಡೆ ಕೇವಲ ಇಪ್ಪತ್ತು ಮೈಲಿಗಳಷ್ಟು ಭೂಮಿಯು ಮಹಾರಾಷ್ಟ್ರದ ಕಡೆಗೆ ತಗಲಿರುವುದರಿಂದ ಗೋವಾ ಮಹಾರಾಷ್ಟ್ರದ್ದಾಗ ಲಾರದು.

ಗೋವಾದಲ್ಲಿ ವಾಸಮಾಡುವ ಜನರು ಯಾವ ಮತಕ್ಕೇ ಸೇರಿರಲಿ, ಅವರಲ್ಲಿ ಶೇಕಡ ೯೮ರಷ್ಟು ಮಂದಿ ಕೊಂಕಣೀ ಮಾತನಾಡುವವರು. ಅವರ ಆರು ಲಕ್ಷ ಮಂದಿ ಕೊಂಕಣೀ ಬಂಧುಗಳು ಉತ್ತರ ಕನ್ನಡ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿದ್ದಾರೆ.

ಕೇವಲ ಜೀವನೋಪಾಯಕ್ಕಾಗಿ ಒಂದೂವರೆ ಲಕ್ಷ ಕೊಂಕಣಿಗಳು ಮುಂಬೈ ನಗರದಲ್ಲಿದ್ದಾರೆಂಬ ಕಾರಣದಿಂದ ಗೋವಾದ ಮೇಲೆ ಮಹಾರಾಷ್ಟ್ರಕ್ಕೆ ಯಾವ ಅಧಿಕಾರವೂ ಇಲ್ಲ.

ಗೋವಾದ ಭವಿಷ್ಯವು ಚುನಾವಣೆಗಳಿಂದ ಇತ್ಯರ್ಥವಾಗಬೇಕೆಂದು ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿಗಳು ಹೇರುತ್ತಾರೆ. ಏಕೆ ಚುನಾವಣೆಗಳಿಂದ ಇತ್ಯರ್ಥವಾಗಬೇಕು?

ಭಾರತದಲ್ಲಿ ಭಾಷಾವಾರು ಪ್ರಾಂತ ಪುನರ್ವಿಂಗಡಣೆಯಾದಾಗ ಯಾವ ಪ್ರದೇಶದ ಭವಿಷ್ಯವೂ ಸಹ ಚುನಾವಣೆಗಳಿಂದಾಗಲೀ, ಜನಮತಗಣತ ಗಣನೆಯಿಂದಾಗಲೀ ಇತ್ಯರ್ಥ ವಾಗಲಿಲ್ಲ.

ಜನಮತಗಣನೆ ಮತ್ತು ಚುನಾವಣೆಗಳಿಂದ ಇತ್ಯರ್ಥಮಾಡುವುದಾದರೆ ಕಾಸರಗೋಡಿನಲ್ಲಿ ಏಕೆ ಈ ಪದ್ಧತಿ ಅನುಸರಿಸಲಿಲ್ಲ? ಷೋಲಾಪುರದಲ್ಲಿ ಏಕೆ ಈ ವಿಧಾನವನ್ನು ಕೈಬಿಟ್ಟರು? ನೀಲಗಿರಿ ಜಿಲ್ಲೆಗೆ ಇದೇಕೆ ಅನ್ವಯವಾಗಬಾರದು? ಬೊಂಬಾಯಿ ನಗರವನ್ನು ಮಹಾರಾಷ್ಟ್ರಕ್ಕೆ ಕೊಡುವಾಗ ಈ ಚುನಾವಣೆಯ ನ್ಯಾಯ ಎಲ್ಲಿ ಹೋಗಿದ್ದಿತು?

ಒಂದು ಪ್ರದೇಶವನ್ನು ಒಂದು ಪ್ರಾಂತಕ್ಕೆ ಸೇರಿಸುವಾಗ ಪರಿಗಣಿಸಬೇಕಾದುದು ಅದರ ಚರಿತ್ರೆ, ಆ ಪ್ರಾಂತದೊಡನೆ ಕಾಲಾಂತರದಿಂದ ಅದಕ್ಕಿರುವ ಸಂಬಂಧ, ಭೌಗೋಳಿಕ ಸ್ಥಿತಿ ಮತ್ತು ಆಡಳಿತಾನುಕೂಲಗಳೇ ಮುಂತಾದವುಗಳು.

ಈ ರೀತಿಯಾಗಿ ತೆಗೆದುಕೊಂಡರೂ ಕನ್ನಡ ನಾಡಿಗೆ ಆಗಿರುವ ಆ ನ್ಯಾಯ ಅಷ್ಟಿಷ್ಟಲ್ಲ.

ಗೋವೆ ಕನ್ನಡ ನಾಡಿನದೇ ಆಗಿದೆ.

ಮೈಸೂರು ಜಿಲ್ಲೆಯು ಎಷ್ಟರಮಟ್ಟಿಗೆ ಕನ್ನಡನಾಡಿನದೋ, ಧಾರವಾಡ ಜಿಲ್ಲೆಯು ಎಷ್ಟರಮಟ್ಟಿಗೆ ಕನ್ನಡ ನಾಡಿನದೋ, ಗೋವಾ ಕೂಡಾ ಅಷ್ಟೇ ಮಟ್ಟಿಗೆ ಕನ್ನಡ ನಾಡಿನ ದಾಗಿದೆ:

ದಕ್ಕನಿನ ಪಶ್ಚಿಮ ಭಾಗ ಮತ್ತು ಹಳೇಮೈಸೂರು ಸಂಸ್ಥಾನದ ಉತ್ತರ ಭಾಗಗಳು ಕುಂತಳ ರಾಜ್ಯವಾಗಿದ್ದಿತು. ಗೋವಾ ಸಹ ಕುಂತಳ ರಾಜ್ಯಕ್ಕೆ ಸೇರಿದ್ದಿತು. ಇದು ಅಶೋಕ ಚಕ್ರವರ್ತಿಯ ಕಾಲದಲ್ಲಿಯೇ ಇದ್ದ ಸ್ಥಿತಿ. ಅಂದರೆ ಕ್ರಿ.ಪೂ. ೨೩೨ಕ್ಕೆ ಮುಂಚಿನಿಂದಲೂ ಕುಂತಳದೇಶ ಕನ್ನಡನಾಡು. ಆಗ ಮಹಾರಾಷ್ಟ್ರವೆಲ್ಲಿದ್ದಿತು? ಕ್ರಿ.ಶ. ದ ಆರಂಭದ ಶತಮಾನಗಳಲ್ಲಿ ಮಯೂರವರ್ಮನು ಕನ್ನಡದ ಮೊದಲನೇ ಸಾಮ್ರಾಜ್ಯವನ್ನು ಸ್ಥಾಪಿಸಿದ. ಆಗ ಗೋವಾ ಕದಂಬರ ಆಳ್ವಿಕೆಗೆ ಬಂದಿತು. ಸುಮಾರು ಕ್ರಿ.ಶ. ಹತ್ತನೆಯ ಶತಮಾನದಲ್ಲಿ ಕದಂಬ ರಾಜವಂಶದವರು ಪ್ರತ್ಯೇಕವಾಗಿ ಗೋವಾ ಆಳತೊಡಗಿದರು. ಅವರ ಆಳ್ವಿಕೆ ೧೪ನೆಯ ಶತಮಾನದವರೆವಿಗೆ ನಡೆಯಿತು. ಕೆಲಕಾಲ ಬಹುಮನೀ ಸುಲ್ತಾನರ ಅಧೀನದಲ್ಲಿದ್ದ ಗೋವಾ ಕನ್ನಡದ ಕಡೆಯ ಸಾಮ್ರಾಜ್ಯವಾದ ವಿಜಯನಗರಕ್ಕೆ ಸೇರಿ, ಅದರ ಪ್ರಮುಖ ರೇವುಪಟ್ಟಣವಾಗಿದ್ದಿತು. ಆ ಸಾಮ್ರಾಜ್ಯದ

ಪತನಾನಂತರ ಇಕ್ಕೇರಿಯ ರಾಜಮನೆತನದವರು ಗೋವಾದ ಅರಸರಾದರು. ಈಗಲೂ ಗೋವಾದ ದಕ್ಷಿಣ ಭಾಗದಲ್ಲಿ ವಾಸವಾಗಿರುವ ಇಕ್ಕೇರಿಯ ರಾಜಮನತನಕ್ಕೆ ಸೇರಿದ ಸ್ವಾದೀ ಅರಸರಿಂದ ಗೋವಾವನ್ನು ಪೋರ್ಚುಗೀಸರು ಕಿತ್ತುಕೊಂಡರು.

ಸ್ವಾದೀ ರಾಮನೆತನದವರ ಮಾತೃಭಾಷೆ ಕನ್ನಡ.

ಈ ರೀತಿ ಕ್ರಿಸ್ತಪೂರ್ವದಿಂದ ಪೋರ್ಚುಗೀಸರು ಆಕ್ರಮಣ ಮಾಡುವವರೆವಿಗೆ ಗೋವಾ ಕನ್ನಡನಾಡಿಗೆ ಸೇರಿತ್ತು.

ಅಷ್ಟೇ ಅಲ್ಲ. ಕ್ರಿಸ್ತಪೂರ್ವದಿಂದಲೂ ಕನ್ನಡನಾಡು ಪಾಶ್ಚಿಮಾತ್ಯ ದೇಶಗಳೊಡನೆ ವ್ಯಾಪಾರ ಗೋವಾದ ಮೂಲಕವಾಗಿಯೇ ನಡೆಸುತ್ತಿತ್ತು.

ಕನ್ನಡನಾಡಿನದೇ ಆದ ಗೋವಾವನ್ನು ಉಳಿಸಿಕೊಳ್ಳಲು ಕನ್ನಡಿಗರು ಸರ್ವಸಾಹಸ ವನ್ನೂ ಮಾಡಬೇಕು.

ಕೇಂದ್ರದ ನಾಯಕರು ಭಾಷಾವಾರು ರಾಜ್ಯ ಪುನರ್ವಿಂಗಡಣೆಯನ್ನು ಮಾಡುವುದಿಲ್ಲ ವೆಂದರು. ಆಗ ಆಂಧ್ರರು ಏಕಮುಖವಾಗಿ ತಮಗೆ ಆಂಧ್ರ ಪ್ರದೇಶವು ಬೇಕೆಂದರು. ಕೇಂದ್ರದವರು ಒಪ್ಪಬೇಕಾಯಿತು. ಮೊನ್ನೆ ತಮಿಳುನಾಡಿನಲ್ಲಿ ತಮಿಳರು ಹಿಂದೀ ಬೇಡವೆಂದರು. ಕೇಂದ್ರದವರು ಒಪ್ಪಬೇಕಾಯಿತು. ಮಹಾರಾಷ್ಟ್ರರು ರಾಜ್ಯದಾಹದಿಂದ ಆಕ್ರಮಣ ನೀತಿಯನ್ನು ಅನುಸರಿಸುತ್ತಿದ್ದಾರೆ. ಕೇಂದ್ರದವರು ಒಪ್ಪಬೇಕಾಗಿದೆ.

ಕನ್ನಡ ಜನರೂ ಸಹ ಕೇಂದ್ರದವರನ್ನು ಒಪ್ಪಿಸಬಾರದೇಕೆ?

ಕನ್ನಡ ಜನರೂ ಕೂಗು ದೆಹಲಿಯಲ್ಲಿರುವ ಕೇಂದ್ರದ ನಾಯಕರಿಗೆ ಮುಟ್ಟುವಂತಾಗ ಬೇಕು. ಕನ್ನಡದ ಹತ್ತೊಂಬತ್ತು ಜಿಲ್ಲೆಯ ಜನ "ಗೋವಾ ನಮಗೆ ಬೇಕು" ಎಂದು ಏಕಕಂಠ ದಿಂದ ಕೂಗಬೇಕು. ಎರಡೂವರೆ ಕೋಟಿ ಕನ್ನಡ ಜನತೆ ಬೃಹತ್ ಕಂಠದಿಂದ ಕಿವಿಮುಚ್ಚಿ ಕೊಂಡಿರುವ ಕೇಂದ್ರದ ನಾಯಕರ ಕಿವಿಗಳಿಗೆ ಕೇಳುವಂತೆ ತನ್ನ ನ್ಯಾಯವನ್ನು ಕೂಗಿ ಹೇಳಬೇಕು. ಏಳು ಸಾಮ್ರಾಜ್ಯಗಳನ್ನು ಕಟ್ಟಿದ ವೀರ ಕನ್ನಡಿಗರು ತಮ್ಮದಾದ ಗೋವಾವನ್ನು ಉಳಿಸಿಕೊಳ್ಳಲು ಎದ್ದುನಿಂತರೆ ಜಗತ್ತಿನ ಯಾವ ಶಕ್ತಿಯೂ ಅವರನ್ನು ತಡೆಯಲಾರದು.

**(ಮ. ರಾಮಮೂರ್ತಿ ಅವರ ಲೇಖನದ ಶೈಲಿಯೊಂದನ್ನು ಇಲ್ಲಿ ಸಂಪಾದಿಸಿ ಕೊಡಲಾಗಿದೆ. 'ಗೋವಾ' ಕನ್ನಡ ನಾಡಿಗೆ ಸೇರಬೇಕು ಎನ್ನುವ ಬಯಕೆಯನ್ನು, ಕನ್ನಡಿಗರ ಆಶಯಗಳೊಂದಿಗೆ ಮೇಳೈಸಿ ಬರೆದು, ಹಂಚಿದ ಲೇಖನವಿದು. ಬಹುಶಃ ೧೯೬೦ರ ಆಸುಪಾಸಿನಲ್ಲಿ ಪ್ರಕಟಿಸಿದ ಲೇಖನ.)**

— o —

# ೨೧. 'ಕನ್ನಡ ಚಳುವಳಿ'

ಕನ್ನಡ ಚಳುವಳಿಯೇಕೆ?

ಕನ್ನಡ ಜನತೆಯ ಸರ್ವತೋಮುಖ ಹಿತರಕ್ಷಣೆಗಾಗಿ. ಕನ್ನಡ ನಾಡಿನಲ್ಲಿಯೇ ಕನ್ನಡಿಗನಿಗೆ ಪ್ರಾಧಾನ್ಯತೆಯನ್ನು ಗಳಿಸುವುದಕ್ಕಾಗಿ.

ಕನ್ನಡ ನಾಡಿನಲ್ಲಿಯೇ ಕನ್ನಡಿಗನ ಹಿತರಕ್ಷಣೆ ಮಾಡಬೇಕಾದ ದುರ್ಗತಿಯೇ? ಇಲ್ಲಿಯೇ ಅವನಿಗೆ ಪ್ರಾಧಾನ್ಯತೆ ಗಳಿಸಬೇಕಾದ ಅಧೋಗತಿಯೇ?

ನಮ್ಮ ನಾಡು ಎರಡೂವರೆ ಕೋಟಿ ಕನ್ನಡಿಗರ ಪ್ರಜಾಬಾಹುಳ್ಯದಿಂದ ಕೂಡಿರುವ ಕನ್ನಡ ನಾಡು. ಈ ಜನತೆಯ ಅಭಿವೃದ್ಧಿಗಾಗಿಯೇ ಕಂಕಣಬದ್ಧರಾಗಿದ್ದೇವೆಂದು ವಚನವಿತ್ತು ನಮ್ಮಿಂದ ಚುನಾಯಿತರಾದ ಶಾಸಕರು ಬಹುತೇಕ ಕನ್ನಡಿಗರು ಹಾಗೆಯೇ ನಮ್ಮ ಮಂತ್ರಿಗಳು ಕನ್ನಡಿಗರು. ಅಧಿಕಾರಿಗಳು ಬಹುಸಂಖ್ಯೆಯಲ್ಲಿ ಕನ್ನಡಿಗರು.

ಇವಿಷ್ಟಿದ್ದೂ ನಮ್ಮ ನಾಡಿನಲ್ಲಿಯೇ ನಾವು ಹೆರವರಾಗಿದ್ದೇವೆ ನಮ್ಮ ಮನೆಯಲ್ಲಿಯೇ ನಾವು ಮಲಮಕ್ಕಳಂತೆ ನಿಕೃಷ್ಟ ಬಾಳುವೆ ಮಾಡುತ್ತಿದ್ದೇವೆ.

ಇಂಥಹ ಸ್ಥಿತಿ ಹೋಗಬೇಕಾದರೆ ತುಂಡುತುಂಡಾಗಿ ಹರಿದು ಹಂಚಿ ಹೋಗಿದ್ದ ಕನ್ನಡನಾಡು ಒಂದಾಗಬೇಕು ಎಂದು ನಾವು, ನಮ್ಮ ಹಿರಿಯರೂ ನಾಲ್ಕೈದು ದಶಕಗಳಿಂದ ಹೋರಾಡಿದೆವು.

ಅನೇಕ ಭಾಗಗಳನ್ನು ಕಳೆದುಕೊಂಡರೂ ಆ ಹೋರಾಟದ ಫಲದಿಂದ ಒಂದು ವಿಧವಾಗಿ ಕನ್ನಡನಾಡಿನ ಉದಯವಾಯಿತು.

ಆದರೂ ಕನ್ನಡಿಗರ ದುರ್ಗತಿ ಕಳೆಯಲಿಲ್ಲ.

ಏಕೆ? ನಮ್ಮ ಮಂತ್ರಿಗಳಿಗೆ ಅಧಿಕಾರ ಲಾಲಸೆಯಿದೆ ವಿನಾ ಕನ್ನಡಿಗರಲ್ಲಿ, ಕನ್ನಡದಲ್ಲಿ ಅಭಿಮಾನವಿಲ್ಲ. ಬಾಯಲ್ಲಿ ಕನ್ನಡದ ಹಿತರಕ್ಷಣೆಯನ್ನು ಮಾತನಾಡುತ್ತಾರಾದರೂ ಕೆಲಸ ಮಾಡಬೇಕಾಗಿ ಬಂದಾಗ ಭಾವೈಕ್ಯತೆಯ ನೆವ ಹೇಳಿ ನುಣಚಿ ಕೊಳ್ಳುತ್ತಾರೆ.

ಜನ ಕಣ್ಣಿದ್ದೂ ಕುರುಡರಾಗಿದ್ದಾರೆ. ಕಿವಿ ಇದ್ದೂ ಕಿವುಡರಾಗಿದ್ದಾರೆ.

ಕನ್ನಡ ಜನ ಕಣ್ಣು ಬಿಟ್ಟು ನೋಡಬೇಕು. ಕಿವಿ ತೆರೆದು ಕೇಳಬೇಕು.

ಕನ್ನಡ ನಾಡು ಒಂದಾದರೂ, ಮುಖ್ಯ ಮುಖ್ಯವಾದ ಭಾಗಗಳು ಕೈಬಿಟ್ಟು ಹೋದವು. ಕಾಸರಗೋಡು ಕೇರಳಕ್ಕೆ ಹೋಯಿತು. ಹೊಸೂರು, ಡೆಂಕಣೀಕೋಟೆ ಮುಂತಾದವು ತಮಿಳು ನಾಡಿಗೆ ಹೋದುವು. ಆಲೂರು, ಆದವಾನಿ, ರಾಯದುರ್ಗಗಳು ತೆಲುಗಿಗೆ ಹೋದುವು. ಸೋಲಾಪುರ, ಅಕ್ಕಲಕೋಟೆ, ಜತ್ತುಗಳು ಮಹಾರಾಷ್ಟ್ರಕ್ಕೆ ಹೋದವು.

ಬೆಂಗಳೂರು, ಮೈಸೂರುಗಳು, ಕೊಡಗು, ಮಂಗಳೂರುಗಳು, ಧಾರವಾಡ, ಬಿಜಾಪುರ ಗಳು ಯಾವ ನ್ಯಾಯದಿಂದ ಕನ್ನಡ ನಾಡಿನವೋ ಅದೇ ನ್ಯಾಯದಿಂದ ಅವೂ ನಮ್ಮವು.

ತಮ್ಮದಲ್ಲದ ಬೆಳಗಾವಿ, ಕಾರವಾರ ಜಿಲ್ಲೆಗಳನ್ನು ಆಕ್ರಮಿಸಲು ಮಹಾರಾಷ್ಟ್ರದ ಮಂತ್ರಿಗಳು ಸರ್ವಪ್ರಯತ್ನವನ್ನೂ ಮಾಡುತ್ತಿರುವಾಗ ತೆಲಗು, ತಮಿಳು, ಮಲೆಯಾಳ, ಮಹಾರಾಷ್ಟ್ರಗಳಿಂದ ನಮಗೆ ಬರಬೇಕಾದ ಪ್ರದೇಶಗಳನ್ನು ಪಡೆಯಲು ನಮ್ಮ ಮಂತ್ರಿಗಳು ಏನು ಪ್ರಯತ್ನ ಮಾಡುತ್ತಿದ್ದಾರೆ? ಮಹಾರಾಷ್ಟ್ರರು ಬೆಳಗಾವಿ, ಕಾರವಾರಗಳನ್ನು ಕಿತ್ತುಕೊಳ್ಳಲು ಪ್ರಯತ್ನ ಮಾಡುತ್ತಿದ್ದರೆ ತಮಗೆ ಬೆಂಬಲಕೊಡದ ಕೇಂದ್ರ ಸರ್ಕಾರ ಏನು ಮಾಡುತ್ತದೆಯೋ ಎಂದು ಕಾದು ಕುಳಿತಿದ್ದಾರೆ ನಮ್ಮವರು.

ಗೋವೆ ಎರಡು ಸಾವಿರ ವರ್ಷಗಳಿಗಿಂತ ಹೆಚ್ಚು ಕಾಲದಿಂದ ನಮ್ಮದು. ಕದಂಬರಿಂದ ವಿಜಯನಗರದವರೆವಿಗೆ ಏಳು ಮಹಾಸಾಮ್ರಾಜ್ಯಗಳ ಕಾಲದಲ್ಲಿಯೂ ಗೋವೆ ಕನ್ನಡಿಗರದು. ಅದರ ಸುತ್ತಲಭೂಮಿ ಕನ್ನಡದ್ದು ಸಂಸ್ಕೃತಿ ಕನ್ನಡದ್ದು. ಭಾಷೆ ಕನ್ನಡದ್ದು. ಜನ ಕನ್ನಡಿಗರು. ಆದರೆ ಅದನ್ನು ಮಹಾರಾಷ್ಟ್ರರು ಕಬಳಿಸುತ್ತಿರುವಾಗ ನಮ್ಮ ಮಂತ್ರಿಗಳು ಸುಮ್ಮನಿದ್ದಾರೆ. ಗೋವೆ ತಮಗೆ ಸೇರಬೇಕೆಂದು ಮಹಾರಾಷ್ಟ್ರ ಮಂತ್ರಿಗಳು ಹೇಳುತ್ತಿದ್ದರೆ ಗೋವೆ ಪ್ರತ್ಯೇಕವಾಗಿರಬೇಕೆಂಬ ಕೇಂದ್ರದೊಡನೆ ಧ್ವನಿಗೂಡಿಸುತ್ತಿದ್ದಾರೆ ನಮ್ಮವರು. ಗೋವಾ ನಮ್ಮದು. ನಮಗೆ ಬರಬೇಕು ಎಂದು ಬಾಯಿಂದ ಸಹ ಹೇಳುತ್ತಿಲ್ಲ.

ಇದಕ್ಕೆಲ್ಲ ನಮ್ಮ ಅಭಿಮಾನ್ಯ ಶೂನ್ಯತೆ ಎಂದಲ್ಲದೇ ಇನ್ನೇನು ಹೇಳಲು ಸಾಧ್ಯ?

ಕೇವಲ ಅಧಿಕಾರ ಮತ್ತು ಗುಂಪು ರಾಜಕೀಯದಲ್ಲಿಯೇ ಮಗ್ನರಾದ ನಮ್ಮ ಮಂತ್ರಿಗಳಿಗೆ ಕನ್ನಡದ ಹಿತ ಹೇಗೆ ಕಾಣುತ್ತಿದೆವೆಂಬುದಕ್ಕೆ ಒಂದು ಅಂಶವನ್ನು ಹೇಳಬಹುದು. ಮಂಗಳೂರು, ಮದರಾಸ್ ಪ್ರಾಂತ್ಯದಲ್ಲಿದ್ದಾಗ ಕನ್ನಡಿಗರಾದ ೬೨ ಮಂದಿ ಪೋಲೀಸ್ ಉದ್ಯೋಗಿಗಳು ಆ ಪ್ರಾಂತ್ಯದ ವಿವಿಧ ಭಾಗಗಳಿಗೆ ವರ್ಗಾಯಿಸ ಲ್ಪಟ್ಟಿದ್ದರು. ರಾಜ್ಯ ಪುನರ್ವಿಂಗಡಣೆಯ ಕಾಲದಲ್ಲಿ ಕಾರಣಾಂತರಗಳಿಂದ ಅವರು ಕನ್ನಡ ನಾಡಿಗೆ ಬರಬೇಕೆಂದು ಎಷ್ಟು ದಿನಗಳಿಂದ ಕೇಳಿಕೊಂಡರೂ ಅವರ ಗೋಳು, ಮಂತ್ರಿಗಳ ಕಿವಿಗೆ ಬಿದ್ದಿಲ್ಲ.

ಕನ್ನಡಿಗರ ಇಷ್ಟು ಸಣ್ಣ ಕೆಲಸವನ್ನು ಮಾಡಲು ನಮ್ಮ ಮಂತ್ರಿಗಳು ಅಸಮರ್ಥರಾದರೆ ಇವರು ಇನ್ನೇನು ತಾನೇ ಮಾಡಲು ಸಾಧ್ಯ?

ಕನ್ನಡ ನಾಡಿನ ಭಾಗಗಳನ್ನು ಪಡೆಯುವುದರಲ್ಲಿ ಇವರು ಹೇಗೆ ಉದಾಸೀನರಾಗಿದ್ದಾರೆಯೋ ಈ ನಾಡಿನ ಸಂಪತ್ ಶೇಖರಣೆ ಮತ್ತು ನಿರ್ಮಾಣದಲ್ಲಿಯೂ ಸಹ ನಿರ್ಲಕ್ಷ್ಯ ದಿಂದ ಇದ್ದಾರೆ. ರಾಜ್ಯಪುನರ್ವಿಂಗಡಣೆಯಾಗಿ ಎಂಟು ವರ್ಷಗಳಾಗುತ್ತ ಬಂದವು. ಈ ಕಾಲದಲ್ಲಿ ನಮ್ಮ ನಾಡಿಗೆ ಒಂದು ಮೈಲಿಯಷ್ಟಾದರೂ ರೈಲ್ವೆಮಾರ್ಗ ನಿರ್ಮಾಣ ವಾಗಿದೆಯೇ? ಚಾಮರಾಜನಗರ ಸತ್ಯಮಂಗಲ ರೈಲ್ವೆ ಯೋಜನೆ ಎಷ್ಟು ಹಳೆಯದೋ ಅಷ್ಟೇ ಮೂಲೆಗುಂಪಾಗಿ ಬಿದ್ದಿದೆ. ತ್ವರಿತವಾಗಿ ಹಾಸನ, ಮಂಗಳೂರು ರೈಲ್ವೆ ಮಾರ್ಗಗಳಲ್ಲಿ ಅರ್ಧಮೈಲಿಯಷ್ಟಾದರೂ ಬ್ರಾಡ್‌ಗೇಜ್ ಮಾಡಲು ಪ್ರಯತ್ನಿಸಲಾಗಿದೆಯೇ? ಇನ್ನು ಮುಂದಾದರೂ ಬ್ರಾಡ್‌ಗೇಜ್ ಆಗಲೆಂದು ಸೇತುವೆಯೇ ಮುಂತಾದವುಗಳನ್ನು ಕಟ್ಟುವಾಗ ಮುಂದಾಲೋಚನೆ ಮಾಡಲಾಗಿದೆಯೇ? ಕನ್ನಡನಾಡು ಬ್ರಾಡ್‌ಗೇಜ್ ಮಾರ್ಗಗಳನ್ನು ಹೊಂದದೆ ಶಾಶ್ವತವಾಗಿ ಮೀಟರ್‌ಗೇಜ್, ನ್ಯಾರೋಗೇಜ್ ಗಳನ್ನೇ ಹೊಂದಿರಬೇಕೇ?

ಹಲವಾರು ಶತಮಾನಗಳ ಕಾಲ ವಿದೇಶ ವ್ಯಾಪಾರಕ್ಕೆ ನೆರವಾದ ಅನೇಕಾನೇಕ ಬಂದರುಗಳು ಕನ್ನಡ ನಾಡಿನ ಪಶ್ಚಿಮ ಕರಾವಳಿಯಲ್ಲಿದ್ದರೂ ಒಂದು ಬಂದರಿನ ಅಭಿವೃದ್ಧಿ ಕಾರ್ಯವೂ ನಡೆದಿಲ್ಲ. ಕುರುಡು ಅಳಿಯ ಕಣ್ಣು ಬಿಟ್ಟ ಎಂಬಂತೆ ಮಂಗಳೂರು ಬಂದರಿನ ಅಭಿವೃದ್ಧಿ ಯೋಜನೆಯನ್ನು ತೋರಿಸಲಾಗುತ್ತಿದೆ. ಆ ಕೆಲಸವು ಆರಂಭವಾಗಿಲ್ಲ.

ನದೀ ನೀರಿನ ಪ್ರಕರಣಗಳಂತೂ ಹಗರಣಗಳೇ ಆಗಿವೆ. ಆಂಧ್ರವು ನಾಗಾರ್ಜುನ ಸಾಗರ ಅಣೆಕಟ್ಟಿನ ಕೆಲಸ ಪೂರೈಸಿದ ಮೇಲೆ ಕೃಷ್ಣಾ ನದಿಯಲ್ಲಿ ನೀರೇ ಉಳಿಯದಿರುವಾಗ ಕೃಷ್ಣಾ ಮೇಲ್ದಂಡೆ ಯೋಜನೆ ಇನ್ನೂ ಆಲೋಚನೆಯಲ್ಲಿದೆ. ಎಷ್ಟೋ ಕಾಲದ ಹಿಂದೆಯೇ ಆಗಬೇಕಾಗಿದ್ದ ಕಾವೇರಿ ಯೋಜನಾ ಸಂಬಂಧದಲ್ಲಿ ನಮಗೆ ನಿಗದಿಯಾಗಿರುವ ಕಾವೇರಿಯ ನೀರು ತಮಿಳುನಾಡಿಗೆ ಹೋಗುವುದಿಲ್ಲವೆಂದೂ, ಅದು ನಮಗೇ ಉಳಿಯುವುದೆಂದೂ, ಆ ಸಂಬಂಧವಾದ ಹದಿನೆಂಟು ಯೋಜನೆಗಳು ಕಾರ್ಯಗತವಾಗುತ್ತದೆಂದೂ ಆಸೆ ತೋರಿಸಲಾಗುತ್ತಿದೆ.

ಪಂಚವಾರ್ಷಿಕ ಮತ್ತು ಇತರ ಯೋಜನೆಗಳ ಪ್ರಕಾರ ನಮಗೆ ನ್ಯಾಯವಾಗಿ ಬರಬೇಕಾದುದರಿಂದ ನಾವು ವಂಚಿತರಾಗಿರುವುದು ಮತ್ತು ಪಡೆಯಬೇಕಾದುವುಗಳ ಪಟ್ಟಿ ಬರೆದರೆ ಅದು ಬಹು ದೀರ್ಘವಾಗುತ್ತದೆ.

ಇವೆಲ್ಲವೂ ಒಂದು ರಾಜ್ಯದ ಮಂತ್ರಿಗಳ ಕೆಲಸವೇ ಆದರೂ ಸಹ ಇವರೇಕೆ ಇವುಗಳನ್ನು ಮಾಡುವುದಿಲ್ಲ?

ಅವರುಗಳಿಗೆ ಈ ನಾಡಿನ ಮೇಲೆ ಅಭಿಮಾನವಿಲ್ಲದಿರುವಂತೆಯೇ ಅವರುಗಳ ಮೇಲೆ ಒತ್ತಾಯವಿಲ್ಲದಿರುವುದೂ ಕಾರಣವಾಗಿದೆ. ಹಾಗೆಯೇ ನಾಡಿನ ಬಗ್ಗೆ ಹೆಚ್ಚು ಆಸಕ್ತಿ ವಹಿಸಿ ಕೆಲಸ ಮಾಡುವುದರಿಂದ ಕೇಂದ್ರ ನಾಯಕರಿಗೆ ಮತ್ತು ಮಂತ್ರಿಗಳಿಗೆ ಅಲ್ಲಿ ಅತೃಪ್ತಿಯಾಗ ಬಹುದೋ ಎಂಬ ಹೆದರಿಕೆ.

ನಮ್ಮ ನಾಡಿನ ಶಾಲಾ-ಕಾಲೇಜುಗಳಲ್ಲಿ ನಮ್ಮ ಮಕ್ಕಳಿಗೆ, ನಮ್ಮ ತರುಣರಿಗೆ ಅವಕಾಶಗಳಿಲ್ಲ. ನಮ್ಮ ನಾಡಿನಲ್ಲಿ ಸ್ಥಾಪನೆಯಾಗಿರುವ ಮತ್ತು ಆಗುವ ಕೈಗಾರಿಕೆಗಳಲ್ಲಿ ಕಾರ್ಖಾನೆಗಳಲ್ಲಿ ನಮ್ಮ ಯುವಕರಿಗೆ ಕೆಲಸಗಳಿಲ್ಲ ನಮ್ಮ ನಾಡಿನ ವ್ಯಾಪಾರೋದ್ಯಮಗಳಲ್ಲಿ ನಮ್ಮ ವ್ಯಾಪಾರಿಗಳಿಗೆ ನಮ್ಮ ಉದ್ಯಮಗಳಿಗೆ ಪ್ರೋತ್ಸಾಹವಿಲ್ಲ.

ಇಷ್ಟೇ ಅಲ್ಲದೆ ಕನ್ನಡ ಸಾಹಿತ್ಯ, ಸಂಗೀತ, ಕಲೆ, ಸಂಸ್ಕೃತಿ ಮುಂತಾದವುಗಳೊಂದಕ್ಕೂ ಪ್ರೋತ್ಸಾಹವಿಲ್ಲ.

ನಮ್ಮ ನಾಡಿನಲ್ಲಿಯೇ ನಾವು ಹೊರಗಿನವರ ಧಾಳಿಗೆ ದಾರಿಯಾಗಿದ್ದೇವೆ. ಇದನ್ನು ತಡೆದು ನಾವು ಆತ್ಮರಕ್ಷಣೆ ಮಾಡಿಕೊಳ್ಳಬೇಕಾಗಿದೆ.

ನಾವು ಮೊದಲು ಭಾರತೀಯರು, ಅನಂತರ ಕನ್ನಡಿಗರು ಎಂಬುದನ್ನು ಒಪ್ಪಿಕೊಳ್ಳುತ್ತೇವೆ. ಆದರೆ ಶಕ್ತಿಸಂಪನ್ನವೂ ಸಂಪದ್ಭರಿತವೂ ಆದ ಭಾರತ ಕಟ್ಟುವುದೆಂದರೆ ಅದರ ಅಂಗವಾದ ಕನ್ನಡನಾಡು ಶಕ್ತಿಸಂಪನ್ನವೂ, ಸಂಪದ್ಭರಿತವೂ ಆಗಬೇಕಾದ ಅಗತ್ಯವಿದೆ.

ಅಧಿಕಾರ ಲಾಲಸೆಯಿಂದಲೂ, ಸ್ವಾರ್ಥದಿಂದಲೂ ದೆಹಲಿಯ ದಳ್ಳಾಳಿಗಳಾಗಿರುವ ಮಂತ್ರಿಗಳ ಕಣ್ಣುತೆರೆಸಿ ಈ ರಾಜ್ಯ ರಥವನ್ನು ಕನ್ನಡದ ಅಭಿಮಾನದತ್ತ ಕೊಂಡು ಹೋಗುವುದು ನಮ್ಮ ಕರ್ತವ್ಯವಾಗಿದೆ. ತನ್ನ ಅಕ್ಕತಂಗಿಯರಂತೆ ಕನ್ನಡ ತಾಯಿ ತಲೆಯೆತ್ತಿ ನಿಲ್ಲುವಂತೆ ಮಾಡುವುದು ನಮ್ಮ ಕರ್ತವ್ಯವಾಗಿದೆ. ಶಾಲಾ ಕಾಲೇಜುಗಳಲ್ಲಿಯೂ ಕೈಗಾರಿಕೆ, ಕಾರ್ಖಾನೆಗಳಲ್ಲಿಯೂ, ವ್ಯಾಪಾರ ಉದ್ಯಮಗಳಲ್ಲಿಯೂ ನಮ್ಮವರಿಗೆ ಶೇ. ೯೦ರಷ್ಟು ಸ್ಥಾನಗಳನ್ನು ಮೀಸಲಾಗಿಡಿಸುವುದು ನಮ್ಮ ಕರ್ತವ್ಯವಾಗಿದೆ.

ಈ ಕರ್ತವ್ಯ ಪಾಲನೆಗಾಗಿ ಕನ್ನಡ ಚಳುವಳಿಯು ಆರಂಭವಾಗಿದೆ. ಇದು ಸರ್ವಕಾಲ, ಕನ್ನಡಿಗರಾದ ನಮ್ಮ ಮತ್ತು ತಮ್ಮ ಪೀಳಿಗೆಯ ಹಿತದೃಷ್ಟಿಯಿಂದ ನಾವು ಮುಂದೆ ನುಗ್ಗಬೇಕು. ಸ್ವಾರ್ಥದಿಂದಲೋ ದಾಕ್ಷಿಣ್ಯದಿಂದಲೋ ಹಿಂದೆ ನಿಂತರೆ ಎಂದೆಂದಿಗೂ ಕರ್ತವ್ಯ ಭ್ರಷ್ಟತೆಯ ಅಪರಾಧ ನಮ್ಮ ಮೇಲೆ ಕಳಂಕವಾಗಿಯೇ ಉಳಿಯುವುದು.

ಕನ್ನಡ ಚಳುವಳಿಗೆ ನಿಮ್ಮ ಧನಧಾನ್ಯ ಬೇಕಿಲ್ಲ. ಬಲಿದಾನ ಬೇಕಿಲ್ಲ. ನಿಮ್ಮ ಅಭಿಮಾನವು ಮಾತ್ರ ಬೇಕು.

ಕನ್ನಡಿಗರಿಗೆ ಕನ್ನಡವೇ ದೇವರು. ಶರಣಾಗಲು ಬೇರೇ ದೇವರಿಲ್ಲ.

**(ಮ. ರಾಮಮೂರ್ತಿ ಅವರ 'ಕನ್ನಡ ಪಕ್ಷ'ದ ಮೊದಲ ಪ್ರಕಟಣೆ ಇದಾಗಿದೆ. ಕನ್ನಡಿಗರ ಅಭಿಮಾನ ಶೂನ್ಯತೆಯನ್ನು ಮನವರಿಕೆ ಮಾಡಿಕೊಟ್ಟು, 'ಕನ್ನಡ ಚಳುವಳಿ'ಯ ಅನಿವಾರ್ಯತೆಯನ್ನು ಹೇಳುವ ಶೈಲಿ ಇಲ್ಲಿದೆ. ಕನ್ನಡಿಗರೆಲ್ಲರೂ ಒಂದುಗೂಡಬೇಕೆಂಬ ಹಂಬಲ ಈ ಲೇಖನದಲ್ಲಿ ಉತ್ಕಟವಾಗಿದೆ.)**

— o —

# ೨೨. 'ಮೈಕೋ ಕನ್ನಡ ಕಾರ್ಮಿಕರ ದುರವಸ್ಥೆ'

ಬೆಂಗಳೂರು ನಗರದ ಬನ್ನೇರುಘಟ್ಟದ ರಸ್ತೆಯಲ್ಲಿರುವ ಮೈಕೋ (ಮೋಟಾರ್ ಇಂಡಸ್ಟ್ರೀಸ್ ಕೋ. ಲಿಮಿಟೆಡ್) ಕಾರ್ಖಾನೆಯ ಕನ್ನಡ ಕಾರ್ಮಿಕರ ಮೇಲೆ ಕನ್ನಡ ವಿರೋಧೀ ಕಾರ್ಮಿಕರಿಂದ ತೀವ್ರ ದೌರ್ಜನ್ಯ, ಅನ್ಯಾಯ, ಅತ್ಯಾಚಾರಗಳಾಗುತ್ತಿವೆ. ಕನ್ನಡ ಕಾರ್ಮಿಕರು ಮನೆಗಳಿಂದ ಕೆಲಸಕ್ಕೆ ಹೋಗುವಾಗಲೂ, ಕಾರ್ಖಾನೆಯಿಂದ ಮನೆಗಳಿಗೆ ಬರುವಾಗಲೂ ಅವರನ್ನು ಹೊಡೆಯುತ್ತಿದ್ದಾರೆ. ಕಾರ್ಖಾನೆಯೊಳಗೆ ಕೆಲಸ ಮಾಡುತ್ತಿರುವಾಗಲೂ ಅವರನ್ನು ಹೊಡೆದಿದ್ದಾರೆ. ಕನ್ನಡ ಕಾರ್ಮಿಕರಿಗೆ ಆಗಾಗ ಪೆಟ್ಟುಗಳು ಬೀಳುತ್ತಿರುವುದೇ ಅಲ್ಲದೇ ಪ್ರಾಣಾಪಾಯ ಭೀತಿಯೂ ಉಂಟಾಗಿದೆ. ಆದುದರಿಂದ ಮೈಕೋ ಆಡಳಿತ ವರ್ಗದವರೂ ಮತ್ತು ರಾಜ್ಯ ಸರ್ಕಾರದವರೂ ಮೈಕೋದಲ್ಲಿ ಕೆಲಸ ಮಾಡುತ್ತಿರುವ ಕನ್ನಡ ಕಾರ್ಮಿಕರಿಗೆ ಸುಭದ್ರವಾದ ರಕ್ಷಣೆಯನ್ನು ಒದಗಿಸಬೇಕೆಂದು ವಿನಯದಿಂದ ಪ್ರಾರ್ಥಿಸುತ್ತೇನೆ.

ಕನ್ನಡ ಕಾರ್ಮಿಕರ ಮೇಲೆ ನಡೆಯುತ್ತಿರುವ ದೌಜನ್ಯ, ಅನ್ಯಾಯ ಮತ್ತು ಅತ್ಯಾಚಾರ ಗಳನ್ನು ಮಾನ್ಯ ಶಾಸಕರ, ನಗರಪಿತೃಗಳ ಮತ್ತು ಸಾರ್ವಜನಿಕರ ಅವಗಾಹನೆಗೆ ತರಲು ಕೆಲವು ಅಪ್ರಿಯವಾದ ಅಂಶಗಳನ್ನು ಬರೆಯಬೇಕಾಗಿದೆ.

ಮೈಕೋ ಕಾರ್ಖಾನೆಯು ಆರಂಭವಾದ ಮೊದಲಿನಲ್ಲಿ ಅದು ಕೇವಲ ಕನ್ನಡೇತರ ಕಾರ್ಮಿಕರಿಂದಲೇ ತುಂಬಿತ್ತು. ಆದರೆ ಕೆಲಕಾಲಾನಂತರದಲ್ಲಿ ಇನ್ನೂ ಹೆಚ್ಚು ಕಾರ್ಮಿಕರು ಬೇಕಾದಾಗ ಆಡಳಿತವರ್ಗದವರು ಕನ್ನಡ ಕೆಲಸಗಾರರನ್ನು ಅಧಿಕ ಸಂಖ್ಯೆಯಲ್ಲಿ ತೆಗೆದುಕೊಳ್ಳುತ್ತಾ ಬಂದರು. ಇದರಿಂದ ಕಾರ್ಖಾನೆಯಲ್ಲಿ ಕನ್ನಡ ಕಾರ್ಮಿಕರು ಅಧಿಕ ಸಂಖ್ಯಾತರಾದರು. ಇದಕ್ಕೆ ಕನ್ನಡ ಜನದ ವಿನಯಶೀಲತೆಯೂ, ಸೌಜನ್ಯತೆಯೂ, ಕೆಲಸದಲ್ಲಿ ಆಸಕ್ತಿಯೂ ಕಾರಣವಾಗಿದ್ದುದಲ್ಲದೇ ಕನ್ನಡ ಚಳುವಳಿಯ ಪ್ರಭಾವವೂ ಕಾರಣವೆಂದು ಹೇಳಬಹುದು.

ಕಾರ್ಖಾನೆಯಲ್ಲಿನ ಕನ್ನಡೇತರ ಕಾರ್ಮಿಕರು ಈ ಬಗ್ಗೆ ತಮ್ಮ ಅಸಮಾಧಾನವನ್ನು ತೋರಿದರು. ಇದನ್ನು ಆಗಿದ್ದ ಮೈಕೋ ಕಾರ್ಮಿಕ ಸಂಘದ ಅಧಿಕಾರಿವರ್ಗದವ ರೊಡನೆಯೂ ಮತ್ತು ಆಡಳಿತ ವರ್ಗದವರೊಡನೆಯೂ ಎಷ್ಟೋ ಬಾರಿ ವ್ಯಕ್ತಪಡಿಸಿದರು.

ಅದರಿಂದ ಕಾರ್ಖಾನೆಯಲ್ಲಿ ಕನ್ನಡ ಜನಕ್ಕೆ ಸಿಗುತ್ತಿದ್ದ ಪ್ರಾಧಾನ್ಯತೆಯು ಕಡಿಮೆಯಾಗದೇ ಇರಲು ಕೈಗೊಂಡ ಕಾರ್ಯಕ್ರಮ ದೌರ್ಜನ್ಯ, ಅನ್ಯಾಯ, ಅತ್ಯಾಚಾರ ಗಳಲ್ಲಿ ಪರ್ಯವ ಸಾನವಾಯಿತು.

ಸುಮಾರು ಒಂದು ವರ್ಷದ ಹಿಂದೆ ಶ್ರೀ ಎಸ್. ಶೇಷಾದ್ರಿ ಎಂಬುವವರೂ ಅವರ ಸ್ನೇಹಿತರೂ ಮೈಕೋ ಕಾರ್ಮಿಕ ಸಂಘದ ಅಧಿಕಾರದಲ್ಲಿದ್ದರು. ಅವರುಗಳು ಆಡಳಿತದ ಪ್ರಭಾವಕ್ಕೆ ಒಳಗಾಗಿ ಕಾರ್ಮಿಕ ಹಿತಕ್ಕೆ ಧಕ್ಕೆ ತರುತ್ತಿದ್ದಾರೆಂದು ದುಷ್ಪ್ರಚಾರ ನಡೆಯಿತು. ಹನ್ನೊಂದು ತಿಂಗಳ ಹಿಂದೆ ಕಾರ್ಮಿಕ ಸಂಘದ ಚುನಾವಣೆಗಳು ನಡೆದುವು. ಅದಕ್ಕೆ ಶ್ರೀ ಎಸ್. ಶೇಷಾದ್ರಿಯವರೂ ವಿರೋಧ ಪಕ್ಷದವರಿಂದ ಶ್ರೀ ಎಂ. ವೆಂಕೋಬರಾಯ ರೆಂಬುವವರೂ ಸ್ಪರ್ಧಿಸಿದರು. ಶ್ರೀ ವೆಂಕೋಬರಾವ್ ೨೩ ಓಟುಗಳ ಹೆಚ್ಚಳದಿಂದ ಚುನಾಯಿತರಾದರು. ಉಳಿದ ಸ್ಥಾನಗಳಿಗೆಲ್ಲ ಬಹುತೇಕ ಹಿಂದಿನವರೇ ಆರಿಸಿ ಬಂದರು.

ಆದರೆ ಅಧ್ಯಕ್ಷರಾಗಿ ಚುನಾಯಿತರಾದ ಶ್ರೀ ವೆಂಕೋಬರಾವ್ ಕಾರ್ಮಿಕ ಸಂಘದ ಕೆಲಸ ಕಾರ್ಯಗಳು ಸುಲಲಿತವಾಗಿ ನಡೆಯಲು ಅವಕಾಶ ಕೊಡಲಿಲ್ಲ. ಕಾರ್ಮಿಕ ಸಂಘಕ್ಕೆ ಶ್ರೀ ಕೆ. ಕಣ್ಣನ್‌ರವರನ್ನು ಅಧ್ಯಕ್ಷರಾಗಿ ಕರತರಬೇಕೆಂದು ಹಟ ಮಾಡಿದರು. ಸಮಿತಿಯ ಸದಸ್ಯರಿಗೂ ಅಧ್ಯಕ್ಷರಿಗೂ ಭಿನ್ನಾಭಿಪ್ರಾಯಗಳು ಮತ್ತಷ್ಟು ಬೆಳೆದುವು. ಮೇಲ್ಕಂಡ ಸದಸ್ಯರು ಆಡಳಿತದ ಪ್ರಭಾವಕ್ಕೆ ಒಳಗಾಗಿದ್ದಾರೆಂದು ಪ್ರಬಲ ಪ್ರಚಾರ ನಡೆಯಿತು. ಇದರಿಂದ ಬೇಸರಗೊಂಡ ಸದಸ್ಯರು ತಮ್ಮ ಸದಸ್ಯತ್ವಗಳಿಗೆ ರಾಜೀನಾಮೆ ಯನ್ನು ಕೊಟ್ಟರು. ವಿರೋಧ ಪಕ್ಷದವರು ಆ ಸ್ಥಾನಗಳನ್ನು ಆಕ್ರಮಿಸಿದರು.

ಅಧ್ಯಕ್ಷರಾಗಿದ್ದ ಶ್ರೀ ವೆಂಕೋಬರಾಯರು ಅಧ್ಯಕ್ಷತೆಗೆ ರಾಜೀನಾಮೆ ಕೊಟ್ಟು, ಶ್ರೀ ಕೆ. ಕಣ್ಣರವರನ್ನು ಅಧ್ಯಕ್ಷ ಸ್ಥಾನಕ್ಕೆ ತಂದು, ತಾವು ಉಪಾಧ್ಯಕ್ಷರಾದರು.

ಅನಂತರ ಕೌನ್ಸಿಲರ್ಸ್ ಎಂಬ ನೂರ ಇಪ್ಪತ್ತು ಮಂದಿಯನ್ನು ನಾಮಕರಣ ಮಾಡ ಲಾಯಿತು. ಮೈಕೋ ಕಾರ್ಖಾನೆಯ ವಿವಿಧ ಶಾಖೆಗಳ ಕಾರ್ಮಿಕರಲ್ಲಿ ದುಷ್ಟರೂ, ಪುಂಡರೂ ಆದವರನ್ನು ಆರಿಸಿ ಕೌನ್ಸಿಲರುಗಳ ನೇಮಕ ಮಾಡಿದರು. ಈ ಕೌನ್ಸಿಲರು ಗಳಲ್ಲಿಯೂ ಅಲ್ಪಸ್ವಲ್ಪ ಕನ್ನಡಿಗರೆಂಬುವವರೂ ಇದ್ದಾರೆ.

ಇದಿಷ್ಟೂ ಆದನಂತರ ಕನ್ನಡ ವಿರೋಧಿಗಳು ಪಟ್ಟಭದ್ರರಾದರು, ಆಮೇಲೆ ಕನ್ನಡಿಗರ ಮೇಲೆ ಕ್ರಮಬದ್ಧವಾದ ಧಾಳಿ ಆರಂಭವಾಯಿತು.

ಕನ್ನಡ ಕಾರ್ಮಿಕರಲ್ಲಿ ಪ್ರಮುಖರಾದವರನ್ನು ಹೊಡೆಯುವುದು, ಕೆಲಸಗಳನ್ನು ಕೊಡುವಾಗ ಕನ್ನಡೇತರರಿಗೇ ಪ್ರಾಧಾನ್ಯತೆಯನ್ನು ಕೊಡಬೇಕೆನ್ನುವುದೂ ಆರಂಭ ವಾಯಿತು. ಇವುಗಳಲೆಲ್ಲ ಕೌನ್ಸಿಲರುಗಳದೇ ಪ್ರಮುಖ ಪಾತ್ರವಾಯಿತು.

ಹೀಗೆ ಮೈಕೋ ಕಾರ್ಖಾನೆಯಲ್ಲಿ "ಭಯೋತ್ಪಾದಕರ ಗುಂಪು" ಅಸ್ತಿತ್ವಕ್ಕೆ ಬಂದಿತು. ಪೆಟ್ಟು ತಿಂದ ಕನ್ನಡಿಗರ ಸಹಾಯಕ್ಕೆ ಅವರ ಸಹೋದ್ಯೋಗಿಗಳಾದ ಕನ್ನಡಿಗರು

ಭಯದಿಂದ ಹೋಗದಂತಾಯಿತು. ಪೋಲೀಸಿಗೆ ದೂರು ಕೊಟ್ಟರೆ ತಮ್ಮ ಮನೆಗಳ ಬಳಿಗೆ ಈ ಭಯೋತ್ಪಾದಕರ ಗುಂಪು ಬಂದು ಗಲಾಟೆ ಮಾಡುವುದೆಂದು ಪೆಟ್ಟು ತಿಂದವರು ದೂರು ಕೊಡುವುದಕ್ಕೂ ಹೆದರುವಂತಾಯಿತು. ಆಡಳಿತ ವರ್ಗದವರಿಗೆ ದೂರು ಕೊಡುವುದು ಅಸಾಧ್ಯವಾಯಿತು. ಪುನಃ ಕೆಲಸಕ್ಕೆ ಹೋದರೆ ಪೆಟ್ಟು ತಿನ್ನ ಬೇಕಾಗುವುದೆಂದು ಹೆದರಿ ಎಷ್ಟೋ ಮಂದಿ ಕನ್ನಡಿಗರು ಕನ್ನಡ ರಾಜಧಾನಿಯಲ್ಲಿಯೇ ಅನಾಥರಾಗಿ ಕೆಲಸಗಳನ್ನು ಬಿಟ್ಟರು. ಈ ಗೂಂಡಾಗಿರಿಯನ್ನು ಸಹಿಸದೇ ಕೆಲಸಕ್ಕೆ ಶರಣು ಹೊಡೆದ ಕನ್ನಡೇತರ ಬಂಧುಗಳೂ ಇದ್ದಾರೆ.

ಇವಿಷ್ಟೂ ತಿಳಿದಿದ್ದರೂ ಹೇಗೋ ಕೆಲಸ ನಡೆಸುವುದರಲ್ಲಿ ಮಾತ್ರವೇ ಆಸಕ್ತರಾದ ಆಡಳಿತ ವರ್ಗದವರು ಗೊತ್ತಿದ್ದೂ ಗೊತ್ತಿಲ್ಲದವರಂತೆ ಇದ್ದು ಬಿಟ್ಟರು.

ಈ ಸಮಯದಲ್ಲಿ ಎಂದರೆ ಈ ವರ್ಷದ ಫೆಬ್ರವರಿಯಲ್ಲಿ ನಾಲ್ಕೈದು ಮಂದಿ ಕನ್ನಡ ಕಾರ್ಮಿಕರು ಮೈಕೋ ಕಾರ್ಖಾನೆಯಲ್ಲಿ ಕನ್ನಡಿಗರ ಸ್ಥಿತಿ ದುರಂತವಾಗಿದೆ ಯೆಂದೂ, ಅಲ್ಲಿ ಒಂದು ಕನ್ನಡ ಸಂಘವನ್ನು ರಚಿಸಬೇಕೆಂದೂ ಕೇಳಿದರು. ಐ.ಟಿ.ಐ., ಹೆಚ್.ಎಂ.ಟಿ., ಹೆಚ್.ಎ.ಎಲ್.ಗಳಲ್ಲಿರುವಂತೆ ಮೈಕೋ ಫ್ಯಾಕ್ಟರಿಯಲ್ಲಿಯೂ ಕನ್ನಡ ಸಂಘದ ರಚನೆಗೆ ನಾನು ಒಪ್ಪಿಕೊಂಡೆ. ನನ್ನನ್ನೇ ಅಧ್ಯಕ್ಷನಾಗಬೇಕೆಂದರು. ಸಾಧಾರಣ ವಾಗಿ ಕನ್ನಡ ಸಂಘಗಳು ತಮ್ಮಲ್ಲಿಯೇ ಅಧ್ಯಕ್ಷರನ್ನು ಚುನಾಯಿಸಿಕೊಳ್ಳಬೇಕೆಂಬುದು ಕನ್ನಡ ಚಳುವಳಿಗಾರರಾದ ನಮ್ಮ ನೀತಿಯಾದುದರಿಂದ ನಾನು ಅಧ್ಯಕ್ಷನಾಗಲು ಮೊದಲು ಒಪ್ಪಲಿಲ್ಲ. ಅವರುಗಳು ಬಹಳ ಒತ್ತಾಯ ಮಾಡಲು ಒಪ್ಪಿಕೊಂಡೆ. ಇದೇ ವರ್ಷ ಮಾರ್ಚ್ ೬ನೇ ತಾರೀಖು ಕನ್ನಡ ಸಂಘದ ಆರಂಭೋತ್ಸವ ಏರ್ಪಾಟಾಯಿತು. ನಗರ ಭವನವನ್ನು ಗೊತ್ತು ಮಾಡಲಾಯಿತು. ಮಾನ್ಯ ನಗರಾಡಳಿತ ಮಂತ್ರಿಗಳಾದ ಶ್ರೀ ಕೆ. ಪುಟ್ಟಸ್ವಾಮಿಯವರನ್ನು ಆ ದಿನದ ಅಧ್ಯಕ್ಷತೆಗೂ ಸುಪ್ರಸಿದ್ಧ ಪತ್ರಿಕೋದ್ಯೋಗಿಗಳಾದ ಶ್ರೀ ತಿ.ತಾ. ಶರ್ಮರನ್ನು ಉದ್ಘಾಟನೆ ಮಾಡಲೂ ಆಹ್ವಾನಿಸಲಾಯಿತು. ಅವರುಗಳು ಒಪ್ಪಿದರು, ಈ ಬಗ್ಗೆ ಆಹ್ವಾನ ಪತ್ರಿಕೆಗಳನ್ನೂ ಹಸ್ತ ಪತ್ರಿಕೆಗಳನ್ನೂ ಹಂಚಲಾಯಿತು.

ಆದರೆ ಬೇರೆ ಕೆಲವರು ಕಾರ್ಮಿಕರು ಬಂದು ನನ್ನ ಬಳಿಗೆ ಬಂದ ಕಾರ್ಮಿಕರು ಆಡಳಿತ ಪಕ್ಷದವರೆಂದೂ, ಆ ಸಮಯದಲ್ಲಿ ಕನ್ನಡ ಸಂಘವನ್ನು ಸ್ಥಾಪಿಸುವುದರಿಂದ ಕಾರ್ಮಿಕ ಹಿತಕ್ಕೆ ಧಕ್ಕೆ ಬರುವುದೆಂದೂ ಹೇಳಿ ಸಂಘ ಸ್ಥಾಪನೆಗೆ ಅವಕಾಶ ಕೊಡಬಾರದೆಂದು ಪ್ರಾರ್ಥಿಸಿಕೊಂಡರು. ಶ್ರೀ ವೆಂಕೋಬರಾಯರನ್ನು ಕರೆಸಿ ನಾನು ಕೇಳಿದೆ. ಅವರೂ ಅವರ ಸಂಗಡಿಗರೂ ನನ್ನ ಮನೆಗೆ ಬಂದು ಹಾಗೆಯೇ ಹೇಳಿ, ಅದೇ ರೀತಿ ಪ್ರಾರ್ಥಿಸಿಕೊಂಡರು. ನಾನು ಆ ಸಂದರ್ಭದಲ್ಲಿ ಸಂಘದ ಸ್ಥಾಪನೆಯನ್ನು ಮುಂದೆ ಹಾಕಿದೆ. ಶ್ರೀ ಕೆ. ಪುಟ್ಟಸ್ವಾಮಿಯವರಿಗೂ, ಶ್ರೀ ತಿ.ತಾ. ಶರ್ಮರಿಗೂ ಆ ದಿನದ ಸಮಾರಂಭವನ್ನು ರದ್ದು ಮಾಡಿದೆ ಎಂದು ತಿಳಿಸಿದೆ.

ಇದಾದ ಮೇಲೆಯೂ ಕನ್ನಡ ಸಂಘದ ಸ್ಥಾಪನೆಯಲ್ಲಿ ತೊಡಗಿದ್ದವರಿಗೆ ಪೆಟ್ಟುಗಳು ಬಿದ್ದುವು. ಅವರ ಮನೆಗಳ ಹತ್ತಿರ ಹೋಗಿ ಬೆದರಿಸಲಾಯಿತು. ಅವರುಗಳು ಕೆಲಸಕ್ಕೆ ಹೋಗುವುದೇ ಕಷ್ಟವಾಯಿತು. ನಾನು ಶ್ರೀ ಕೆ. ಕರ್ಣ್ಣರವರಿಗೆ ಪೋರ್ನ್ ಮಾಡಿ ಅವರನ್ನು ಹೊಡೆಸಬಾರದೆಂದು ಹೇಳಿದರೂ ಪರಿಹಾರ ಸಿಕ್ಕಲಿಲ್ಲ.

ಆ ಮೇಲೆ ಸಹ ಕನ್ನಡ ವಿರೋಧಿ ಚಟುವಟಿಕೆಗಳು ಮುಂದುವರಿಯುತ್ತಲೇ ಬಂದುವು. ಮುಂದೆ ಬರುವ ಕನ್ನಡಿಗರನ್ನೂ, ದೌರ್ಜನ್ಯವನ್ನು ಸಹಿಸದ ಕನ್ನಡ ಅಭಿಮಾನಿಗಳಾದ ಕನ್ನಡೇತರನ್ನೂ "ನಾಯಿಯನ್ನು ಅಪಾದಿಸಿ ನೇಣು ಹಾಕು" ಎಂಬ ಇಂಗ್ಲೀಷ್ ಗಾದೆಯಂತೆ ಆಡಳಿತ ವರ್ಗದ ಪ್ರಭಾವಕ್ಕೆ ಒಳಗಾದವರೆಂದು ಆಪಾದಿಸಿ ಫ್ಯಾಕ್ಟರಿಯ ಒಳಗೂ ಹೊರಗೂ ಹೊಡೆಯಲಾರಂಭಿಸಿದರು.

ಇದೇ ವರ್ಷ ಮೇ ತಿಂಗಳು ೨೨ನೇ ತಾರೀಖು ಮಧ್ಯಾಹ್ನ ಕನ್ನಡ ಕಾರ್ಮಿಕರಾದ ಸರ್ವಶ್ರೀ ಎಸ್. ಜವರಯ್ಯ, ಹೆಚ್. ರಾಮಕೃಷ್ಣಪ್ಪ, ಪಿ. ಕೃಷ್ಣಮೂರ್ತಿ, ಪಿ.ಬಿ. ನರೇಂದ್ರ ಇವರುಗಳು ಫಸ್ಟ್‌ಷಿಫ್ಟ್ ಮುಗಿಸಿಕೊಂಡು ಬಂದು ಯೂನಿಯರ್ನ ಉಪಾಧ್ಯಕ್ಷರಾದ ಶ್ರೀ ವೆಂಕೋಬರಾಯರನ್ನೂ, ಇತರ ಯೂನಿಯರ್ನ ಅಧಿಕಾರಿಗಳನ್ನೂ "ಮೇ ತಿಂಗಳ ಮೊದಲನೆಯ ವಾರದಲ್ಲಿಯೇ ಬರುತ್ತಿದ್ದ ಬೋನಸ್ ಇನ್ನೂ ಬಂದಿಲ್ಲವಲ್ಲ. ಅದನ್ನು ಯಾವಾಗ ಕೊಡಿಸುತ್ತೀರಿ?" ಎಂದು ಕೇಳಿದರು.

ಶ್ರೀ ವೆಂಕೋಬರಾಯರೂ, ಅವರ ಸಹೋದ್ಯೋಗಿಗಳೂ ಮಾತನಾಡೋಣವೆಂದು ಅವರನ್ನು ಹೊರಗೆ ಕರತಂದರು.

ಹೊರಗೆ ನಿಂತು ಮಾತನಾಡುತ್ತಿರುವಾಗ ತಮಿಳು ಭಯೋತ್ಪಾದಕರ ಗುಂಪು ಕನ್ನಡ ಕಾರ್ಮಿಕರನ್ನು ಹೊಡೆಯುವುದಕ್ಕೆ ಬಂದಿತು.

ಈ ಏಳು ಮಂದಿ ಕನ್ನಡಿಗರೂ ಹೇಗೋ ಅಲ್ಲಿಂದ ತಪ್ಪಿಸಿಕೊಂಡು ಫ್ಯಾಕ್ಟರಿಯ ವಾಚ್ ಅಂಡ್ ವಾರ್ಡನಲ್ಲಿ ರಕ್ಷಣೆ ಪಡೆದರು.

ಈ ರೀತಿ ಫ್ಯಾಕ್ಟರಿಯ ಬಳಿ ಗಲಭೆಗಳಾಗಲು ರಿಜರ್ವ್ ಪೋಲೀಸರು ಬಂದರು. ಅವರು ಬಂದನಂತರ ಭಯೋತ್ಪಾದಕರ ಗುಂಪು ಚದುರಿತು.

ಇವಿಷ್ಟೂ ಆದರೂ ಕನ್ನಡ ಕಾರ್ಮಿಕರು ಸಂಜೆ ಆರೂವರೆಯವರೆವಿಗೆ ಅಲ್ಲಿಯೇ ಇದ್ದು, ಪೋಲೀಸಿನವರು "ಮನೆಗೆ ಹೋಗಿ" ಎಂದು ಧೈರ್ಯಕೊಟ್ಟ ನಂತರ ವಾಪು ಬಂದರು.

ಅವರುಗಳು ಕೆಂಗಲ್ ಹನುಮಂತಯ್ಯ ರಸ್ತೆಯ ಬಳಿ ಬರುತ್ತಿರುವಾಗ ಸುಮಾರು ಇನ್ನೂರು ಮಂದಿಯ ತಮಿಳು ಭಯೋತ್ಪಾದಕರ ಗುಂಪು ಬಂದು ಅಸಹಾಯಕರಾಗಿದ್ದ ಈ ಏಳು ಮಂದಿ ಕನ್ನಡ ಕಾರ್ಮಿಕರನ್ನು ಹೊಡೆದರು. ಏಳುಮಂದಿಗೂ ಅನೇಕ ಗಾಯಗಳಾಗಿವೆ. ಮೈ ಆದ್ಯಂತ ಮೂಗು ಪೆಟ್ಟುಗಳು ಬಿದ್ದಿವೆ. ಅವರು ಹಾಕಿಕೊಂಡಿದ್ದ ಬಟ್ಟೆ ಬರೆಗಳು ಚಕ್ಕಾಚೂರುಗಳಾಗಿವೆ.

ಇದಿಷ್ಟೂ ಆದನಂತರ ಪೆಟ್ಟುತಿಂದ್ದ ಕನ್ನಡ ಕಾರ್ಮಿಕರು ವಿಲ್ಸ್ ಗಾರ್ಡನ್ಸ್ ಪೋಲೀಸ್ ಸ್ಟೇಷನ್ನಿಗೆ ಹೋಗಿ ತಮ್ಮ ಮೇಲೆ ನಡೆದ ದೌರ್ಜನ್ಯವನ್ನು ವಿವರಿಸಿದರು. ಅಲ್ಲಿದ್ದ ಪೋಲೀಸ್ ಅಧಿಕಾರಿಗಳು ಮೊದಲು ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದು ಬರುವಂತೆ ಹೇಳಿದರು. ಅದೇ ರಾತ್ರಿ ೨೨ನೇ ತಾರೀಖು ಅವರುಗಳು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದರು.

ಅದೇ ದಿನ ರಾತ್ರಿ ಹನ್ನೊಂದು ಗಂಟೆಯ ಸಮಯದಲ್ಲಿ ಈ ಕನ್ನಡ ಕಾರ್ಮಿಕರು ನನ್ನ ಬಳಿ ಬಂದು ತಮಗಾದ ದುರಂತವನ್ನು ವಿವರಿಸಿದರು.

ಮಾರನೆಯ ದಿನ ಈ ಏಳು ಮಂದಿಯೂ ಹೋಗಿ ವಿಲ್ಸ್ ಗಾರ್ಡನ್ಸ್ ಪೋಲೀಸ್ ಸ್ಟೇಷನ್‌ನಲ್ಲಿ ದೂರುಕೊಟ್ಟು ಬಂದರು.

ಕಂಪ್ಲೈಂಟ್ ಕೊಟ್ಟು ಬರುತ್ತಿರುವಾಗ ಸುಮಾರು ಐವತ್ತು, ಅರವತ್ತು ಮಂದಿಯ ಭಯೋತ್ಪಾದಕರ ಗುಂಪು ಪುನಃ ಇವರನ್ನು ಹೊಡೆಯಲು ಬಂದಿತು. ಈ ಅಸಹಾಯಕ ರಾದ ಕನ್ನಡ ಜನ ಹೇಗೋ ತಪ್ಪಿಸಿಕೊಂಡು ಪಾರಾದರು. ಈ ವೇಳೆಗೆ ಮೈಕೋ ಕಾರ್ಮಿಕ ಸಂಘದ ಚುನಾವಣೆಗಳು ಸಮೀಪಿಸಿದುವು.

ಇದರಲ್ಲಿ ಸ್ಪರ್ಧಿಸಿ, ದೌರ್ಜನ್ಯಕಾರರನ್ನೂ ದುಷ್ಟರನ್ನೂ ಅಧಿಕಾರದಿಂದ ಇಳಿಸಿ ಮೊದಲಿನಂತೆ ನ್ಯಾಯದಿಂದ ನಡೆದುಕೊಳ್ಳುವವರನ್ನು ಅಧಿಕಾರಕ್ಕೆ ತರುವ ಪ್ರಯತ್ನ ನಡೆಯಿತು. ದೌರ್ಜನ್ಯವನ್ನು ವಿರೋಧಿಸುವವರ ಮತ್ತು ಕನ್ನಡಿಗರಲ್ಲಿ ಹಿತಾಕಾಂಕ್ಷಿಗಳಾದ ಕಾರ್ಮಿಕರ ಸಂಘಟನೆಯನ್ನು ಮಾಡಲಾಯಿತು. ಸುಮಾರು ೨೦೦ ಮಂದಿ ಕಾರ್ಮಿಕ ಮುಖ್ಯರು ಈ ತಿಂಗಳು ೧೮ನೇ ತಾರೀಖು ಶ್ರೀ ಶೇಷಾದ್ರಿಯವರ ಅಧ್ಯಕ್ಷತೆಯಲ್ಲಿ ಸಭೆ ಮಾಡಿದರು. ಆ ಸಭೆಯಲ್ಲಿ ನಾನೂ ಸಹ ಭಾಗವಹಿಸಿದ್ದೆ. ಮಾರನೆಯ ದಿನ ನಡೆಯುವ ಮೈಕೋ ಕಾರ್ಮಿಕರ ಸರ್ವಸದಸ್ಯರ ಸಭೆಯಲ್ಲಿ ಪ್ರಸ್ತುತ ಅಧಿಕಾರ ವರ್ಗದ ಅನೀತಿಯನ್ನು ಖಂಡಿಸಬೇಕೆಂದೂ, ಇದೇ ೨೮ನೇ ತಾರೀಖು ನಡೆಯಲಿದ್ದ ಚುನಾವಣೆಗಳಲ್ಲಿ ಸ್ಪರ್ಧಿಸಬೇಕೆಂದೂ ತೀರ್ಮಾನವಾಯಿತು. ಐದು ಅಧಿಕಾರಿ ಸ್ಥಾನಗಳಿಗೂ, ೧೨೦ ಕೌನ್ಸಿಲರ್ ಸ್ಥಾನಗಳಿಗೂ, ನಿಲ್ಲಲು ಕಾರ್ಮಿಕರು ಮುಂದೆ ಬಂದು ತಮ್ಮ ಹೆಸರನ್ನು ಕೊಟ್ಟರು.

ಮಾರನೆಯ ದಿನ ನಗರಭವನದಲ್ಲಿ ಶ್ರೀ ಕೆ. ಕರ್ಣ್ಣರ ಅಧ್ಯಕ್ಷತೆಯಲ್ಲಿ ಸರ್ವಸದಸ್ಯರ ಸಭೆ ನಡೆಯಿತು. ಅಲ್ಲಿ ಪ್ರಶ್ನೆಗಳನ್ನು ಕೇಳುವುದಕ್ಕೆ ಮೇಲೆದ್ದವರನ್ನು ತಲೆಯಮೇಲೆ ಹೊಡೆದು ಕೂರಿಸಲಾಯಿತು. ಹಾಗೂ ಶ್ರೀ ವಿಷ್ಣುತೀರ್ಥ, ಶ್ರೀ ನರಸಿಂಹಮೂರ್ತಿ ಎಂಬುವವರು ಪ್ರಶ್ನೆ ಕೇಳಿದರು. ಕೂಗಾಟ ಗದ್ದಲಗಳಿಂದ ಸಭೆ ಮುಗಿಯಿತು.

ಸಭೆ ಮುಗಿದು ಹೊರಗೆ ಬಂದನಂತರ ಸಭೆಯಲ್ಲಿ ಪ್ರಶ್ನೆ ಕೇಳಿದವರನ್ನೂ ಮತ್ತು ಅವರ ಸಂಗಡಿಗರನ್ನೂ ಭಯೋತ್ಪಾದಕರು ವಿರೋಧಿಸಿ ಹೊಡೆದರು. ಅಧಿಕಾರ ವರ್ಗ ಮತ್ತು ಕೌನ್ಸಿಲರ್ ಪದವಿಗಳಿಗೆ ವಿರೋಧಿಸಿ ನಿಲ್ಲುವವರನ್ನು ಹೊಡೆಯುವುದಾಗಿ ಬೆದರಿಸಲಾಯಿತು.

ಇದರಿಂದ ಎಷ್ಟೋ ಮಂದಿ ಚುನಾವಣೆಗಳಿಗೆ ನಿಲ್ಲುವುದಕ್ಕೆ ಹೆದರಿ ಹಿಂತೆಗೆದರು.

ಆದರೂ ಶ್ರೀ ಎಸ್. ಶೇಷಾದ್ರಿ, ಶ್ರೀ ಜಿ. ರಾಮರಾವ್ ಎಂಬುವರು ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದರು. ಸ್ಪರ್ಧಿಸಬೇಕೆಂದಿದ್ದ ಶ್ರೀ ಹೆಚ್. ರಾಮಕೃಷ್ಣಪ್ಪನವರನ್ನು ಅವರು ಕೆಲಸ ಮಾಡುತ್ತಿದ್ದ ಸ್ಥಳದಲ್ಲಿಯೇ ಹೊಡೆಯಲಾಯಿತು. ನಾಮಕರಣ ಪತ್ರವನ್ನು ಕೊಡಲು ಹೋದ ಶ್ರೀ ವಿಷ್ಣುತೀರ್ಥರ ಕೈಯ್ಯಲ್ಲಿದ್ದ ನಾಮಕರಣದ ಪತ್ರವನ್ನು ಕಿತ್ತು ಹರಿದುಹಾಕಿ ಭಯೋತ್ಪಾದಕರು ಹೊಡೆದು ಓಡಿಸಿದರು. ಉಪಾಧ್ಯಕ್ಷ ಮತ್ತು ಖಜಾಂಚಿ ಸ್ಥಾನಗಳಿಗೆ ನಿಲ್ಲಬೇಕೆಂದಿದ್ದವರು ನಾಮಕರಣ ಪತ್ರಗಳನ್ನು ಸಲ್ಲಿಸಲಾಗಲಿಲ್ಲ.

ಈ ರೀತಿ ದೌರ್ಜನ್ಯಗಳು ನಡೆಯುತ್ತಿರುವುದನ್ನು ನೋಡಿದ್ದ ಶ್ರೀ ಎಸ್. ಶೇಷಾದ್ರಿಯವರು ಶ್ರೀರಂಗಕ್ಕೆ ಹೊರಟುಹೋದರು. ನಾಮಕರಣ ಪತ್ರವನ್ನು ವಾಪು ಪಡೆಯಬೇಕೆಂದು ಶ್ರೀ ರಾಮರಾಯರನ್ನು ಹೊಡೆದರು. ಕಾರ್ಯದರ್ಶಿ ಸ್ಥಾನಕ್ಕೆ ನಿಂತಿದ್ದ ಶ್ರೀ ಸ್ಟೀವೆನ್ಸ್‌ರೂ, ಉಪಕಾರ್ಯದರ್ಶಿ ಸ್ಥಾನಕ್ಕೆ ನಿಂತಿದ್ದ ಶ್ರೀ ರಿಚ್ಚರ್ಡ್ ಜೋಸಫ್‌ರೂ ನಾಮಕರಣದ ಪತ್ರಗಳನ್ನು ವಾಪು ಪಡೆದರು. ಶ್ರೀ ಸ್ಟೀವನ್ಸ್‌ರು ನಾಮಕರಣ ಪತ್ರವನ್ನು ಪಡೆಯಲು ವಾಪು ಅವರ ಮೇಲೆ ಬಂದ ಒತ್ತಾಯವೂ, ಶ್ರೀ ರಿಚ್ಚರ್ಡ್ ಜೋಸಫ್‌ರು ನಾಮಕರಣ ಪತ್ರ ವಾಪು ಪಡೆಯಲು ಅವರು ಊರಿನಲ್ಲಿಲ್ಲ ದಾಗ ಅವರ ಮನೆಯ ಮೇಲೆ ಕಲ್ಲುಗಳು ಬಿದ್ದು ಕಿಟಕಿ ಗಾಜುಗಳು ಮುಂತಾದುವು ಒಡೆದುದರ ಕಾರಣವೆಂದು ಕೇಳಿದ್ದೇನೆ.

ಭಯೋತ್ಪಾದನೆ, ದೌರ್ಜನ್ಯಗಳ ವಿರುದ್ಧ ಸಂಘಟಿತವಾದವರಲ್ಲಿ ಆಂಗ್ಲೋ ಇಂಡಿಯರ್ನರೂ ಇದ್ದುದರಿಂದ ಅವರ ಬೆಂಬಲವನ್ನು ತಪ್ಪಿಸಲು ಮೇ ೨೨ನೇ ತಾರೀಖು ರಾತ್ರಿ ಅವರಲ್ಲಿ ಒಬ್ಬರಾದ ಮಿ॥ ಸ್ಟ್ಯಾಂರವರನ್ನು ಹೊಡೆಯಲಾಯಿತು.

ಅದೇ ದಿನ ರಾತ್ರಿ ಫ್ಯಾಕ್ಟರಿಯಿಂದ ಮನೆಗೆ ಬರಲು ಹೆದರಿದ್ದ ಕನ್ನಡದ ಕಾರ್ಮಿಕರನ್ನು ಕರೆತರಲು ಹೋಗಿದ್ದ ಒಂಬತ್ತು ಮಂದಿ ಕನ್ನಡಿಗರನ್ನು ಫ್ಯಾಕ್ಟರಿಯ ಒಳಗೆ ಎಳೆದುಕೊಂಡು ಹೋಗಿ ಕಟ್ಟಿ, ಹೊಡೆದು, ಗಾಯಗೊಳಿಸಿ, ಅವರು ತಮ್ಮನ್ನು ಹೊಡೆಯುವುದಕ್ಕೆ ಬಂದರೆಂದು ದೂರುಕೊಟ್ಟು ಪೋಲೀಸಿಗೆ ಹಿಡಿದು ಕೊಡಲಾಯಿತು.

ಜೂನ್ ೨ನೇ ತಾರೀಖು ಪ್ರಾತಃಕಾಲ ಭಯೋತ್ಪಾದಕರು ಫ್ಯಾಕ್ಟರಿಯ ಲೇಬರ್ ಆಫೀಸರಾದ ಶ್ರೀ ಪಿ.ವಿ. ಶೇಷಯ್ಯನವರನ್ನು ಕಚೇರಿಯಿಂದ ಹೊರಗೆಳೆದುಕೊಂಡು ಬಂದು ಹೊಡೆದರು. ಶ್ರೀಗಳಾದ ಹೆಚ್. ರಾಮಕೃಷ್ಣ ಮತ್ತು ನರಸಿಂಹಮೂರ್ತಿಗಳನ್ನು ಫ್ಯಾಕ್ಟರಿಯಲ್ಲಿ ಅಟ್ಟಿಸಿಕೊಂಡು ಹೋಗಿ ಹೊಡೆದರು. ಅದೇ ದಿನ ಶ್ರೀ ಜಿ. ರಾಮರಾಯ ರಿಗೂ ಪೆಟ್ಟುಗಳು ಬಿದ್ದವು.

ಈ ರೀತಿಯಾಗಿ ಕನ್ನಡ ಕಾರ್ಮಿಕರನ್ನೂ ಅವರ ಅಭಿಮಾನಿಗಳನ್ನೂ ಬೆದರಿಸಿ ಚುನಾವಣೆಗಳಿಗೆ ಏರ್ಪಾಟು ಮಾಡಲಾಯಿತು. ಇದೇ ೨೮ರಲ್ಲಿ ಚುನಾವಣೆಗಳು ನಡೆದುವು. ಶ್ರೀ ಜಿ. ರಾಮರಾಯರಾಗಲೀ, ಅವರ ಕಡೆಯವರಾಗಲೀ ಶ್ರೀ ಶೇಷಾದ್ರಿ

ಯವರ ಕಡೆಯವರಾಗಲೀ ಚುನಾವಣಾ ಸ್ಥಾನಕ್ಕೆ ಹೋಗಲು ಅವಕಾಶ ಸಿಕ್ಕಲಿಲ್ಲ. ಅವರುಗಳು ಪ್ರಚಾರ ಮಾಡುವುದಾಗಲೀ ಹಸ್ತಪತ್ರಿಕೆಯ ಒಂದು ಪ್ರತಿಯನ್ನು ಹಂಚುವುದಕ್ಕಾಗಲೀ ಸಾಧ್ಯವಾಗಲಿಲ್ಲ. ಈ ರೀತಿ ಚುನಾವಣೆಗಳು ನಡೆದು ವೆಂಕೋಬರಾಯರು ಅಧ್ಯಕ್ಷರಾಗಿ ಚುನಾಯಿತರಾದರೆಂದು ಕೇಳುತ್ತೇನೆ.

ಇವೆಲ್ಲದರ ಮೇಲೆ ತಮಿಳು ಕಾರ್ಮಿಕರಿಗೆ ಕಷ್ಟ ಒದಗಿದೆ ಎಂದು ತಮಿಳು ಪತ್ರಿಕೆಗಳು ಪ್ರಚಾರ ಮಾಡುತ್ತಿವೆ. ದ್ರಾವಿಡ ಮುನ್ನೇತ್ರ ಕಳಗಂನವರು ಸಭೆಗಳನ್ನು ಮಾಡಿ ತಮಿಳು ಕಾರ್ಮಿಕರಿಗೆ ಅನ್ಯಾಯವಾಗಿದೆಯೆಂದು ಬೊಬ್ಬೆಗಳನ್ನು ಹಾಕುತ್ತಿದ್ದಾರೆ.

ಈಗ ಮೈಕೋ ಫ್ಯಾಕ್ಟರಿಯನ್ನು ವಿಸ್ತಾರಗೊಳಿಸುವರೆಂದೂ ಇನ್ನೂ ನಾಲ್ಕು ಸಾವಿರ ಮಂದಿ ಕಾರ್ಮಿಕರನ್ನು ಕೆಲಸಗಳಿಗೆ ತೆಗೆದುಕೊಳ್ಳುವರೆಂದೂ ಇದೆ. ಈ ಸಂದರ್ಭದಲ್ಲಿ ಕನ್ನಡಿಗರಿಗೆ ಕೆಲಸಗಳು ಸಿಕ್ಕಿದಂತೆ ಮಾಡಲು ಮತ್ತು ಕನ್ನಡಿಗರಿಗೆ ಈಗಿರುವ ಪ್ರಾಧಾನ್ಯತೆಯನ್ನು ತಗ್ಗಿಸಲು ಈ ಕ್ರಮಬದ್ಧವಾದ ಸಂಘಟಿತ ಭಯೋತ್ಪಾದನೆ ನಡೆಯುತ್ತಿದೆ.

ನಮಗೆ ಯಾವ ಭಾಷೆ ಮೇಲೆ ದ್ವೇಷವಿಲ್ಲದಿದ್ದರೂ ಕನ್ನಡ ನಾಡಿನಲ್ಲಿ ಕನ್ನಡಿಗರ ಹಕ್ಕು ಬಾಧ್ಯತೆಗಳಿಗೆ ಧಕ್ಕೆ ಬರುವುದಕ್ಕೂ, ಕನ್ನಡ ಕಾರ್ಮಿಕರ ಮೇಲೆ ದೌರ್ಜನ್ಯ ನಡೆಯುವುದಕ್ಕೂ ಅವಕಾಶವಿರಬಾರದು. ಈಗ ಫ್ಯಾಕ್ಟರಿಗೆ ಹೋಗುವ ಕನ್ನಡ ಕಾರ್ಮಿಕರಿಗೆ ಹೊರಗಡೆಯೂ ಫ್ಯಾಕ್ಟರಿಯ ಒಳಗಡೆಯೂ ರಕ್ಷಣೆ ಸಿಗಬೇಕು. ಮುಂದೆ ಕನ್ನಡಿಗರಿಗೆ ಕೆಲಸ ಸಿಕ್ಕದಂತೆ ಪ್ರಯತ್ನ ನಡೆಯಬಾರದು. ಇದನ್ನು ನಮ್ಮ ಮಾನ್ಯಮಂತ್ರಿಗಳೂ, ಮಾನ್ಯಶಾಸಕರೂ, ಬೆಂಗಳೂರು ನಗರಪಿತೃಗಳೂ ಮತ್ತು ಮಹಾಜನಗಳೂ ಗಮನಿಸಿ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ವಿನಯದಿಂದ ಪ್ರಾರ್ಥಿಸುತ್ತೇನೆ.

(ಕನ್ನಡಿಗರ ಮೇಲೆ ಆಗುತ್ತಿದ್ದ ದೌರ್ಜನ್ಯಗಳನ್ನು ಕುರಿತು ಮ. ರಾಮಮೂರ್ತಿ ಅವರ ಬರೆಹದ (೧೯೬೪ರ) ದಾಖಲೆಯನ್ನು ಇಲ್ಲಿ ಸಂಪಾದಿಸಲಾಗಿದೆ. ತಮಿಳು ಬಹುಸಂಖ್ಯಾತರಿದ್ದ ಅನೇಕ ಕಾರ್ಖಾನೆಗಳಲ್ಲಿ ಕನ್ನಡಿಗರ ಮೇಲೆ ಹಲ್ಲೆಗಳು ಆಗುತ್ತಿದ್ದವು. ಇದಕ್ಕೆ ಉದಾಹರಣೆಯಾಗಿ 'ಮೈಕೋ' ಕಾರ್ಖಾನೆಯಲ್ಲಿ ಆದಂಥ ಕನ್ನಡಿಗರ ಮೇಲಿನ ಹಲ್ಲೆಗಳನ್ನು ಮ. ರಾಮಮೂರ್ತಿ ಅವರೇ ಖುದ್ದಾಗಿ ಸರ್ಕಾರಕ್ಕೆ ಹಾಗೂ ಕನ್ನಡಿಗರ ಗಮನಕ್ಕೆ ತಂದ ಶೈಲಿ ಈ ಬರೆಹದಲ್ಲಿ ದಾಖಲಾಗಿದೆ.)

— o —

# ೨೩. 'ರಜಾಕಾರ್ ಗುಪ್ತಚಾರ'

ಸಂಪತ್‌ಕುಮಾರನು ಆ ಹಾಸಿಗೆಯ ಮೇಲೆ ಮಲಗಿದ್ದಾಗ ತಾನೇಲ್ಲಿದ್ದೇನೆಂಬುದು ಅವನಿಗೆ ಗೊತ್ತೇ ಇರಲಿಲ್ಲ. ಗೊತ್ತು ಮಾಡಿಕೊಳ್ಳುವ ಸ್ಥಿತಿಯಲ್ಲಿಯೂ ಅವನಿರಲಿಲ್ಲ. ಅಸ್ಥಾವಸ್ಥೆಯಲ್ಲಿದ್ದ ಅವನಿಗೆ ತಾನು ಅರ್ಧ ಕತ್ತಲಾದ ಒಂದೆಡೆಯಲ್ಲಿ ಒಂದು ಹರಿದು ಛಿದ್ರವಾಗಿದ್ದ ಹಾಸಿಗೆಯ ಮೆಲೆ ಬಿದ್ದಿರುವೆನೆಂದು ಮಾತ್ರಾ ಗೊತ್ತಾಗಿತ್ತು. ಹೊರಗಡೇ ಯಾರು ಯಾರೋ ಉರ್ದೂ ಭಾಷೆಯಲ್ಲಿ ಮಾತನಾಡುತ್ತಿದ್ದರು. ಆಜ್ಞೆಗಳನ್ನು ಮಾಡುತ್ತಿದ್ದರು. ಸಂಪತ್‌ಗೆ ಕೇಳುತ್ತಿದ್ದ ಮಾತುಗಳಿಂದಲೇ ತಾನೆಲ್ಲಿದ್ದೇನೆಂಬುದನ್ನು ತಿಳಿದುಕೊಳ್ಳುವ ಸ್ಥಿತಿಯಲ್ಲಿರಲಿಲ್ಲ.

"ಈಗ ನಾನೆಲ್ಲಿದ್ದೇನೆ?" ಎಂದು ಕೇಳಿದನು.

ಅವನು ಮಲಗಿದ್ದ ರೂಮಿನ ಬಳಿ ಕಾವಲು ಕುಳಿತಿದ್ದ ಟರ್ಕೀ ಟೋಪಿಯ ಕರಿಯ ಹುಡುಗ ಏನೇನೋ ಗೊಣಗುಟ್ಟಿದನು.

ಸ್ವಲ್ಪ ಹೊತ್ತಿನಲ್ಲಿಯೇ ಆ ಸ್ಥಳಕ್ಕೆ ಎತ್ತರನಾದ ದೃಢ ಕಾಯನಾದ ಶ್ಯಾಮಲವರ್ಣದ ಒಬ್ಬನು ಬಂದನು. ಅವನು ಬಂದು ಸಂಪತ್ತುವಿನ ಪಕ್ಕದಲ್ಲಿ ನಿಂತುಕೊಂಡು- "ಹೇಗಿದ್ದೀಯೇ? ಈಗೇನು ಸ್ವಲ್ಪ ಹುಷಾರಾಗಿದ್ದೀಯೋ?" ಎಂದು ಕೇಳಿದನು.

ಸಂಪತ್ ತಲೆ ಎತ್ತಿ ನೋಡಿ "ನೀನಾರು? ನಾನೆಲ್ಲಿದ್ದೇನೆ? ನೀನು ಯಾವ ರೀತಿಯಾಗಿ ನನ್ನಲ್ಲಿ ಆಸಕ್ತನಾಗಿದ್ದೀಯೇ?" ಎಂದನು.

ಆಗಂತುಕನ ಮುಖದಿಂದ ಒಂದು ಸಣ್ಣ ನಗುವು ಹೊರಬಿತ್ತು. ನಗು ಮುಖದಿಂದಲೇ ಅವನು ಮಾತನಾಡಿದನು.

"ನೀನು ಬಿದರ್‌ನಲ್ಲಿದ್ದಿಯೇ?"

"ಹಾಗಾದರೆ ನಾನು ಹೈದರಾಬಾದಿನಲ್ಲಿ ಇದ್ದೇನೆ"

"ಹೌದು. ನೀನು ಹೈದರಾಬಾದಿನಲ್ಲಿಯೇ ಇದ್ದೀಯೇ."

"ನೀನೇನು ಮುಸಲ್ಮಾನನೋ? ಇಲ್ಲಿರುವವರೆಲ್ಲರೂ ಮುಸಲ್ಮಾನರಂತೆ ಕಂಡು ಬರುತ್ತಾರೆ."

"ಹೌದು."

"ನನ್ನನೇಕೆ ಇಲ್ಲಿಗೆ ಕರೆ ತಂದಿರಿ?"

"ಹೈದರಾಬಾದಿನಲ್ಲಿ ಕೆಲವು ಮಂದಿ ಹರಾಮರು ಈಗ ನಿಜಾಮರ ಮೇಲೆ ದಂಗೆ ಎದ್ದಿದ್ದಾರೆ. ನಿಜಾಮರ ದೌಲತ್ತು ಕಿತ್ತುಕೊಳ್ಳಬೇಕೆಂದು ಪ್ರಯತ್ನ ಮಾಡುತ್ತಾ ಇದ್ದಾರೆ. ನೀನು ಈ ಹರಾಂ ಜನರೊಡನೆ ಏನೋ ವ್ಯವಹಾರ ಮಾಡುತ್ತಿದ್ದೆ - ಎಂದು ನಮಗೆ ಗೊತ್ತಾಯಿತು. ಆದ್ದರಿಂದ ನಿನ್ನನ್ನು ಹಿಡಿದು ತಂದು ಇಲ್ಲಿ ಕೂಡಿದ್ದೇವೆ."

ಆ ಮಾತುಗಳನ್ನು ಕೇಳಿ ಸಂಪತ್ ಹೆದರಿದನು. ಆದರೂ ಚೇತರಿಸಿಕೊಂಡು ಹೇಳಿದನು "ಸಾಹೇಬರೇ, ನಾನೊಬ್ಬ ಗರೀಬ್. ನನಗೆ ಆ ಹರಾಂ ಜನರೊಡನೆ ವ್ಯವಹಾರವೇಕೆ? ನಿಜಾಂರ ದೌಲತ್ತಿಗೆ ವಿರೋಧವಾದ ಪಿತೂರಿ ಏಕೆ? ನನ್ನನ್ನು ಮಾಫ್ ಮಾಡಿಬಿಡಿರಿ. ನಾನು ಎಲ್ಲಿಯಾದರೂ ಹೋಗಿ ಬದುಕಿಕೊಳ್ಳುತ್ತೇನೆ."

ಆಗಂತುಕನು "ಸರಿ! ನನಗೆ ನಿನ್ನ ವಿಷಯದಲ್ಲಿ ಒಂದು ವಿಧವಾದ ವಿಶ್ವಾಸವಿದೆ. ಅದರಿಂದಲೇ ನಾನು ಇಲ್ಲಿ ಬಂದು ನಿನ್ನನ್ನು ನೋಡಿದುದು. ನೀನೀಗ ಸ್ವಲ್ಪ ಸುಧಾರಿಸಿಕೋ! ಹುಷಾರಾಗು! ನಾನು ನಿನಗೆ ಶಿಫಾರಸು ಮಾಡಿ ಖುಲಾಸೆ ಮಾಡಿಸುತ್ತೇನೆ" ಎಂದು ಹೇಳಿ ಬಾಗಿಲಿನ ಕಡೆಗೆ ಹೊರಟನು.

ಆಗಂತುಕನು ಹೊರಗಡೆ ಹೋಗುವುದನ್ನು ನೋಡಿ ಸಂಪತ್ "ಹಜರತ್" ಎಂದು ಕರೆದನು.

ಅವನು ಹಿಂತಿರುಗಿ ಬಂದು ಪಕ್ಕದಲ್ಲಿ ನಿಂತುಕೊಂಡು "ಏನು?" ಎಂದನು.

"ಹಜರತ್! ಹುಷಾರಾಗಿ ಬಿಡುತ್ತೇನೆ. ದಯವಿಟ್ಟು ಒಂದು ಬಾಟಲ್ ವಿಸ್ಕಿ ಕೊಡಿಸಬೇಕು."

"ಆಗಲಿ! ಡಾಕ್ಟರ್ ಒಪ್ಪಿದರೆ ಆಗಬಹುದು."

ಆಗಂತುಕನು "ಗುಲಾಂ" ಎಂದು ಕೂಗಿದನು. ಮೊದಲು ಕಾವಲು ಕುಳಿತಿದ್ದ ಕರೀ ಹುಡುಗನು ಬಂದು ನಿಂತು ಸಲಾಂ ಮಾಡಿದನು. "ಡಾಕ್ಟರನ್ನು ಕರಿ" ಎಂದು ಆಜ್ಞೆ ಮಾಡಲು ಹುಡುಗನು ಡಾಕ್ಟರನ್ನು ಕರೆಯಲು ಹೋದನು.

ಆಗಂತುಕನೂ ಸಂಪತ್‌ಕುಮಾರನೂ ಪರಸ್ಪರ ನೋಡಿಕೊಂಡರು. ವಿಶೇಷವಾದ ದೃಷ್ಟಿಯಿಂದ ನೋಡಿಕೊಂಡರು. ಸಂಪತ್‌ಗೆ ಅದರಿಂದ ಏನೋ ಹೊಳೆದಂತಾಗಿ ಹೇಳಿದನು. 'ಹಜರತ್‌ಗೆ! ಗುಲಾಮನನ್ನು ಮಾಫ್ ಮಾಡಬೇಕು. ನನ್ನಲ್ಲಿ ಯಾಕೆ ವಿಶ್ವಾಸವೆಂಬುದು ನನಗೆ ತಿಳಿಯಿತು. ನಾವಿಬ್ಬರೂ ಒಂದೇ ವಿಧವಾಗಿದ್ದೇವೆ!"

"ಹೌದು! ನಾವಿಬ್ಬರೂ ಒಂದೇ ವಿಧವಾಗಿದ್ದೇವೆ" ಎಂದು ಆ ಮುಸಲ್ಮಾನನು ಒಪ್ಪಿಕೊಂಡನು.

ಸಂಪತ್ ಕುಮಾರನು ಆಗಂತುಕನ ಕಡೆಗೆ ತದೇಕ ದೃಷ್ಟಿಯಿಂದ ನೋಡಿದನು. ಸಂಪತ್ ಸ್ವಲ್ಪ ಕಂಗೆಟ್ಟು ಹೋಗಿದ್ದಾನೆ. ಹತ್ತು ವರ್ಷಗಳಿಂದ ಸಮಯಕ್ಕೆ ಸರಿಯಾಗಿ

ಅನ್ನ ನೀರಿಲ್ಲದೇ ದೇಶಾಂತರದಲ್ಲಿ ಅಲೆಯುತ್ತಿದ್ದುದರಿಂದ ಬಡಕಲ ಎತ್ತಿನಂತಾಗಿದ್ದಾನೆ. ಆಗಂತುಕನು ದೃಢವಾಗಿ ಕಟ್ಟುಮಸ್ತಾಗಿ ತುಂಬಿಕೊಂಡಿದ್ದಾನೆ. ಆದರೇನು? ಇಬ್ಬರದೂ ಒಂದೇ ಮುಖ- ಮುಖಭಾವ, ಮೂಗು, ಕಣ್ಣು ಎಲ್ಲಾ ಒಂದೇ. ಎತ್ತರ, ದಪ್ಪ ಎಲ್ಲದರಲ್ಲಿಯೂ ಒಂದೇ ವಿಧ. ಏನು ಸಾಮ್ಯವೋ? ಅಂಥಾ ಸಾಮ್ಯವು ಅವಳಿಜವಳಿ ಮಕ್ಕಳಿಗೆ ಸಹ ಇರುವುದು ಅಪರೂಪ.

"ಹಜರತ್! ನಾವು ಪರಸ್ಪರ ಒಬ್ಬರಂತೆಯೇ ಮತ್ತೊಬ್ಬರು ಇರುತ್ತೇವೆಂಬುದರಲ್ಲಿ ಸಂದೇಹವಿಲ್ಲ. ಆದರೆ ನಾನು ಹೊತ್ತಿಗೆ ಗೊತ್ತಿಗೆ ಅನ್ನ ನೀರುಗಳಿಲ್ಲದೇ ಬಡಕಲಾಗಿದ್ದೇನೆ" - ಎಂದು ಸಂಪತ್ ಹೇಳಿದನು.

ಅಷ್ಟು ಹೊತ್ತಿಗೆ ಡಾಕ್ಟರು ಬಂದರು. ಆತ ದಪ್ಪನಾದ, ಕುಳ್ಳ ಮನುಷ್ಯ. ಗುಂಡು ಮುಖ. ಕೆಂಪಗಿದ್ದಾನೆ. ಸೂಟ್ ಹಾಕಿಕೊಂಡು ಟರ್ಕೀಟೋಪಿ ಇಟ್ಟುಕೊಂಡಿದ್ದಾನೆ.

"ಹಕೀಂಸಾಹೇಬರೇ! ಈತನನ್ನು ಸ್ವಲ್ಪ ನೋಡಿರಿ. ಇವನಿಗೆ ವಿಸ್ಕೀ ಬೇಕಂತೆ. ಕೊಡ ಬಹುದೇ ನೋಡಿರಿ. ಹಕೀಂಸಾಬ್! ನನಗೆ ಇವನಲ್ಲಿ ಏನೋ ಒಂದು ವಿಧವಾದ ವಿಶ್ವಾಸ. ಇವನು ಬಂದಿಯಾದರೂ ವಿಶ್ವಾಸವು ಹೆಚ್ಚಾಗಿಯೇ ಇದೆ." ಎಂದು ಹೇಳಿ ಆಗಂತುಕನು ಹೊರಟು ಹೋದನು.

ಹೋಗುತ್ತಿದ್ದ ಮನುಷ್ಯನ ಕಡೆಗೆ ನೋಡುತ್ತಿದ್ದು, ಆತನು ಹೊರಟು ಹೋದ ನಂತರ ಹಕೀಂನನ್ನು ಕುರಿತು "ಹಕೀಮರೇ! ಈಗ ಹೋದರಲ್ಲಾ - ಅವರ ಹೆಸರೇನು?" ಎಂದನು.

"ಅವರು ಹಜರತ್ ಉಸ್ಮಾನ್‌ಖಾನ್ ಸಾಹೇಬರು."

"ಅವರಿಗೇನು ಕೆಲಸ? ಅವರು ನನ್ನನ್ನು ವಿಚಾರಿಸಲು ಕಾರಣವೇನು? ನಾನು ಈಗ ಯಾರ ಬಂದಿ? ಇಲ್ಲಿ ಪೊಲೀಸಿನವರು ಕಂಡುಬರುವುದಿಲ್ಲವಲ್ಲ? ಈ ವಿಷಯ ಗಳನ್ನು ನಾನು ತಿಳಿದುಕೊಳ್ಳುವುದು ತಪ್ಪಲ್ಲದಿದ್ದರೆ ಮೆಹರ್ಬಾನ್ ಮಾಡಿ ತಿಳಿಸಬೇಕು."

"ಅವರು ಈ ಜಿಲ್ಲೆಯ ರಜಾಕಾರ್ ದಳಪತಿ. ಇಲ್ಲಿ ಪೊಲೀಸಿನವರಿಗೆ ಪ್ರವೇಶವಿಲ್ಲ. ಇದು ರಜಾಕಾರ್ ಸೈನ್ಯದ ಶಿಬಿರ. ನೀನು ರಜಾಕಾರ್ ಸೈನ್ಯದ ಬಂದಿ."

ಸಂಪತ್‌ಕುಮಾರನು ಹಕೀಂಸಾಬ್ ಹೇಳಿದ ಮಾತುಗಳನ್ನು ಅರ್ಥ ಮಾಡಿಕೊಳ್ಳು ತ್ತಿದ್ದರು. ಹಕೀಂಸಾಬ್ ಸಂಪತ್ ನಾಡಿಯನ್ನು ಹಿಡಿದು ನೋಡುತ್ತಿದ್ದನು.

ಹಕೀಮನು ಸಂಪತ್‌ನನ್ನು ಕುರಿತು "ನಿನ್ನೆಯ ದಿನ ರಾತ್ರಿ ನೀನು ಬಹಳ ಕುಡಿದಂತೆ ಕಂಡುಬರುತ್ತದೆ. ಅದರಿಂದ ದೇಹಸ್ಥಿತಿ ಸ್ವಲ್ಪ ಹೆಚ್ಚು ಕಡಿಮೆಯಾಗಿದೆ ಅಷ್ಟೇ! ಸಾಯಂಕಾಲದ ವೇಳೆಗೆ ನೀನು ಸರಿ ಹೋಗುತ್ತೀಯೆ!" ಎಂದು ಹೇಳಿದನು.

"ಹಕೀಮರೇ! ನಾನು ಕುಡಿದಿರುವುದು ನಿಜ. ಆದರೆ ಅದರಿಂದ ದೇಹಸ್ಥಿತಿ ಇಷ್ಟು ಹೆಚ್ಚು ಕಡಿಮೆಯಾಗುತ್ತದೆಯೇ? ಕುಡಿತಕ್ಕೂ ದೇಹಾರೋಗ್ಯಕ್ಕೂ ಇಷ್ಟೊಂದು ಸಂಬಂಧವಿದೆಯೇ?"

ಹಕೀಮನು ಉತ್ತರ ಕೊಡಲಿಲ್ಲ. ಆದರೆ ಹೌದೆನ್ನುವಂತೆ ತಲೆಯಲ್ಲಾಡಿಸಿದನು.

"ಈ ಚಳಿಗಾಲದಲ್ಲಿ ಕುಡಿಯದಿದ್ದರೆ ಹೇಗೆ ಹಕೀಮರೇ?"

"ಸರಿ! ನಮ್ಮ ಉಸ್ಮಾರ್ಸಾಹೇಬರು ಸಹ ಕುಡಿಯುತ್ತಾರೆ. ಅವರು ವೈನ್ ಕುಡಿಯುತ್ತಾರೆ. ನೀನು ಕುಡಿದಿರುವುದು ಬಹಳ ಕೆಟ್ಟ ಸಾರಾಯಿ."

"ಹಕೀಮರೇ! ಕುಡಿದು ಅನೇಕಬಾರಿ ನಾನು ಸಾಯುವಂತೆ ಆಗಿದ್ದೇನೆ. ಆದರೆ ಬಾಟಲ್ ಎದುರಿಗೆ ಬಂದಾಗ ನಾನು ಯಾವುದನ್ನೂ ಲಕ್ಷ್ಯ ಮಾಡುವುದಿಲ್ಲ."

"ಈಗ ಸ್ವಲ್ಪ ಹೊತ್ತಿಗೆ ತಿಂಡಿಯನ್ನು ತಂದುಕೊಡುತ್ತಾರೆ. ಅದನ್ನು ತೆಗೆದುಕೊ. ಉಸ್ಮಾರ್ಸಾಹೇಬರು ಶಿಫಾರಸು ಮಾಡಿದ್ದಾರೆ. ಆದರೂ ಈಗ ನಿನಗೆ ವಿಸ್ಕೀ ಕೊಡಲಾಗುವುದಿಲ್ಲ."

"ಸ್ವಲ್ಪ ಅದನ್ನು ತೆಗೆದುಕೊಂಡರೆ - ನಾನು ಸರಿ ಹೋಗುತ್ತೇನೆ."

"ನಾನು ಹಕೀಂ. ನನಗೆ ಏನು ಮಾಡಬೇಕೆಂಬುದು ಗೊತ್ತು. ನಾನು ಹೇಳಿದಂತೆ ಮಾಡಿದರೆ ನೀನು ಆರೋಗ್ಯವಾಗುತ್ತೀ."

"ನಾನು ಜೊತೆಯಲ್ಲಿ ತಂದಿದ್ದ ಸಾಮಾನುಗಳು ಏನಾದುವೋ ಗೊತ್ತಿಲ್ಲವಲ್ಲ!"

"ನೀನು ಆ ಹರಾಂರೊಡನೆ ವ್ಯವಹಾರ ಮಾಡಿದಾಗಲೇ ನಿನ್ನನ್ನು ರಜಾಕಾರರು ಲೂಟಿ ಮಾಡಿದರು. ನಿನ್ನ ಸಾಮಾನುಗಳೊಂದು ಸಿಕ್ಕುವುದಿಲ್ಲ."

ಹಕೀಮನು ಹೊರಟು ಹೋದನು. ಸಂಪತ್ ಒಬ್ಬನೇ ಮಲಗಿಕೊಂಡಿದ್ದನು. ಬಾಗಿಲನಲ್ಲಿ ಒಬ್ಬ ಕಾವಲುಗಾರ. ಹೊರಗೆ ಹೋಗುವಂತೆ ಇಲ್ಲ. ಎದುರಿಗೆ ಯಾವುದೋ ಒಂದು ಬೆಟ್ಟವಿದೆ. ಅದು ಪರ್ವತಶ್ರೇಣಿಯಂತೆ ಹಬ್ಬಿಕೊಂಡಿದೆ.

ತಾನಿದ್ದ ಪ್ರದೇಶದ ಪ್ರಕೃತಿ ಸೌಂದರ್ಯವೆಂತಹದು ಎಂಬುದು ಸಂಪತ್‌ಗೆ ಗೊತ್ತಾದುದು ಆ ದಿನ ರಾತ್ರಿ ಎಂಟು ಗಂಟೆಯಲ್ಲಿ ತಾನು ಆ ಮನೆಯ ಹೊರಗಡೆ ಉಸ್ಮಾರ್ಖಾನ್ ಮತ್ತು ಹಕೀಮರುಗಳೊಡನೆ ಕುಳಿತು ಊಟ ಮಾಡುತ್ತಿದ್ದಾಗ. ಬೆಳದಿಂಗಳಿನಲ್ಲಿ ಆ ಪರ್ವತಶ್ರೇಣಿಯಂತಿದ್ದ ಪ್ರದೇಶವು ರಮಣೀಯವಾಗಿ ಕಂಗೊಳಿಸುತ್ತಿತ್ತು. ಆ ಬೆಟ್ಟದ ಸಾಲಿನ ಒಂದು ಭಾಗದಲ್ಲಿ ವಿಶಾಲವಾದ ಮೈದಾನ. ಆ ಮೈದಾನದಲ್ಲಿ ನೂರಾರು ಗುಡಾರಗಳು. ಅವುಗಳ ನಡುವೆ ಸಣ್ಣದೊಂದು ಮನೆ. ಆ ಮನೆಯ ಮುಂಭಾಗದಲ್ಲಿ ಮೇಜು ಕುರ್ಚಿಗಳನ್ನು ಹಾಕಿಕೊಂಡು ಈ ಮೂವರೂ ಕುಳಿತು ಊಟ ಮಾಡುತ್ತಿದ್ದಾರೆ. ಮೇಜದ ಮೇಲೆ ಒಂದು ಸಣ್ಣ ಲಾಂದ್ರ.

"ನೀನೇಕೆ ಆ ಹರಾಂರೊಡನೆ ವ್ಯವಹರಿಸುವುದಕ್ಕೆ ಹೋದೆ" ಎಂದು ಉಸ್ಮಾರ್ ಸಂಪತ್‌ನನ್ನು ಕೇಳಿದನು.

"ಅದು ಹಾಗಲ್ಲ! ಸಾಹೇಬರೇ! ನನ್ನದು ಈ ಊರಲ್ಲ. ನಾನು ಮೈಸೂರು ದೇಶದವನು. ಬಹಳ ಕಷ್ಟವಾಗಿ ನಾನು ದೇಶಾಂತರ ಹೊರಟು ಹೋದೆ. ನಾನು ಊರು ಬಿಟ್ಟು ಹೋಗಿ ಹತ್ತು ವರ್ಷಗಳಾಯಿತು. ಊರು ಊರು ಅಲೆಯುತ್ತಾ

ಹೈದರಾಬಾದಿಗೆ ಬಂದೆ. ಮುಂದೆಲ್ಲಿಗೆ ಹೋಗುತ್ತಿದ್ದೆನೋ ನನಗೇ ಗೊತ್ತಿಲ್ಲ. ನೀನು ಹೇಳಿದ ಕಾಂಗ್ರೆಸ್‌ನ ಜನ ಬಂದು ನನ್ನೊಡನೆ ಮಾತನಾಡಿದರು. ನನಗೆ ಒಂದು ಕಾಗದ ಕೊಟ್ಟು ಅದನ್ನು ರಾಯಚೂರಿನಲ್ಲಿ ಒಬ್ಬರಿಗೆ ಕೊಡಬೇಕೆಂದು ಹೇಳಿದರು. ಅದಕ್ಕಾಗಿ ನನಗೆ ನೂರು ರೂಪಾಯಿಗಳನ್ನು ಕೊಟ್ಟರು. ಆ ಹಣದಲ್ಲಿಯೇ ನಿನ್ನೆ ರಾತ್ರಿ ನಾನು ಕುಡಿದಿದ್ದು. ಅಷ್ಟರಲ್ಲಿ ಕೆಲವು ಮಂದಿ ಹಸುರಂಗಿಯವರು ಬಂದು ನನ್ನನ್ನು ಹೊಡೆದು ಬಡೆದು ನನ್ನ ಬಳಿ ಇರುವುದನ್ನೆಲ್ಲಾ ಕಿತ್ತುಕೊಂಡರು. ಕಡೆಗೆ ನನ್ನನ್ನು ಇಲ್ಲಿಗೆ ಕರೆದುಕೊಂಡು ಬಂದರು."

"ಅಂದರೆ ನೀನು ಆ ಹರಾಂರೊಡನೆ ವ್ಯವಹರಿಸಿದೆ - ಎಂಬುದು ಸಾಬೀತಾಗುತ್ತದೆ."

"ಅವರು ಹರಾಂ ಎಂದೂ ನಿಜಾಮಿ ದೌಲತ್ತಿಗೆ ವಿರೋಧವಾಗಿ ಗಲಭೆಗಳನ್ನು ಮಾಡುತ್ತಿದ್ದರೆಂದೂ ನನಗೇನು ಗೊತ್ತು? ಖಾನ್ ಸಾಹೇಬರೇ!"

"ಹಾಗಾದರೆ ಹೈದರಾಬಾದಿನಲ್ಲಿ ನಡೆಯುತ್ತಿರುವ ಚಳುವಳಿಯು ನಿನಗೆ ಗೊತ್ತಿಲ್ಲವೇನು? ನೀನು ವರ್ತಮಾನ ಪತ್ರಿಕೆಗಳನ್ನು ಓದುವುದಿಲ್ಲವೇನು?"

"ಇಲ್ಲ! ದೇವರಾಣೆಗೂ ನನಗೆ ಗೊತ್ತಿಲ್ಲ. ಗೊತ್ತಿದ್ದರೆ ನಾನು ಅಂತಹ ಕೆಲಸಕ್ಕೆ ಹೋಗುತ್ತಿದ್ದನೇ?"

ಉಸ್ಮಾನ್ ಉತ್ತಮವಾದ ಕ್ವೀನ್ಸ್ ವೈನ್ ಬಾಟಲನ್ನು ಬಗ್ಗಿಸಿ ಸ್ವಲ್ಪ ಸಂಪತ್‌ನ ಗ್ಲಾಸಿಗೆ ಹಾಕಿ "ತೆಗೆದುಕೋ" ಎಂದನು.

ಸಂಪತ್ ಅದನ್ನು ಬಾಯಲ್ಲಿ ಹಾಕಿಕೊಂಡು ರುಚಿ ನೋಡಿ ಮುಖವನ್ನು ಸೊಟ್ಟಗೆ ಮಾಡಿ "ಇದು ನನಗೆ ಲಗತ್ತಾಗುವುದಿಲ್ಲ ಸಾಹೇಬರೇ" ಎಂದನು.

ಹಕೀಮನೂ ಉಸ್ಮಾನನೂ ಪರಸ್ಪರ ಮುಖಗಳನ್ನು ನೋಡಿಕೊಂಡರು.

ಸಂಪತ್‌ನು ಉಸ್ಮಾನನನ್ನು ನೋಡಿ "ಖಾನರೇ! ನಿಮ್ಮನ್ನು ಎಲ್ಲಿಯೋ ನೋಡಿರುವಂತಿದೆ" ಎಂದನು.

"ಹೌದು! ನಾನು ಬಹಳ ದಿನಗಳು ಮೈಸೂರಿನಲ್ಲಿದ್ದೆ. ಆದರೆ ನಾನು ಮೈಸೂರು ಬಿಟ್ಟು ಹತ್ತು ಹನ್ನೆರಡು ವರ್ಷಗಳಾದವು".

"ಏನು ಮಾಡುತ್ತಿದ್ದಿರಿ, ಖಾನರೇ!"

"ನಾನು ಒಂದು ಉರ್ದು ವಾರಪತ್ರಿಕೆಯ ಸಂಪಾದಕನಾಗಿದ್ದೆ, ಆಗ ನೀನು ನೋಡಿರಬಹುದು."

ಉಸ್ಮಾನನು ಬಡಿಸುತ್ತಿದ್ದ ಪರಿಚಾರಕನನ್ನು ಕರೆದು "ಒಳಗೆ ಹೋಗಿ ಒಂದು ವಿಸ್ಕಿ ಬಾಟಲ್ ತೆಗೆದುಕೊಂಡು ಬಾ" ಎಂದನು.

ಪರಿಚಾರಕನು ತಂದಿಟ್ಟನು. ಉಸ್ಮಾನನು "ತೆಗೆದುಕೋ! ಹಕೀಮರು ಏನೆನ್ನುತ್ತಾರೆಯೋ? ಏನೆಂದರೂ ನೀನು ನನ್ನ ದೋಸ್ತ್ ಆಗಿದ್ದೀ. ನೀನು ಕೇಳಿದರೆ ನಾನು ಕೊಡುವು ದಿಲ್ಲವೆಂದು ಹೇಳಲಾರೆ" ಎಂದು ಹೇಳಿ ಅವನ ಗ್ಲಾಸಿಗೆ ವಿಸ್ಕಿಯನ್ನು ಬಗ್ಗಿಸಿದನು.

ವಿಸ್ಕಿ ಬಾಟಲ್ ಬಂದನಂತರ ಅವರು ಹೆಚ್ಚಾಗಿ ತಿಂಡಿ ತಿನ್ನಲಿಲ್ಲ. ಹಕೀಮನು ತಿಂಡಿ ತಿಂದು "ರೋಗಿಗಳನ್ನು ನೋಡುವುದಕ್ಕೆ ಹೋಗುತ್ತೇನೆ" ಎಂದು ಹೇಳಿ ಹೊರಟು ಹೋದನು. ಉಸ್ಮಾನನು ಲಾಂದ್ರವನ್ನು ತೆಗೆದು ಆರಿಸಿದನು.

ಬಂದಿಯೂ ದಳಪತಿಯೂ ಆ ಕತ್ತಲಲ್ಲಿ ಕುಳಿತು ಮಾತನಾಡುತ್ತಿದ್ದರು.

('ರಜಾಕಾರ್ ಗುಪ್ತಾಚಾರ' ಎಂಬುದು ಮ. ರಾಮಮೂರ್ತಿ ಅವರ ಮೊದಲ ಸ್ವೈ ಪತ್ತೇದಾರಿ ಕಾದಂಬರಿ. ಈ ಕಾದಂಬರಿಯ ಕೆಲವು ಸಾಲುಗಳನ್ನು ಓದುಗರಿಗೆ ಅವರ ಭಾಷಾಶೈಲಿ ಮನವರಿಕೆಯಾಗಲೆಂದು ಇಲ್ಲಿ ಸಂಪಾದಿಸಿ ಕೊಡಲಾಗಿದೆ.)

— o —

# ಅನುಬಂಧಗಳು

೧. ಆಕರ ಹಾಗೂ ಪೂರಕ ಸಾಹಿತ್ಯ
೨. ಸಂದರ್ಶನಗಳು
೩. ದಾಖಲೆಗಳು
೪. ಶ್ರೀಮತಿ ಕ [illegible] ಸಂದರ್ಶನ

ಅನುಬಂಧ - ೧

# ಆಕರ ಹಾಗೂ ಪೂರಕ ಸಾಹಿತ್ಯ

೧. ಕೃಷ್ಣರಾಯ. ಅ.ನ., ಬರಹಗಾರನ ಬದುಕು, (ಮಡಗಾಂವ, ೧೯೭೨).

೨. ಕೃಷ್ಣರಾಯ. ಶಾ.ಮಂ., ರಸಚೇತನ, (ಮಡಗಾಂವ ಗೋವಾ, ೧೯೭೦).

೩. ಕೃಷ್ಣರಾಯ. ಶಾ.ಮಂ., ಚಿರಚೇತನ, (ಗೋವಾ, ೧೯೭೨).

೪. ಜಾಣಗೆರೆ ವೆಂಕಟರಾಮಯ್ಯ., (ಪ್ರಸಂ.), ಕನ್ನಡ ಸೇನಾನಿ, (ಬೆಂಗಳೂರು, ೧೯೯೪).

೫. ಶ್ರೀನಿವಾಸ ವೆ., (ಸಂ), ಕನ್ನಡ ಚಳವಳಿ ರತ್ನ, (ಬೆಂಗಳೂರು, ೧೯೯೬).

೬. ಚಂದ್ರಣ್ಣಗೌಡ ಕೆ.ವಿ., (ಪ್ರಸಂ.), ರಾಜಧಾನಿ, (ಬೆಂಗಳೂರು, ೧೯೯೩).

೭. ರಾಮಮೂರ್ತಿ ಮ., ಮೈಕೋ ಕನ್ನಡ ಕಾರ್ಮಿಕರ ದುರವಸ್ಥೆ, (ಬೆಂಗಳೂರು, ೧೯೬೪).

೮. ರಾಮಮೂರ್ತಿ ಮ., ಕರುನಾಡಿನಲ್ಲಿ ಕನ್ನಡಿಗರ ಸ್ಥಿತಿ ? (ಬೆಂಗಳೂರು).

೯. ಪ್ರಕಟಣಾ ಸಮಿತಿ, ಸಂಪೂರ್ಣ ಕರ್ನಾಟಕ, (ಬೆಂಗಳೂರು, ೧೯೬೬).

೧೦. ಮಹದೇವ ಬಣಕಾರ., ರಾಜ್ಯ ವಿಭಜನೆಯ ಅಪಸ್ವರ ನಿಲ್ಲಲಿ, (ಬೆಂಗಳೂರು, ೧೯೬೯).

೧೧. ಅಶೋಕ ದೊ.ಅ., ಕ್ರಾಂತಿ ಕರ್ನಾಟಕ, (ಬೆಂಗಳೂರು, ೧೯೭೦).

೧೨. ಚಂದ್ರಶೇಖರ ರಾ.ನಂ., ಕನ್ನಡ ಶಕ್ತಿ, (ಬೆಂಗಳೂರು, ೧೯೯೮).

೧೩. ಚಂದ್ರಶೇಖರ ರಾ.ನಂ., ಕನ್ನಡ ಹೋರಾಟಗಳು ಒಂದು ನೋಟ, (ಬೆಂಗಳೂರು, ೧೯೯೯).

೧೪. ರಾಮಣ್ಣ ಎಚ್., ಕೋಡಿಹೊಸಹಳ್ಳಿ, ರಹಮಾನ್ ಖಾನ್, (ಬೆಂಗಳೂರು, ೧೯೯೫).

೧೫. ಗೋಪಾಲಕೃಷ್ಣ ಅಡಿಗ ಎಂ., ಕನ್ನಡ ಅಭಿಮಾನ ಮತ್ತು ಇತರ ಲೇಖನಗಳು, (ಸಾಗರ, ೧೯೭೨).

೧೬. ಗೋವಿಂದರಾಜು ಸಿ.ಆರ್., ಕನ್ನಡ-ಕರ್ನಾಟಕತ್ವ, (ಹಂಪಿ, ೧೯೯೫).

೧೭. ಗೋವಿಂದರಾಜು ಸಿ.ಆರ್., ಕರ್ನಾಟಕದ ಏಕೀಕರಣ ಮತ್ತು ಕನ್ನಡ ಸಾಹಿತ್ಯ ಪರಿಷತ್ತು, (ಬೆಂಗಳೂರು, ೧೯೯೫).

೧೮. ಗೋವಿಂದರಾಜು ಸಿ.ಆರ್., ಕರ್ನಾಟಕದ ಏಕೀಕರಣ ಚಳವಳಿ ಮತ್ತು ಕನ್ನಡ ಸಾಹಿತ್ಯ, (ಬೆಂಗಳೂರು, ೧೯೯೮).

೧೯. ಪಾರ್ಥಾ ಚಟರ್ಜಿ., ದಿ ನೇಷನ್ಸ್ ಅಂಡ್ ಇಟ್ಸ್ ಫ್ರೆಗ್‌ಮೆಂಟ್ಸ್, (ಬಾಂಬೆ, ೧೯೯೪).

೨೦. ಬಿಪನ್ ಚಂದ್ರ., ಎಸ್ಸೇಸ್ ಆಫ್ ಕಾಂಟೆಂಪರರಿ ಇಂಡಿಯಾ, (ದೆಹಲಿ, ೧೯೯೩).

೨೧. ಜವರೇಗೌಡ ದೇ., ಕನ್ನಡಿಗರೇ ಎಚ್ಚರಗೊಳ್ಳಿ, (ಮೈಸೂರು, ೧೯೫೧).

೨೨. ಜವರೇಗೌಡ ದೇ., ಕನ್ನಡದ ರೂವಾರಿ, (ಬೆಂಗಳೂರು, ೧೯೮೫).

೨೩. ವಲ್ಲಭ ಮಹಾಲಿಂಗ ತಟ್ಟಿ., ಕನ್ನಡಿಗರ ಜನ್ಮಸಾರ್ಥಕತೆ, (ಧಾರವಾಡ, ೧೮೯೯).

೨೪. ನಾಯಕ ಹಾ.ಮಾ., (ಸಂ)., ಕರ್ನಾಟಕಕ್ಕೆ ಶುಭವಾಗಲಿ (ಮೈಸೂರು, ೧೯೭೬).

೨೫. ನಾಯಕ ಹಾ.ಮಾ., ಕನ್ನಡ ಮನಸ್ಸು, (ಹುಬ್ಬಳ್ಳಿ, ೧೯೮೧).

೨೬. ನಾರಾಯಣ ಪಿ.ವಿ., ಕನ್ನಡತನ ಮತ್ತು ಭಾರತೀಯತೆ, (ಬೆಂಗಳೂರು, ೧೯೯೦).

೨೭. ಪಾಟೀಲ ಪುಟ್ಟಪ್ಪ., ನನ್ನದು ಈ ಕನ್ನಡ ನಾಡು, (ಬೆಂಗಳೂರು, ೧೯೭೫).

೨೮. ಪಾಟೀಲ ಪುಟ್ಟಪ್ಪ., ಉಸಿರಾಗಲಿ ಕನ್ನಡ, (ಮೈಸೂರು, ೧೯೯೨).

೨೯. ಮಹದೇವ ಬಣಕಾರ., ಕರ್ನಾಟಕ-ಮಹಾರಾಷ್ಟ್ರ (ಮಹಾಜನ ವರದಿ ವಿಶ್ಲೇಷಣೆ), (ಬೆಂಗಳೂರು, ೧೯೭೯).

೩೦. ಮಹದೇವ ಬಣಕಾರ., ಕರ್ನಾಟಕ ಗಡಿ-ನುಡಿ, (ಬೆಂಗಳೂರು).

೩೧. ಮಹದೇವ ಬಣಕಾರ., ಆಂಗ್ಲರ ಆಡಳಿತದಲ್ಲಿ ಕನ್ನಡ, (ಬೆಂಗಳೂರು, ೧೯೮೬).

೩೨. ಬುರ್ಲಿ ಬಿಂದುಮಾಧವ (ಸಂ)., ಕರ್ನಾಟಕ ದರ್ಶನ, (ಧಾರವಾಡ, ೧೯೩೭).

೩೩. ಆಲೂರ ವೆಂಕಟರಾವ್., ಕರ್ನಾಟಕತ್ವದ ವಿಕಾಸ, (ಧಾರವಾಡ, ೧೯೫೭).

೩೪. ಶಿವಮೂರ್ತಿ ಶಾಸ್ತ್ರಿ ಬಿ., ಕರ್ನಾಟಕ ಸಂದರ್ಶನ ಭಾಗ ೧, (ಬೆಂಗಳೂರು, ೧೯೬೨).

೩೫. ಶಿವಮೂರ್ತಿ ಶಾಸ್ತ್ರಿ ಬಿ., ಕನ್ನಡ ಮತ್ತು ಸಂಸ್ಕೃತಿ, (ಬೆಂಗಳೂರು, ೧೯೭೪).

೩೬. ಸೀತಾರಾಮಯ್ಯ ಎಂ.ವಿ., ಕನ್ನಡದ ಕತೆ, (ಬೆಂಗಳೂರು, ೧೯೭೯).

೩೭. ಪೂರ್ಣಚಂದ್ರ ತೇಜಸ್ವಿ ಕೆ.ಪಿ., ಅಣ್ಣನ ನೆನಪುಗಳು, (ಮೈಸೂರು, ೧೯೯೬).

೩೮. ಬಸವರಾಜ ಕಲ್ಗುಡಿ (ಸಂ)., ಕನ್ನಡ ವಾರ್ಷಿಕ-೧೯೯೧, (ಹಂಪಿ, ೧೯೯೨).

೩೯. ವೈಕುಂಠರಾಜು ಬಿ.ವಿ., ಸಂಪಾದಕ ಡೈರಿ-೧೯೮೬, (ಬೆಂಗಳೂರು, ೧೯೯೩).

೪೦. ಶೇಷಗಿರಿರಾವ್ ಎಲ್.ಎಸ್. ಮತ್ತು ಇತರರು., (ಸಂ) ಕನ್ನಡ ಕನ್ನಡಿಗ ಕರ್ನಾಟಕ, (ಬೆಂಗಳೂರು, ೧೯೯೬).

೪೧. ಸಿದ್ಧಲಿಂಗಯ್ಯ., ಊರುಕೇರಿ (ಆತ್ಮಕಥನ), (ಬೆಂಗಳೂರು, ೧೯೯೬).

೪೨. ಚಿದಾನಂದಮೂರ್ತಿ ಎಂ., ಹುಬ್ಬಳ್ಳಿ ನೈರುತ್ಯ ವಲಯ ಕೇಂದ್ರವಾಗಿ, (ಬೆಂಗಳೂರು, ೧೯೯೯).

೪೩. ಅನಂತಮೂರ್ತಿ ಯು.ಆರ್., ಕನ್ನಡದ ಹಿತ (ಕ.ಶ. ಕೇಂದ್ರದ ಬೆಳಗಾವಿ ಮಹಾಅಧಿವೇಶನದ ಅಧ್ಯಕ್ಷ ಭಾಷಣ, ೭.೧೨.೧೯೯೧) - ಇತ್ಯಾದಿ.

— o —

ಅನುಬಂಧ - ೨

## ಸಂದರ್ಶನಗಳು

೧. ಕೋಣಂದೂರು ಲಿಂಗಪ್ಪ - ಶಿವಮೊಗ್ಗ.
೨. ಪ್ರೊ. ಚಂದ್ರಶೇಖರ ಪಾಟೀಲ - ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ.
೩. ಕೋಡಿ ಹೊಸಹಳ್ಳಿ ರಾಮಣ್ಣ - ಅಧ್ಯಕ್ಷರು, ಕನ್ನಡ ಸಂಘರ್ಷ ಸಮಿತಿ.
೪. ಡಾ. ದೊಡ್ಡಮೇಟಿ ಅಶೋಕ ಅಂದಾನಪ್ಪ - ಅಂದಾನಪ್ಪ ಅವರ ಮಗ (ಜಕ್ಕಲಿ).
೫. ವೆ. ಶ್ರೀನಿವಾಸ - ಅಧ್ಯಕ್ಷರು, ವೀರಸೇನಾನಿ ಮ. ರಾಮಮೂರ್ತಿ ಕನ್ನಡ ಬಳಗ, ಬೆಂಗಳೂರು.
೬. ಬೆ.ನಿ. ಈಶ್ವರಪ್ಪ - ಅಧ್ಯಕ್ಷರು, ಕರ್ನಾಟಕ ಮಿತ್ರ ಮಂಡಲಿ, ಬೆಂಗಳೂರು.
೭. ಡಾ. ಎಂ. ಚಿದಾನಂದ ಮೂರ್ತಿ - ಅಧ್ಯಕ್ಷರು, ಕನ್ನಡ ಶಕ್ತಿ ಕೇಂದ್ರ.
೮. ಡಾ. ಸೂರ್ಯನಾಥ ಕಾಮತ್ - ಇತಿಹಾಸಕಾರರು.
೯. ಡಾ. ಎಂ.ಎಂ. ಕಲಬುರ್ಗಿ - ವಿಶ್ರಾಂತ ಕುಲಪತಿಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ.
೧೦. ಶ್ರೀಮತಿ ಕಮಲಮ್ಮ, ಮ. ರಾಮಮೂರ್ತಿ ಅವರ ಧರ್ಮಪತ್ನಿ ಅವರೊಂದಿಗೆ ವಿಶೇಷ ಸಂದರ್ಶನ.
೧೧. ಸಾವಿತ್ರಿ ವಿಶ್ವನಾಥರಾವ್, ಮ. ರಾಮಮೂರ್ತಿ ಅವರ ಸಹೋದರಿ.
೧೨. ಶ್ರೀ ಚಂದ್ರಮೌಳಿ, ಮ. ರಾಮಮೂರ್ತಿ ಅವರ ಸಹೋದರ - ಮೊದಲಾದವರು.

— o —

## ಅನುಬಂಧ - ೩

# ದಾಖಲೆಗಳು

೧. ೧೯೫೬-೨೦೧೨ರವರೆಗಿನ ಪ್ರಜಾವಾಣಿ, ಕನ್ನಡ ಪ್ರಭ, ಸಂಯುಕ್ತ ಕರ್ನಾಟಕ ಮೊದಲಾದ ಪತ್ರಿಕೆಗಳು.

೨. ೧೯೫೬-೨೦೧೨ರವರೆಗಿನ ಕೆಲವು ನಿಯತಕಾಲಿಕೆಗಳು.

೩. ೧೯೫೬-೨೦೦೦ರವರೆಗಿನ ಕನ್ನಡ ನುಡಿ, ಪರಿಷತ್ಪತ್ರಿಕೆ, ಜಯಕರ್ನಾಟಕ, ಶರಣ ಸಾಹಿತ್ಯ ಸಂಪುಟಗಳು.

೪. ಕನ್ನಡ ಚಳವಳಿಗಾಗಿಯೇ ಹುಟ್ಟಿಕೊಂಡ ಕೆಲವು ಪತ್ರಿಕೆಗಳು - ಕನ್ನಡ ಯುವಜನ ಪತ್ರಿಕೆ, ಕನ್ನಡ ಜಾಗೃತ ಪತ್ರ, ಧ್ರುವ ಇತ್ಯಾದಿ.

೫. ಕರಪತ್ರಗಳು, ಚಳವಳಿಗಾಗಿ ತಯಾರಿಸಲಾದ ಸಣ್ಣಪುಸ್ತಿಕೆಗಳು, ಆಹ್ವಾನ ಪತ್ರಿಕೆಗಳು, ಚುನಾವಣಾ ಕರಪತ್ರಗಳು - ಇತ್ಯಾದಿ.

— o —

ಅನುಬಂಧ - ೪

## ಶ್ರೀಮತಿ ಕಮಲಮ್ಮನವರೊಂದಿಗೆ ಸಂದರ್ಶನ

(ದಿನಾಂಕ ೨.೮.೨೦೧೧ ರಂದು ಮ. ರಾಮಮೂರ್ತಿ ಅವರ ಧರ್ಮಪತ್ನಿ ಅವರೊಂದಿಗೆ ನಡೆಸಿದ ಸಂದರ್ಶನ)

**೧. ರಾಮಮೂರ್ತಿಯವರ ಜೊತೆ ನಿಮ್ಮ ಮದುವೆಯಾದದ್ದು ಎಷ್ಟರಲ್ಲಿ?**

ಇಸವಿ ಸರಿಯಾಗಿ ನೆನಪಿಲ್ಲ. ನಮ್ಮದು ಮೈಸೂರು. ರಾಮಮೂರ್ತಿಯವರು ನಮ್ಮ ಹತ್ತಿರದ ಸಂಬಂಧವೇ. ನಮ್ಮ ತಂದೆ ವಿಶ್ವನಾಥಯ್ಯನವರು ಮೈಸೂರು ನಗರಪಾಲಿಕೆ ಕಛೇರಿಯಲ್ಲಿ ನೌಕರರು. ನಂಜಮ್ಮನವರು ನಮ್ಮ ತಾಯಿ. ಮದುವೆ ಯಾದಾಗ ಅವರಿಗೆ ಇಪ್ಪತ್ನಾಲ್ಕು ವರ್ಷ. ನನಗಿನ್ನೂ ಹದಿನೈದು. ರಾಮಮೂರ್ತಿಯವರ ತಂದೆ ತಾಯಿಯವರೇ ಬಂದು ನನ್ನನ್ನು ನೋಡಿ ಒಪ್ಪಿ ಮಗನಿಗೆ ಮದುವೆ ಮಾಡಿ ಕೊಂಡರು.

**೨. ನಿಮ್ಮ ಮಕ್ಕಳ ಹೆಸರು?**

ದಿನಕರ ಮತ್ತು ಮಂಜುನಾಥ.

**೩. ಕನ್ನಡ ಚಳವಳಿಗಳಿಂದ ರಾಮಮೂರ್ತಿಯವರ ವೈಯಕ್ತಿಕ ಬದುಕಿನಲ್ಲಿ ಏನಾದರೂ ಏರುಪೇರುಗಳಾಗುತ್ತಿದ್ದವೇ?**

ಚಳವಳಿ ತೀವ್ರವಾಗಿದ್ದ ಕಾಲದಲ್ಲಿ ಪೊಲೀಸರು ಅವರನ್ನು ಹುಡುಕಿಕೊಂಡು, ಬಂಧನದ ಆಜ್ಞೆ ಹಿಡಿದುಕೊಂಡು ಆಗಾಗ ಮನೆಯ ಮೇಲೆ ಧಾಳಿ ಮಾಡುವುದು ಸಾಮಾನ್ಯವಾಗಿತ್ತು.

**೪. ಚಳುವಳಿಗಳ ಸಲುವಾಗಿ ತಮ್ಮ ಮೇಲೆ ದಾಖಲಾದ ಪೊಲೀಸ್ ಮೊಕದ್ದಮೆಗಳಿಂದ ರಾಮಮೂರ್ತಿಯವರು ಎಂದಾದರೂ ಬೇಸರಿಸಿಕೊಂಡಿದ್ದು ಉಂಟೆ?**

ಇಲ್ಲ. ಒಂದು ದಿನಕ್ಕೂ ಇಲ್ಲ.

**೫. ವಿಶೇಷವಾಗಿ ಪೊಲೀಸ್ ವಿಚಾರಣೆಗಳು ಅವರ ಮೇಲೆ ನಡೆದ ಬಗೆಗೆ ಹೇಳಿ.**

ವಿಚಾರಣೆ, ಮೊಕದ್ದಮೆ ಎಲ್ಲ ಅವರಿಗೆ ತೀರಾ ಮಾಮೂಲಿಯಾಗಿದ್ದವು. ಯಾವೂ ಹೊಸವೂ ಆಗಿರಲಿಲ್ಲ, ಗಂಭೀರ ಸ್ವರೂಪದವೂ ಆಗಿರಲಿಲ್ಲ. ಚಾಂಡಿ ಎಂಬ ಒಬ್ಬ ಪೊಲೀಸ್ ಕಮಿಷನರ್ ಇದ್ದರು. ಈತ ಕನ್ನಡ ಭಾಷಾ ಪ್ರೇಮಿಯಾಗಿದ್ದರು. ಇವರ ಸಹಕಾರ ರಾಮಮೂರ್ತಿಯವರಿಗೆ ಯಾವಾಗಲೂ ಇರುತ್ತಿತ್ತು. ಕನ್ನಡ ಚಳವಳಿ ಕಾನೂನಿನ ವ್ಯಾಪ್ತಿ ಮೀರಿ ಹೋಗದಷ್ಟು ಕಾಲ ತಮ್ಮ ಸಹಕಾರ ಚಳವಳಿಗೆ ಇದ್ದೇ ಇರುತ್ತದೆ ಎಂದು ಈತ ಯಾವಾಗಲೂ ಹೇಳುತ್ತಿದ್ದಂತೆ ನೆನಪು.

**೬. ರಾಮಮೂರ್ತಿಯವರ ಜೊತೆ ಇನ್ನೂ ಯಾರು ಯಾರು ಚಳವಳಿಗಳ ಖಾಯಂ ಭಾಗೀದಾರರಾಗಿರುತ್ತಿದ್ದರು?**

ಚಿಕ್ಕಣ್ಣ ಗಾರ್ಡನ್‌ನಲ್ಲಿ ನಮ್ಮ ಸ್ವಂತ ಮನೆ ಇತ್ತು. ಸಾಮಾನ್ಯವಾಗಿ ಚಳವಳಿಗಾರರೆಲ್ಲ ನಮ್ಮ ಮನೆಯಲ್ಲೇ ಸಭೆ ಸೇರುತ್ತಿದ್ದರು. ಅನಕೃ, ನಾಡಿಗೇರ ಕೃಷ್ಣರಾಯರು, ಕರ್ಲಮಂಗಲಂ ಶ್ರೀಕಂಠಯ್ಯ ಮುಂತಾದವರು ಇಂಥ ಸಭೆಗಳಲ್ಲಿ ಇದ್ದೇ ಇರುತ್ತಿದ್ದರು.

**೭. ಚಳವಳಿಗೆ ಸಂಬಂಧಿಸಿದ ಹಾಗೆ ನಿಮಗೆ ನೆನಪಿರುವ ಯಾವುದಾದರೂ ಘಟನೆ ಹೇಳಿ.**

ಹಿರಿಯೂರಿನಲ್ಲಿ ಮುಖ್ಯವೃತ್ತದಲ್ಲಿ ಹಾರಿಸುತ್ತಿದ್ದ ಡಿಎಂಕೆ ಬಾವುಟವನ್ನು ಇಳಿಸುವ ಧೈರ್ಯ ಯಾರಿಗೂ ಇರಲಿಲ್ಲ. ತಮಿಳರ ದಬ್ಬಾಳಿಕೆ ಹಾಗಿತ್ತು. ರಾಮಮೂರ್ತಿ ಒಬ್ಬರೇ ಅಲ್ಲಿಗೆ ಹೋಗಿ ಬಾವುಟ ಇಳಿಸಿ, ಕನ್ನಡ ಬಾವುಟವನ್ನು ಹಾರಿಸಿದರು. ಗಲಾಟೆಯಾಯಿತು. ಗಲಾಟೆಯಲ್ಲಿ ಕೆಲವು ಕನ್ನಡಿಗರು ರಾಮಮೂರ್ತಿಯವರ ಸಹಾಯಕ್ಕೆ ಬಂದರು. ಈ ಸಂಬಂಧ ಪೊಲೀಸರು ಅವರನ್ನೂ ಮತ್ತು ಅವರ ನೆರವಿಗೆ ಬಂದವರನ್ನೂ ಬಂಧಿಸಿ ಸೆಂಟ್ರಲ್ ಜೈಲಿಗೆ ಹಾಕಿದ್ದರು. ನಮಗೆ ಅವರನ್ನು ಯಾವ ಜೈಲಿನಲ್ಲಿ ಇಟ್ಟಿದ್ದಾರೆಂಬುದೂ ತಿಳಿಯದು. ಕೊನೆಗೆ ಅವರಿಂದಲೇ ಒಂದು ಪತ್ರ ಬಂತು. ಅದರಲ್ಲಿ ತಾವು ಸೆಂಟ್ರಲ್ ಜೈಲಿನಲ್ಲಿ ಇರುವುದಾಗಿಯೂ ತಮಗೆ ಅಲ್ಲಿ ಊಟ ತಿಂಡಿ ಕಾಲಕಾಲಕ್ಕೆ ಒದಗಿಸದಿರುವ ಪ್ರಯುಕ್ತ, ಕೊಂಚ ಬ್ರೆಡ್ ಅನ್ನು ಯಾರಾದರೊಬ್ಬರ ಬಳಿ ಕೊಟ್ಟು ಕಳುಹಿಸಬೇಕೆಂದು ಬರೆದಿದ್ದರು. ಜೈಲಿನಿಂದ ಪೊಲೀಸರು ತಮ್ಮನ್ನು ಬಿಡುಗಡೆಗೊಳಿಸಿದ ಮೇಲೆ ತಮ್ಮ ಜೊತೆ ಬಂಧಿಸಲ್ಪಟ್ಟಿದ್ದ ಎಲ್ಲರನ್ನೂ ಬಿಡಿಸಿಕೊಂಡು ಬಂದರು. ಅಲ್ಲದೆ ತಮ್ಮ ಬೆಂಬಲಕ್ಕೆ ನಿಂತವರನ್ನು ಬಿಡುಗಡೆಗೊಳಿಸದಿದ್ದಲ್ಲಿ ಸೆಂಟ್ರಲ್ ಜೈಲಿನೆದುರೇ ಪ್ರತಿಭಟನೆ ನಡೆಸುವುದಾಗಿ ಬೆದರಿಕೆ ಹಾಕಿದ್ದರು.

**೮. ಚಾಮರಾಜಪೇಟೆಯಲ್ಲಿ ನಡೆಯುತ್ತಿದ್ದ ರಾಮನವಮಿ ಉತ್ಸವಗಳಲ್ಲಿ ರಾಮಮೂರ್ತಿಯವರು ಗಲಾಟೆ ಎಬ್ಬಿಸಿದ್ದು ಯಾಕೆ?**

ಆ ಉತ್ಸವಕ್ಕೆ ಸಂಬಂಧಪಟ್ಟು ನಡೆಯುತ್ತಿದ್ದ ಸಂಗೀತ ಕಛೇರಿಗಳಲ್ಲಿ ಕನ್ನಡಿಗರಿಗೆ ಪ್ರಾತಿನಿಧ್ಯವೇ ಇರುತ್ತಿರಲಿಲ್ಲ. ತಮಿಳುನಾಡಿನ ಕರ್ನಾಟಕ ಶಾಸ್ತ್ರೀಯ ಸಂಗೀತಗಾರರನ್ನೇ

ದೊಡ್ಡ ಮಟ್ಟದಲ್ಲಿ ಆಗ ಕರೆಸುತ್ತಿದ್ದರು. ಎಂ ಎಸ್ ಸುಬ್ಬುಲಕ್ಷ್ಮಿಯಂಥವರು ಅವರಲ್ಲಿ ಮುಖ್ಯರು. ಆದರೆ ಈ ಸಂಗೀತ ಕಛೇರಿಗಳಲ್ಲಿ ಕರ್ನಾಟಕದವರಿಗೂ ಅವಕಾಶ ಕೊಡಲೇಬೇಕು ಎಂದು ರಾಮಮೂರ್ತಿಯವರು ಪ್ರತಿಭಟಿಸಿದ್ದರು. ಅದನ್ನು ಕಾರ್ಯಕ್ರಮ ಆಯೋಜಕರೂ ಒಪ್ಪಿಕೊಂಡು ಅಲ್ಲಿಂದ ಕರ್ನಾಟಕದ ಹಾಡುಗಾರರಿಗೆ ಅವಕಾಶಗಳು ದೊರಕಿದವು.

೯. ತಲಘಟ್ಟಪುರದ ಜಮೀನಿನಲ್ಲಿ ರಾಮಮೂರ್ತಿಯವರು ಕಾಲವಾಗಿದ್ದು. ಆ ಕುರಿತು..

ಆ ಜಮೀನನ್ನು ಖರೀದಿಸಿದ್ದವರು ನಮ್ಮ ಮಾವನವರು. ಅಂದರೆ ರಾಮಮೂರ್ತಿಯವರ ತಂದೆ. ಆ ಜಮೀನಿನಲ್ಲಿ ನಮ್ಮ ಯಜಮಾನರು ಟೊಮ್ಯಾಟೊ ಬೆಳೆಯುತ್ತಿದ್ದರು. ಅಲ್ಲಿಗೆ ಹೋಗಿ ಏನಾದರೂ ಬರೆದುಕೊಂಡು ಕೂರುತ್ತಿದ್ದರು. ಅವರಿಲ್ಲದಿದ್ದಾಗ ನಮ್ಮ ಮಗ ದಿನಕರ ತೋಟದ ವ್ಯವಹಾರಗಳ ಕಡೆ ನಿಗಾ ಇಡುತ್ತಿದ್ದ.

೧೯೬೭ರ ಕ್ರಿಸ್‌ಮಸ್‌ನ ಒಂದು ದಿನ. ತೋಟಕ್ಕೆ ನಮ್ಮ ಮಗನೊಂದಿಗೆ ಹೋಗಿದ್ದರು. ಅಲ್ಲಿ ಬಾವಿ ತೋಡಿಸುತ್ತಿದ್ದರು. ಬಾವಿಯಲ್ಲಿ ನೀರು ಬಂತು ಎಂದು ಕೆಲಸ ಮಾಡುತ್ತಿದ್ದ ಇಬ್ಬರು ಇವರನ್ನು ಕೂಗಿದ್ದಾರೆ. ಇವರು ಇಳಿದು ನೋಡುತ್ತಿರುವಾಗ ಬಾವಿಯ ಮಣ್ಣೆಲ್ಲ ಕುಸಿದು ಬಿದ್ದು, ಕೆಲಸದವರು, ನಮ್ಮ ಮಗ ಮತ್ತು ಅವನ ಸ್ನೇಹಿತ ಸೇರಿದಂತೆ ಎಲ್ಲರೂ ಜೀವ ಕಳೆದುಕೊಂಡ ದುರಂತ ನಡೆಯಿತು.

ಒಮ್ಮೆ ಇವರು ಯಾವುದೋ ಊರಿಗೆ ಹೋಗಿದ್ದಾಗ, ಟೊಮ್ಯಾಟೊ ಸಂಗ್ರಹಿಸಿ ಮಾರ್ಕೆಟ್‌ಗೆ ಕೊಂಡೊಯ್ದು ಮಾರಲೆಂದು ನಮ್ಮ ಮಗ ದಿನಕರ ತೋಟಕ್ಕೆ ಹೋಗಿದ್ದ. ಅವನು ಬಾವಿಯ ಹತ್ತಿರ ಹಾಯುತ್ತಿದ್ದಾಗ ಯಾರೋ ಅವನನ್ನು ಕೂಗಿ ಕರೆದಂತಾಗಿದೆ. ಅವನು ಅತ್ತಿತ್ತ ನೋಡಿದಾಗ ಯಾರೂ ಕಂಡಿಲ್ಲ. ಮತ್ತೊಮ್ಮೆ ಅವನನ್ನು ಕುರಿತು ಒಂದು ಧ್ವನಿ, "ನಿನಗೆ ಯಾರೂ ಕಾಣಿಸಲ್ಲ. ಸುಮ್ಮನೆ ಉತ್ತರ ಹೇಳು. ನಿನಗೆ ಏನು ಬೇಕೋ ಅದನ್ನು ಬೇಡಿಕೊ" ಎಂದು ಹೇಳಿತಂತೆ. ಅದಕ್ಕೆ ಇವನು "ಜಗತ್ತಿನಲ್ಲಿ ತುಂಬ ಜನ ದಿನವೂ ಕಷ್ಟಪಟ್ಟು ದುಡಿಯುತ್ತಿದ್ದಾರೆ. ಅವರ ದುಡಿಮೆಗೆ ತಕ್ಕ ಪ್ರತಿಫಲ ಸಿಗುತ್ತಿಲ್ಲ. ಅಂಥ ಜನರ ಕಷ್ಟಗಳೆಲ್ಲ ತೀರಬೇಕು" ಎಂದು ಕೇಳಿದನಂತೆ. ಅದಕ್ಕೆ ಆ ಧ್ವನಿ, "ಸರಿ, ನಿನ್ನಷ್ಟಕ್ಕೆ ನೀನು ಹೋಗು" ಎಂದು ಹೇಳಿತಂತೆ.

ಇವನು ಕಂಗಾಲಾಗಿ ಪಕ್ಕದ ತೋಟದವರ ಹತ್ತಿರ ತನ್ನ ಅನುಭವ ಹೇಳಿ ಅದರ ಬಗ್ಗೆ ವಿಚಾರಿಸಿದಾಗ, ಅವರು ನಿರಾತಂಕವಾಗಿ ಆ ಬಾವಿಯಲ್ಲಿ ಒಬ್ಬ ದೇವಿ ಇದ್ದಾಳೆಂದೂ, ಆಕೆ ಸತ್ಯವಂತರ ಜೊತೆ ಮಾತ್ರ ನುಡಿಯುತ್ತಾಳೆಂದೂ, ನೀನು ಸತ್ಯವಂತನೆಂದೂ ಹೇಳಿದ್ದಾರೆ. ಆದರೆ ನಾನಂತೂ ಇದನ್ನು ಕೇಳಿ ಹೆದರಿಕೊಂಡು ತೋಟ ಮಾರಿಬಿಡಲು ನಮ್ಮ ಯಜಮಾನರಿಗೆ ಒತ್ತಾಯಿಸಿದೆ. ಅವರು ಇದಕ್ಕೆಲ್ಲ ಕಿವಿಗೊಡದೆ ನನ್ನ ಮಾತನ್ನು ತಳ್ಳಿ ಹಾಕಿದರು.

ಆ ರೀತಿ ನೋಡುವುದಾದರೆ ಮಹಾ ಧೈರ್ಯಶಾಲಿ ಅವರು. ಯಾರಿಗೂ ಯಾವುದಕ್ಕೂ ಹೆದರುತ್ತಿರಲಿಲ್ಲ. ತಮ್ಮ ಹತ್ತನೆಯ ವಯಸ್ಸಿನಲ್ಲಿಯೇ ಮನೆಯವರ್ಯಾರಿಗೂ ತಿಳಿಸದೆ ವಿದುರಾಶ್ವತ್ಥದ ಹೋರಾಟಕ್ಕೆ ಹೋಗಿದ್ದಾಗಿ ಹೇಳುತ್ತಿದ್ದರು.

೧೦.ಅ.ನ.ಕೃ ಮತ್ತು ಇನ್ನಿತರೆ ಚಳವಳಿಗಾರರ ಜೊತೆ ರಾಮಮೂರ್ತಿಯವರಿಗೆ ಭಿನ್ನಾಭಿಪ್ರಾಯ ಉಂಟಾಗಿದ್ದು ಹೇಗೆ?

'ಕಾಂಚಿ ತಲೈವನ್' ಎಂಬ ಸಿನಿಮಾ ಬಿಡುಗಡೆಯಾಗಿದ್ದ ಸಂದರ್ಭದಲ್ಲಿ, ಆ ಚಿತ್ರದಲ್ಲಿ ಒಬ್ಬ ತಮಿಳು ಅರಸ ಕನ್ನಡದ ಬಾವುಟವನ್ನು ಕಾಲಲ್ಲಿ ಹೊಸಕುತ್ತಾ ಕನ್ನಡಿಗರನ್ನು ಕುರಿತು ಅವಹೇಳನಕಾರಿ ಮಾತುಗಳನ್ನು ಆಡಿರುವಂತೆ ಚಿತ್ರಿಸಲಾಗಿದೆ ಎನ್ನುವ ಕಾರಣಕ್ಕೆ ದೊಡ್ಡ ಗಲಾಟೆಯಾಯಿತು. ಪರಿಸ್ಥಿತಿ ವಿಕೋಪಕ್ಕೆ ತಿರುಗಿ ಬೆಂಗಳೂರಿನಲ್ಲಿ ತಮಿಳರ ಮೇಲಿನ ಹಿಂಸಾಚಾರಕ್ಕೂ ಅದು ಕಾರಣವಾಯಿತು. ಚಳವಳಿಗಾರರಿಗೆ ಈ ಮಟ್ಟಿನ ಉದ್ರೇಕ ಸಲ್ಲದು ಎಂದು ಅನಕೃ ಅವರು ರಾಮಮೂರ್ತಿಯವರ ಹತ್ತಿರ ವಾದಿಸಿದರು.

ಆದರೆ ಕನ್ನಡಾಭಿಮಾನಿಗಳನ್ನು ತಡೆಯುವುದು ತಮ್ಮಿಂದ ಸಾಧ್ಯವಿಲ್ಲ, ಅವರ ಕನ್ನಡ ಪ್ರೀತಿಗೆ, ಅದರ ಅಭಿವ್ಯಕ್ತಿಗೆ ಕಡಿವಾಣ ಹಾಕುವುದು ತಮ್ಮಿಂದ ಸಾಧ್ಯವಿಲ್ಲ ಎಂದು ರಾಮಮೂರ್ತಿಯವರು ಹೇಳಿದರು. ಇದು ಅನಕೃ ಅವರಿಗೆ ಸಮಂಜಸವಾಗಿ ಕಾಣಲಿಲ್ಲವೇನೋ. ಅಲ್ಲಿಂದ ಸ್ವಲ್ಪ ಮಟ್ಟಿನ ವಿರಸ ಇವರಿಬ್ಬರ ನಡುವೆ ಶುರುವಾಯಿತು. ವೈಯಕ್ತಿಕ ಒಡನಾಟಕ್ಕೇನೂ ಇದರಿಂದ ಊನವಾಗದಿದ್ದರೂ ಸಾರ್ವಜನಿಕವಾಗಿ ಚಳವಳಿಗಳಲ್ಲಿ ಇಬ್ಬರೂ ಜೊತೆಯಲ್ಲಿ ಭಾಗವಹಿಸುವುದು ಕಡಿಮೆಯಾಯಿತು. ಅನಕೃ ನಮ್ಮ ಕುಟುಂಬದ ಆಪ್ತರಲ್ಲೊಬ್ಬರಾಗಿದ್ದವರು. ಆದರೆ ವಿಪರ್ಯಾಸವೆಂದರೆ ಈ ಹೊತ್ತು ನಮ್ಮ ಕುಟುಂಬದ ಜೊತೆ ಅವರ ಕುಟುಂಬಕ್ಕೆ ಸಂಪರ್ಕ ಅಷ್ಟಾಗಿ ಇಲ್ಲ.

೧೧. ಉಳಿದ ಚಳವಳಿಗಾರರ ಜೊತೆ ಭಿನ್ನಾಭಿಪ್ರಾಯ ಉಂಟಾಗಿದ್ದು...

ವಾಟಾಳ್ ನಾಗರಾಜ್ ಇವರ ಜೊತೆಗೂ ಇದ್ದರು. ಆದರೆ ವಾಟಾಳರು ಕನ್ನಡ ಚಳವಳಿ ಪಕ್ಷ ಕಟ್ಟಿ, ಕನ್ನಡ ಬಾವುಟದ ಸ್ವರೂಪ ತಾವು ಇಚ್ಛಿಸಿದಂತೆ ಇರಬೇಕೆಂದು ಹಟ ಮಾಡಿದಾಗ ರಾಮಮೂರ್ತಿಯವರು ಆಕ್ಷೇಪಿಸಿದರು. ಅಲ್ಲಿಂದ ವಾಟಾಳರ ಜೊತೆಗೂ ಭಿನ್ನಾಭಿಪ್ರಾಯ ಶುರುವಾಯ್ತು.

೧೨. ಈಗ ಉಳಿದಿರುವ ಅವರ ಕುಟುಂಬದ ಸದಸ್ಯರು ಯಾರು ಯಾರು?

(ಈ ಪ್ರಶ್ನೆಗೆ ಅವರ ಸೋದರಿ ಸಾವಿತ್ರಿ ವಿಶ್ವನಾಥ್ ಅವರು ಉತ್ತರಿಸಿದರು)

ನಾವು ಒಟ್ಟು ಒಂಬತ್ತು ಜನ ಮಕ್ಕಳು ನಮ್ಮ ತಂದೆ ತಾಯಿಯವರಿಗೆ. ಮೊದಲನೆಯವರು ನಮ್ಮಣ್ಣ ರಾಮಮೂರ್ತಿ. ಕೊನೆಯವಳು, ಅಂದರೆ ಒಂಬತ್ತನೆಯವಳು ನಾನು. ನಮ್ಮ ಅಣ್ಣಂದಿರಾದ ಚಂದ್ರಮೌಳಿ, ನರಸಿಂಹಮೂರ್ತಿ ಮತ್ತು ನಮ್ಮ ಅಕ್ಕ ಸೀತಾ ಬೆಂಗಳೂರಿನಲ್ಲೇ ಇದ್ದಾರೆ. ಬೆಂಗಳೂರಿನಲ್ಲಿ, ಒಟ್ಟಾರೆ ಕರ್ನಾಟಕದಲ್ಲಿ ಈ


ಮಟ್ಟದ ಕನ್ನಡದ ವಾತಾವರಣ ಮೂಡಲು ಕಾರಣರಾದವರಲ್ಲಿ ನಮ್ಮ ಕುಟುಂಬದ ಒಬ್ಬ ವ್ಯಕ್ತಿಯೂ ಕಾರಣ ಎಂಬುದು ನಮಗೆಲ್ಲ ಹೆಮ್ಮೆ.

೧೩. ನಿಮಗನಿಸುವಂತೆ ನಿಮ್ಮ ಅಣ್ಣನವರ ದೊಡ್ಡ ಗುಣ ಯಾವುದು?

(ಈ ಪ್ರಶ್ನೆಗೆ ಅವರ ತಂಗಿ ಉತ್ತರಿಸಿದರು)

ಒಂದು ಹೇಳಬಹುದು–ಆತ ಸ್ವಾರ್ಥಿಯಂತೂ ಅಲ್ಲ.

— o —



ಮ. ರಾಮಮೂರ್ತಿ

ಫೋಟೋಕೃಪೆ : ಸಿ.ಆರ್.ವೆಂಕಟೇಶ್



ಶ್ರೀಮತಿ ಕಮಲಮ್ಮ ಮ. ರಾಮಮೂರ್ತಿ

ಫೋಟೊ : ಸಿ.ಆರ್.ಗೋವಿಂದರಾಜು